ಉಪಾಧ್ಯಕ್ಷರು: ಮಂಡಿಸಲಾಯಿತು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು): ಕಾಗದ ಪತ್ರಗಳನ್ನು ಯಾರಾದರೂ ಮಂತ್ರಿಗಳು ಮಂಡಿಸಿದರೆ ನಮ್ಮ ಆಕ್ಷೇಪಣೆ ಇಲ್ಲ. ಆದರೆ ಸಂಬಂಧಪಟ್ಟವರು ಬಂದಿದ್ದಾಗ, ಹೇಳಿಯಾದರೂ ಹೋಗಬೇಕಲ್ಲಾ. ಸಂಬಂಧಪಟ್ಟ ಮಂತ್ರಿಗಳು ಇಲ್ಲದೇ ಇರತಕ್ಕಂಥ ಸಂದರ್ಭದಲ್ಲಿ ಬೇರೆಯವರು ಹೇಳಲಿ, ಆದರೆ ಕೆಲವರು ಇದ್ದರೂ ಸಹ ಹೊರಕ್ಕೆ ಎದ್ದು ಹೋಗಿರುತ್ತಾರೆ.

3. ವರದಿಯನ್ನು ಒಪ್ಪಿಸುವುದು

ಶ್ರೀ ಪಿ.ಎಸ್.ಕೌಜಲಗಿ (ಅಧ್ಯಕ್ಷರು, ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ): ಮಾನ್ಯ ಉಪಾಧ್ಯಕ್ಷರೆ, ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ಅಧ್ಯಕ್ಷನಾದ ನಾನು, ನೀರಾವರಿ ಇಲಾಖೆಗೆ ಸಂಬಂಧಪಟ್ಟ ಹಾಗೆ ಸಮಿತಿಯ 35ನೇ ವರದಿಯನ್ನು ಈ ದಿನ ಸದನದಲ್ಲಿ ಮಂಡಿಸುತ್ತೇನೆ.

ಉಪಾಧ್ಯಕ್ಷರು: ವರದಿಯನ್ನೊಪ್ಪಿಸಲಾಯಿತು.

4. ಉಪಾಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

(ಅ) ರಾಜ್ಯದಲ್ಲಿ ಕುಡಿಯುವ ನೀರಿನ ಸಮಸ್ಯೆ .

ಶ್ರೀ ಬಿ.ಎಸ್.ಯಡಿಯೂರಪ್ಪ: ಕುಡಿಯುವ ನೀರಿನ ಬಗ್ಗೆ ಮತ್ತು ಕೃಷ್ಣಾ ಬೇಸಿನ್ ವಿಷಯದ ಬಗ್ಗೆ ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಲು ಬರೆದುಕೊಟ್ಟಿದ್ದೇವೆ.

ಉಪಾಧ್ಯಕ್ಷರು: ಶೂನ್ಯ ವೇಳೆಯಲ್ಲಿ ಎರಡೆರಡು ನಿಮಿಷ ಮಾತನಾಡುವುದಾದರೆ ಶೂನ್ಯ ವೇಳೆಯನ್ನು ತೆಗೆದುಕೊಳ್ಳೋಣ.

ಶ್ರೀ ಬಿ.ಎಸ್.ಯಡಿಯೂರಪ್ಪ: ನಿಮಗೆ ಅಗತ್ಯ ಇದ್ದರೆ ಕೊಡಿ, ಇಲ್ಲದಿದ್ದರೆ ಬೇಡ. ಇವತ್ತು ಬಾಗಲಕೋಟೆಯಲ್ಲಿ, ಮಾನ್ಯ ಬಿ.ಎಸ್.ಪಾಟೀಲ್ ಮನಗೋಳಿ ಮತ್ತು ಜೆ.ಟಿ.ಪಾಟೀಲರು, ಆಮರಣಾಂತರ ಉಪವಾಸ ಸತ್ಯಾಗ್ರಹವನ್ನು ಮಾಡುತ್ತಿದ್ದಾರೆ. ಇದನ್ನು ನಮ್ಮ ಸದನದಲ್ಲಿ ಪ್ರಸ್ತಾಪ ಮಾಡದೇ ಇದ್ದರೆ ನಮ್ಮ ಕರ್ತವ್ಯಕ್ಕೆ ಲೋಪ ಆಗುವುದಿಲ್ಲವೆ?

ಶ್ರೀ ರಾಜಶೇಖರ್ ವಿ.ಶೀಲವಂತ: ನಮ್ಮ ಜಿಲ್ಲೆಯಲ್ಲಿ ಇದು ಬಹಳ ಗಂಭೀರವಾದ ಸಮಸ್ಯೆಯಾಗಿದೆ, ಆದ್ದರಿಂದ ದಯವಿಟ್ಟು ಚರ್ಚೆಗೆ ಅವಕಾಶ ಮಾಡಿಕೊಡಬೇಕು.

ಉಪಾಧ್ಯಕ್ಷರು: ಎರಡು ವಿಷಯದ ಬಗ್ಗೆ ಚರ್ಚೆಗೆ ತೆಗೆದುಕೊಳ್ಳೋಣ.

ಉಪಾಧ್ಯಕ್ಷರು: ಒಬ್ಬೊಬ್ಬರು ಕೇಳಿದರೆ ಉತ್ತರವನ್ನು ಕೊಡಿಸಬಹುದು. 20 ಮಂದಿ ಒಂದೇ ಸಾರಿ ಎದ್ದು ನಿಂತರೆ ಯಾರಿಗೆ ಉತ್ತರ ಕೊಡಿಸಬೇಕು?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಾವು ಮೊದಲು ಈ ವಿಷಯವನ್ನು ಪ್ರಸ್ತಾಪ ಮಾಡಿದ್ದೇವೆ, ನಂತರ ಬೇರೆಯವರು ಮಾತನಾಡಲಿ. ಹತ್ತತ್ತು ಜನ ಒಂದೇ ಸಾರಿ ಎದ್ದು ನಿಂತು ಮಾತನಾಡಿದರೆ ಏನು ಮಾಡಬೇಕು?

ಉಪಾಧ್ಯಕ್ಷರು: ಸವನದಲ್ಲಿ ಸಭಾನಾಯಕರು ಮತ್ತು ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಎಲ್ಲರೂ ಗೌರವದಿಂದ ವರ್ತಿಸಬೇಕು.

(4) ಉಪಾಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು.

(ಅ) ರಾಜ್ಯದಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗ್ಗೆ

+ ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು): ಸನ್ಮಾನ್ಯ ಉಪಾಧ್ಯಕ್ಷರೆ, ಈ ಪ್ರಶ್ನೆಯನ್ನು ಸುಮಾರು ಎರಡು-ಮೂರು ದಿವಸಗಳ ಹಿಂದೆಯೇ, ನಾವೆಲ್ಲರೂ ಪ್ರಸ್ತಾಪ ಮಾಡಬೇಕೆಂದು, ಬಹಳ ಗಂಭೀರವಾದಂಥ ವಿಚಾರ ನಡೆದಿತ್ತು. ಆದರೆ ಕಾರಣಾಂತರದಿಂದ ಬೇರೆ ವಿಷಯಗಳು ಬಂತು. ಚರ್ಚೆಗೆ ಒಂದು ದಿವಸವಾದರೂ ಅವಕಾಶ ಮಾಡಿಕೊಡಬೇಕಾಗುತ್ತದೆ. ಪ್ರತಿ ದಿನ ಗಮನ ಸೆಳೆಯುವ ಸೂಚನೆ ತರುತ್ತಾರೆ, ಧರಣಿ ಮತ್ತು ಸಭಾತ್ಯಾಗ ಮಾಡತಕ್ಕಂಥ ವಿಚಾರ ಒಂದು ಕಡೆ ಇದ್ದರೆ, ಇನ್ನೊಂದು ಕಡೆ, ಇಡೀ ರಾಜ್ಯದಲ್ಲಿ ಕುಡಿಯುವ ನೀರಿನ ಬವಣೆಯನ್ನು ನಾವು ನೋಡಿದಾಗ, ಕೇಳಿದಾಗ, ಖಂಡಿತವಾಗಿಯೂ ಇವತ್ತು ಸರ್ಕಾರ ಕುಡಿಯುವ ನೀರನ್ನು ಪೂರೈಸುವುದರಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ ಎನ್ನತಕ್ಕಂಥದ್ದನ್ನು ತಮ್ಮ ಗಮನಕ್ಕೆ ತರುತ್ತೇನೆ. ಅದು ಹೇಗಿದೆ ಎಂದರೆ, ತಾವೂ ಕೂಡ ಪತ್ರಿಕೆಯಲ್ಲಿ ನೋಡುತ್ತಿದ್ದೀರಿ ಮತ್ತು ಅನೇಕ ಕಡೆ ಪ್ರೊಟೆಸ್ಟ್ ಕೂಡ ತಾವು ನೋಡಿದ್ದೀರಿ. ಇವತ್ತಿನದಿವಸ ಅನೇಕ ಹಳ್ಳಿಗಳಲ್ಲಿ, ಪಟ್ಟಣಗಳಲ್ಲಿ ಹಾಗೂ ನಗರಪ್ರದೇಶಗಳಲ್ಲಿ ನೀರಿಗಾಗಿ ಸಾಲು ನಿಂತಿರುವುದು ತಾವು ಕಂಡಿದ್ದೀರಿ ಮತ್ತು ಪತ್ರಿಕೆಗಳಲ್ಲಿಯೂ ಕೂಡ ಓದಿದ್ದೀರಿ. ಇಂಥ ಒಂದು ಗಂಭೀರವಾದ ಪರಿಸ್ಥಿತಿಯಲ್ಲಿ ಇವತ್ತು ನಾವು ಇದ್ದೇವೆ. ಇವತ್ತು ಕೇವಲ ಒಂದು ಅಥವಾ ಎರಡು ಹಳ್ಳಿಗಳಲ್ಲಿ ಇರತಕ್ಕಂಥ ಪ್ರಶ್ನೆ ಅಲ್ಲ. ಸುಮಾರು ಕರ್ನಾಟಕ ರಾಜ್ಯದಲ್ಲಿರತಕ್ಕಂಥ 6 ಮುಖ್ಯ ಕಾರ್ಪೊರೇಷನ್‌ನಲ್ಲಿ ಈ ಪ್ರಶ್ನೆ ಇದೆ. ಸುಮಾರು 40 ಸಿಟಿ ಮುನಿಸಿಪಾಲಿಟಿಯಲ್ಲಿಯೂ ಕೂಡ ಕುಡಿಯುವ ನೀರಿನ ಪ್ರಶ್ನೆ ಇದೆ ಹಾಗೆಯೇ, ಸುಮಾರು 81 ಟೌನ್ ಮುನಿಸಿಪಾಲಿಟಿಗಳಲ್ಲಿಯೂ ಕೂಡ ಈ ಪ್ರಶ್ನೆ ಇದೆ ಮತ್ತು 88 ಟೌನ್ ಪಂಚಾಯತ್‌ನಲ್ಲೂ ಕುಡಿಯುವ ನೀರಿನ ಸಮಸ್ಯೆ ಇದೆ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಗ್ರಾಮೀಣಾಭಿವೃದ್ಧಿ ಇಲಾಖೆಗೆ ಸಂಬಂಧಪಟ್ಟ

ಡಿಮಾಂಡ್ಸ್ ಇದೆ ಇದು ಆದ ಮೇಲೆ ನಗರಾಭಿವೃದ್ಧಿ ಡಿಮಾಂಡ್ಸ್ ಇದೆ, ಕುಡಿಯುವ ನೀರಿಗೆ ಕೆಲವು ಕಡೆಗಳಲ್ಲಿ ಬೋರ್‌ವೆಲ್ ನೀರಿನ ಮಟ್ಟ ಕೆಳಗಡೆ ಹೋಗಿರುವುದರಿಂದ ಸಮಸ್ಯೆ ಇರತಕ್ಕಂಥದ್ದು ನಿಜ. ಇದಕ್ಕೆ ಹಣಕಾಸಿನ ಸಮಸ್ಯೆ ಇಲ್ಲ. ಇಂತಹ ಸನ್ನಿವೇಶದಲ್ಲಿ, ಡಿಮಾಂಡ್ಸ್ ಸಂದರ್ಭದಲ್ಲಿ ತಾವು ಇದನ್ನು ಪ್ರಸ್ತಾಪ ಮಾಡಬಹುದು.

ಶ್ರೀ ಕೆ.ಎಸ್.ಈಶ್ವರಪ್ಪ (ಶಿವಮೊಗ್ಗ): 1990ನೇ ಇಸ್ವಿಯಲ್ಲಿ ಅನೇಕ ನಗರಗಳಲ್ಲಿ ಯೋಜನೆ ಪ್ರಾರಂಭ ಆಯಿತು. ನಗರಾಭಿವೃದ್ಧಿ ಇಲಾಖೆ ಅದು ಒಂದೇ ಯೋಜನೆ ಅಲ್ಲ. ಆ ಯೋಜನೆಗೆ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿ ಯೋಜನೆ ಆಯಿತು, ಆದರೆ ಅದು ಪೂರ್ಣ ಆಗಿಲ್ಲ. ಅದನ್ನು ನಾವು ಎಲ್ಲಿ ಪ್ರಸ್ತಾಪ ಮಾಡಬೇಕು ಸ್ವಾಮಿ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅವರ ಗಮನಕ್ಕೆ ನಾನು ತರುತ್ತೇನೆ. ನಾವು ರೂರಲ್ ಡೆವಲಪ್‌ಮೆಂಟ್ ಬಗ್ಗೆ ಮಾತನಾಡುತ್ತಾ ಇಲ್ಲ. ಕೇವಲ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಮಾತನಾಡುತ್ತಿದ್ದೇನೆ. 215 ಪಟ್ಟಣಗಳಲ್ಲಿ 56,682 ಹಳ್ಳಿಗಳಲ್ಲಿ ಬೋರ್‌ವೆಲ್ ಮತ್ತು ಬೇರೆ ರೀತಿಯ ಬೋರ್‌ವೆಲ್‌ಗಳು ಇವೆ.

ಶ್ರೀ ಪಿ.ಜಿ.ಆರ್.ಸಿಂಧ್ಯ: ನೀರಿನ ಸಮಸ್ಯೆ ಇದೆ, ಹಣವನ್ನು ಬಿಡುಗಡೆ ಮಾಡುತ್ತೇವೆ ನಿಜ. ಉಪಾಧ್ಯಕ್ಷರೇ, ನಾನು ತಮಗೆ ನಿವೇದನೆ ಮಾಡಿಕೊಳ್ಳುತ್ತೇನೆ. ಬಾಗಲ ಕೋಟೆಯಲ್ಲಿ ರೈತರ ಸಮಸ್ಯೆ ಇದೆ, ಅವರು ಚಳುವಳಿ ಮಾಡುತ್ತಿದ್ದಾರೆ. ಆ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಅದರ ಬಗ್ಗೆ ಚರ್ಚೆ ಮಾಡುವುದಾದರೆ ನಾನು ಒಪ್ಪಿಕೊಳ್ಳುತ್ತೇನೆ. ಸರ್ಕಾರ ತಕ್ಷಣ ಅದರ ಬಗ್ಗೆ ಕ್ರಮ ಕೈಗೊಳ್ಳಬೇಕು ಎನ್ನುವುದರ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರುಗಳು, ಸದಸ್ಯರುಗಳು ಸಲಹೆ ಕೊಡಲಿ ಸರ್ಕಾರ; ಅದನ್ನು ಕಾರ್ಯಗತ ಮಾಡುವುದಕ್ಕೆ ಪ್ರಯತ್ನ ಮಾಡುತ್ತದೆ. ಕುಡಿಯುವ ನೀರಿನ ಜ್ವಲಂತ ಸಮಸ್ಯೆ ಇದೆ, ಇದರ ಬಗ್ಗೆ ಸರ್ಕಾರದ ಎರಡನೆ ಅಭಿಪ್ರಾಯ ಇಲ್ಲ. ಮತ್ತೆ ಸರ್ಕಾರದ ಹತ್ತಿರ ಇದಕ್ಕೋಸ್ಕರ ಹಣಕಾಸಿನ ಕೊರತೆ ಇಲ್ಲ. ಮಾನ್ಯ ಈಶ್ವರಪ್ಪನವರು ಹೇಳಿರುವುದು ನಿಜವಾದ ಸಂಗತಿ. 1989 ಮತ್ತು 1990ರಲ್ಲಿ ಹಿಂದೆ ಆಗಿರತಕ್ಕಂಥದ್ದು ಕೆಲವು ಪಟ್ಟಣ ಪ್ರದೇಶಗಳಲ್ಲಿ ಯೋಜನೆಗಳು ಮುಗಿಯದೆ ಇರತಕ್ಕಂಥದ್ದು ಸತ್ಯಾಂಶ ಇದೆ. ಆದರೆ ಸದನದ ಸಮಯದ ದೃಷ್ಟಿಯಿಂದ ಡಿಮಾಂಡ್ಸ್‌ಗಳನ್ನು ಈ ವಾರದಲ್ಲಿ ತೆಗೆದುಕೊಳ್ಳುವುದರಿಂದ ಆ ಸಂದರ್ಭದಲ್ಲಿ ನೀವು ಇದನ್ನು ಚರ್ಚೆ ಮಾಡಬೇಕು.

ಉಪಾಧ್ಯಕ್ಷರು: ತಾವು ಏನು ಹೇಳಿದಿರಿ, ನಾನೂ ಅದನ್ನೇ ವಿರೋಧ ಪಕ್ಷದ ನಾಯಕರಿಗೆ ಹೇಳಿದೆ. ಅವರು ನನ್ನ ಚೆಂಬರಿಗೆ ಬಂದಾಗ ಈ ವಿಷಯವನ್ನೇ ಹೇಳಿದ್ದೇನೆ. ಈಗಾಗಲೇ ಗ್ರಾಮೀಣಾಭಿವೃದ್ಧಿ ವಿಷಯ ತೆಗೆದುಕೊಳ್ಳುವುದರಿಂದ ಅದರಲ್ಲಿ ಚರ್ಚೆ ಮಾಡಿ ಎಂದು ಹೇಳಿದೆ. ಕುಡಿಯುವ ನೀರಿನ ಸಮಸ್ಯೆ ಬಹಳ ಇದೆ,

ಹೆಚ್ಚು ಸಮಯವನ್ನು ತೆಗೆದುಕೊಳ್ಳದೆ ಎರಡೆರಡು ನಿಮಿಷಗಳನ್ನು ತೆಗೆದುಕೊಂಡು ಮಾತನಾಡಿ ಮುಗಿಸುತ್ತೇವೆ, ಅವಕಾಶ ಕೊಡಿ ಎಂದು ಕೇಳಿದಾಗ, ಅವಕಾಶವನ್ನು ಕೊಟ್ಟಿದ್ದೇನೆ, ಬೇಗ ಮಾತನಾಡಿ ಮುಗಿಸಬೇಕು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಯಾವಾಗ ಯಾವ ವಿಷಯವನ್ನು ಪ್ರಸ್ತಾಪ ಮಾಡಬೇಕು ಅದು ನಮಗೆ ಗೊತ್ತಿದೆ. ಮೊನ್ನೆ ಮುಳುಗಡೆ ವಿಷಯದ ಬಗ್ಗೆ ಸಾಕಷ್ಟು ಚರ್ಚೆ ನಡೆಯಿತು. ಕೆಲವೊಂದು ನಾಳೆ ಪ್ರಸ್ತಾಪ ಮಾಡಿ ಎಂದು ಹೇಳಬಹುದು. ನೀರಾವರಿ ಇಲಾಖೆಗೆ ಸಂಬಂಧಪಟ್ಟದ್ದು ಬರುತ್ತದೆ ಅವಾಗ ಪ್ರಸ್ತಾಪ ಮಾಡಬಹುದೆಂದು ಹೇಳಬಹುದು. ಕಂದಾಯ ಇಲಾಖೆ ವಿಷಯ ಬರುತ್ತದೆ ಅವಾಗ ಅದನ್ನು ಪ್ರಸ್ತಾಪ ಮಾಡಿ ಎಂದು ಹೇಳಬಹುದು. ಪ್ರತಿಯೊಂದಕ್ಕೂ ವಿಷಯ ಇದೆ, ಇನ್ನು ಹಿಂದಕ್ಕೆ ಹೋದಾಗ, ರೀಹೆಬಿಲಿಟೇಷನ್ ಬಗ್ಗೆ ಪ್ರಸ್ತಾಪ ಮಾಡಬಹುದೆಂದು ಹೇಳಬಹುದು. ಅದಕ್ಕಾಗಿ ನಾನು ಪ್ರಸ್ತಾಪ ಮಾಡುತ್ತಿದ್ದೇನೆ. ಇದು ಬಹಳ ಮಹತ್ವವಾದ ವಿಷಯ ಇದೆ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಈ ಸದನದ ಸಮಯದ ಹಿತದೃಷ್ಟಿಯಿಂದ ನಮ್ಮ ಸದಸ್ಯರು ಕೂಡ ಚರ್ಚೆಯಲ್ಲಿ ಭಾಗವಹಿಸಬೇಕಾಗುತ್ತದೆ, ಇದರ ಬಗ್ಗೆ ಮಾತನಾಡಬೇಕಾಗುತ್ತದೆ. ನಾವು ಡಿಮಾಂಡ್ಸ್‌ನ್ನು 14ನೇ ತಾರೀಖಿನೊಳಗೆ ಮುಗಿಸಬೇಕೆಂದು ಬಿಜಿನೆಸ್ ಅಡವೈಜರ್ ಕಮಿಟಿಯಲ್ಲಿ ಹಾಕಿಕೊಂಡಿದ್ದೇವೆ. ಇದರ ಹಿನ್ನಲೆಯಲ್ಲಿ ನಾನು ನನ್ನ ಸಲಹೆಯನ್ನು ಕೊಟ್ಟಿದ್ದೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಈಗ ಆ ಮುಳುಗಡೆ ವಿಷಯದ ಬಗ್ಗೆ ತೆಗೆದುಕೊಳ್ಳೋಣ. ಆಮೇಲೆ ಇದರ ಬಗ್ಗೆ ನಾಗೇಗೌಡರು ಉತ್ತರವನ್ನು ಕೊಡುತ್ತಾರೆ. ಅವರು ಉತ್ತರವನ್ನು ಕೊಡುವುದಕ್ಕೆ ತಯಾರಾಗಿದ್ದಾರೆ.

ಉಪಾಧ್ಯಕ್ಷರು: ಸಿಂಧ್ಯರವರು ಸಂಪೂರ್ಣ ವಾಸ್ತವಾಂಶದ ಮಾತನ್ನು ಹೇಳಿದ್ದಾರೆ. ಆದರೂ ನಾನೂ ಕೂಡ ತಮಗೆ ಹೇಳಿದೆ, ಗ್ರಾಮೀಣಾಭಿವೃದ್ಧಿ ವಿಷಯ ಇಲ್ಲಿ ಬರುವುದರಿಂದ ಸಾಕಷ್ಟು ಸದಸ್ಯರುಗಳು ಇದರಲ್ಲಿ ಚರ್ಚೆ ಮಾಡಬಹುದು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಕುಡಿಯುವ ನೀರಿನ ಸಮಸ್ಯೆ ಇಲ್ಲ; ನಾವು ಎಲ್ಲಾ ಬಗೆಹರಿಸಿದ್ದೇವೆಂದು ಹೇಳಿದರೆ ನಾನು ಅದರ ಬಗ್ಗೆ ಮಾತನಾಡುವುದಿಲ್ಲ. ನೀವು ಇದರ ಬಗ್ಗೆ ಏನು ಹೇಳುತ್ತಿರೋ ಹೇಳಿ?

(ಗೊಂದಲ)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಯಾವ ವಿಷಯಕ್ಕೆ ಎಷ್ಟು ಮಹತ್ವ ಕೊಡಬೇಕು ಅದಕ್ಕೆ ಕೊಡಿ.

ಶ್ರೀ ವಾಟಾಳ್ ನಾಗರಾಜ್: ಬೇಡಿಕೆ ವಿಷಯದ ಬಗ್ಗೆ ಚರ್ಚೆ ಮಾಡುವುದು ಅದು ಬೇರೆ ವಿಷಯ. ಇಡೀ ರಾಜ್ಯದಲ್ಲಿ ಕುಡಿಯುವ ನೀರಿನ ಬಗ್ಗೆ ಭೀಕರವಾದ ಪರಿಸ್ಥಿತಿ ನಿರ್ಮಾಣವಾಗಿದೆ. ಪಟ್ಟಣ ಮತ್ತು ಹಳ್ಳಿಗಳಲ್ಲಿ ಸಾಕಷ್ಟು ಸಮಸ್ಯೆ ಇದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಧ್ಯದಲ್ಲಿ ಒಂದೊಂದು ಸಲ ಸಿಂಧ್ಯರವರು ಬಸ್‌ನ್ನು ಬಿಡುತ್ತಾರೆ. ಎಲ್ಲರೂ ರೈಲ್ ಬಿಡುತ್ತಾರೆ, ಆದರೆ ಇವರು ಬಸ್ಸು ಬಿಡುತ್ತಾರೆ. ಸುಮಾರು ಇವತ್ತು 27 ಸಾವಿರ ಕಂದಾಯ ಹಳ್ಳಿಗಳಲ್ಲಿ ಮತ್ತು 29 ಸಾವಿರ ಅತೀ ಹಿಂದುಳಿದ ಹಳ್ಳಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ. ಇದಕ್ಕಾಗಿ ಸರ್ಕಾರದ ವ್ಯವಸ್ಥೆ ಏನು ಇದೆ? ಇಲ್ಲಿಯವರೆಗೆ ಎಲ್ಲಾ ಸರ್ಕಾರಗಳು ಸೇರಿ ನಮ್ಮ ರಾಜ್ಯದಲ್ಲಿ 1,56,603 ಬೋರ್‌ವೆಲ್‌ಗಳನ್ನು ಹಾಕಿಸಿವೆ. ಸುಮಾರು 12,397 ಮಿನಿ ವಾಟರ್ ಸಪ್ಲೈ ಇವೆ. 11,506 ಪೈಪ್‌ಲೈನ್ ವಾಟರ್ ಸಪ್ಲೈ ಇದೆ. ಇಷ್ಟೊಂದು ವ್ಯವಸ್ಥೆ ಇದ್ದರೂ ಕೂಡ ಇವತ್ತು ನಾವು ಪೂರ್ಣವಾಗಿ ಎಲ್ಲಾ ಹಳ್ಳಿಯ ಜನರಿಗೆ ಶಾಶ್ವತವಾಗಿ ನೀರು ಕೊಡುವುದರಲ್ಲಿ ವಿಫಲರಾಗುತ್ತಿದ್ದೇವೆ. ಅದಕ್ಕೆ ಏನು ಮಾಡಬೇಕು ಎನ್ನುವುದು ಸರ್ಕಾರದವರಿಗೆ ಗೊತ್ತಿದೆ. ಸ್ಕೇರ್‌ಸಿಟಿ ಇಡೀ ರಾಜ್ಯದಲ್ಲಿ ಇದೆ ಎಂದಾಗ, ಡ್ರೌಟ್ ಕಂಡಿಷನ್ ಪ್ರಿವೈಲಿಂಗ್ ಈ ರಾಜ್ಯದಲ್ಲಿ ಇದೆ ಎಂದಾಗ ಸರ್ಕಾರದವರು ಮುಂಜಾಗ್ರತೆ ವಹಿಸಿಕೊಂಡು ಈ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಆದರೆ ಕುಡಿಯುವ ನೀರಿನ ವ್ಯವಸ್ಥೆ ಬಗ್ಗೆ ಯಾವ ಚಿಂತನೆ ಮಾಡಿಲ್ಲ. ಮೊನ್ನೆ ಸೆಂಟ್ರಲ್ ಟೀಮ್ ಬಂದಾಗ ಕುಡಿಯುವ ನೀರಿಗಾಗಿ ಮತ್ತು ಆ ಕೆಲಸಕ್ಕಾಗಿ ಎಂದು ಹೇಳಿ 400 ಕೋಟಿ ರೂಪಾಯಿಗಳ ಮೆಮೊರಾಂಡಮನ್ನು ಅವರು ಬೆಂಗಳೂರಿಗೆ ಬಂದಾಗ ಒಪ್ಪಿಸಿದ್ದಾರೆ. ಅಂದರೆ ಎಷ್ಟರ ಮಟ್ಟಿಗೆ ಇವರು ಜಾಗ್ರತರಾಗಿದ್ದಾರೆ ಎಂಬುದಕ್ಕೆ ಈ ಒಂದು ಉದಾಹರಣೆ ತೋರಿಸುತ್ತದೆ, ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ಅವರು ಹೇಳಬಹುದು: ನಾವು ಹೋದವರ್ಷಕ್ಕಿಂತ ಈ ವರ್ಷ ಜಾಸ್ತಿ ಮಾಡುತ್ತೇವೆ, ಹಿಂದೆ ಹೆಚ್ಚು ಮಾಡಿದ್ದೇವೆಂದೂ ಕೂಡ ಹೇಳಬಹುದು. ನಾನು ಆ ಅಂಕಿ ಅಂಶವನ್ನೂ ಕೂಡ ಕೊಡುತ್ತೇನೆ. ಆದರೆ ಪ್ರಶ್ನೆ ಅದು ಅಲ್ಲ, ನಾವು ಕುಡಿಯುವ ನೀರಿನ ಸಮಸ್ಯೆಯನ್ನು ಎಷ್ಟರ ಮಟ್ಟಿಗೆ ಬಗೆಹರಿಸಿದ್ದೇವೆ ಎನ್ನತಕ್ಕಂಥದ್ದು ಮುಖ್ಯ. ಹಣ ಎಷ್ಟು ಖರ್ಚು ಮಾಡಿದ್ದೇವೆ, ಪೈಪ್‌ಗಳನ್ನು ಎಷ್ಟು ಪರಚೇಸ್ ಮಾಡಿದ್ದೇವೆ. ಸ್ಪೇರ್ ಪಾರ್ಟ್ಸ್ ಎಷ್ಟು ಪರಚೇಸ್ ಮಾಡಿದ್ದೇವೆ ರಿಗ್‌ಗಳಿಗೆ ಎಷ್ಟು ಹಣ ಕೊಟ್ಟಿದ್ದೇವೆ ಎನ್ನತಕ್ಕಂಥದ್ದು ಬಹಳ ಮಹತ್ವವಾದದ್ದು ಅಲ್ಲ. ಆ ರಿಗ್‌ಗಳಿಗೆ ನೀವು ಕೊಡುವಂಥದ್ದು, ಪೈಪ್‌ಗಳಿಗೆ ಪರಚೇಸ್ ಮಾಡುವುದಕ್ಕೆ ಕೊಡುವುದು ಬೇರೆ ಬೇರೆ ಸ್ಪೇರ್ ಪಾರ್ಟ್ಸ್ ಪರಚೇಸ್‌ಗೆ ಕೊಡುವುದು ಅದು ಯಾವ ರೀತಿ ಮಿಸ್‌ಯೂಸ್ ಆಗಿದೆ ಎನ್ನತಕ್ಕಂಥದ್ದು ಅದು ಇನ್ನೊಂದು ಕಡೆ, ಅದು ಬೇರೆ ಪ್ರಶ್ನೆ. ಅದನ್ನು ಡಿಮಾಂಡ್ ಮೇಲೆ ಮಾತನಾಡುವಾಗ ಎಲ್ಲಾ ಸವಿಸ್ತಾರವಾಗಿ ಹೇಳುತ್ತೇನೆ. ಆದರೆ ಇವತ್ತು ಇಷ್ಟೊಂದು ನೀರಿನ ಸಮಸ್ಯೆ ಇಡೀ ಕರ್ನಾಟಕ ರಾಜ್ಯದಲ್ಲಿ ಇದ್ದರೂ ಕೂಡ ಇವತ್ತು ಸರ್ಕಾರ ಈ ಕಡೆ ಏಕೆ ಲಕ್ಷ್ಯವನ್ನು

ಕೊಡಲಿಲ್ಲ; ಇದರಲ್ಲಿ ವಿಫಲರಾಗಿದ್ದೇವೆ ಎನ್ನತಕ್ಕಂಥದ್ದನ್ನು ಅವರು ಹೇಳಬೇಕಾಗುತ್ತದೆ. ಇವತ್ತು ಒಂದು ಜಿಲ್ಲೆ ಎಂದು ಇಲ್ಲ, ಪ್ರತಿಯೊಂದು ಜಿಲ್ಲೆಯಲ್ಲಿ ಕೂಡ ಈ ಸಮಸ್ಯೆ ಇದೆ. ಉದಾಹರಣೆಗೆ ನಾನು ಬೀದರ ಜಿಲ್ಲೆಯಿಂದ ಪ್ರಾರಂಭ ಮಾಡುತ್ತೇನೆ. ಬೀದರ್ ಜಿಲ್ಲೆಯಲ್ಲಿ ಎಂತಹ ಪರಿಸ್ಥಿತಿ ಇತ್ತು ಎನ್ನತಕ್ಕಂಥದ್ದು ನಿಮಗೆ ಗೊತ್ತಿದೆ. ಈಗಾಗಲೇ ಅಲ್ಲಿಯ ರೈತರು ತನ್ನ ಬೆಳೆಗಳನ್ನು ಕಳೆದುಕೊಂಡು ಅವನು ನಾಶವಾಗಿದ್ದಾನೆ. ಅವರು ಕುಡಿಯುವ ನೀರಿಗೆ ತಾಪತ್ರಯವನ್ನು ಪಡುತ್ತಿದ್ದಾರೆ. ಬೀದರ ಜಿಲ್ಲೆಯ ಬಾರ್ಡರ್‌ನಲ್ಲಿ ಸ್ವಂತೂರು ಎಂದು ಇದೆ ಅಲ್ಲಿ ಒಂದು ಬ್ಯಾರಲ್ ನೀರಿಗೆ 6 ರೂಪಾಯಿ, ಒಂದು ಕೊಡ ನೀರಿಗೆ 2 ರೂಪಾಯಿ ಇದೆ. ಅಲ್ಲಿ ಇಂತಹ ಒಂದು ಪರಿಸ್ಥಿತಿ ಇದ್ದಾಗ ಸರ್ಕಾರದವರು ಇದನ್ನು ಯಾವ ರೀತಿಯಾಗಿ ಟ್ಯಾಕಲ್ ಮಾಡುತ್ತಿದ್ದಾರೆ? ಎಷ್ಟು ಹಳ್ಳಿಗಳಿಗೆ ಇವತ್ತು ನೀರನ್ನು ಸರಬರಾಜು ಮಾಡುತ್ತಿದ್ದಾರೆ. ಎಷ್ಟು ಹಳ್ಳಿಗಳಿಗೆ ಬರಗಾಲ ಬಂದಾಗ ಯುದ್ಧೋಪಾದಿಯಲ್ಲಿ ಟ್ರೇನ್ ಬೋಗಿ ಮುಖಾಂತರ ನೀರನ್ನು ಸರಬರಾಜು ಮಾಡಿದಂಥ ಉದಾಹರಣೆಗಳು ನಮ್ಮ ರಾಜ್ಯದಲ್ಲಿ ಇದೆ. ಆದರೆ ಇವತ್ತು ಅನೇಕ ಜಿಲ್ಲೆಗಳಲ್ಲಿ ನೂರಾರು ಹಳ್ಳಿಗಳಿಗೆ ಕುಡಿಯುವ ನೀರಿಗಾಗಿ ತಾಪತ್ರಯ ಪಡುತ್ತಿದ್ದಾರೆ. ಉದಾಹರಣೆಗೆ ಬೀದರ ಜಿಲ್ಲೆಯ ಹಂಗರಗಾ ಗ್ರಾಮಸ್ಥರು ಕುಡಿಯುವ ನೀರನ್ನು ಪಡೆಯಲು ಸಾಕಷ್ಟು ಹೋರಾಟವನ್ನು ಮಾಡಿ ಕೊಳವೆ ಭಾವಿಗಳನ್ನು ಪಡೆಯಲು ಯಶಸ್ವಿಯಾದರು. ಕುಡಿಯುವ ನೀರು ತರಲು ಮಹಾರಾಷ್ಟ್ರಕ್ಕೆ ಹೋಗುವುದು ಮಾತ್ರ ಬರಲಿಲ್ಲ. ಕೊಳವೆ ಭಾವಿಯಲ್ಲಿ ನೀರು ಬರಲಿಲ್ಲ, ಅಲ್ಲಿ ನೀರಿನ ಮಟ್ಟ ಕೆಳಗಡೆ ಹೋಗಿದೆ. ಹಂಗರಗಾ ಮತ್ತು ಸ್ವಂತೂರು ಮಹಾರಾಷ್ಟ್ರದ ಬಾರ್ಡರಿಗೆ ಇದೆ. ಅಲ್ಲಿ ಸಾಕಷ್ಟು ಪ್ರಯತ್ನ ಮಾಡಿದರೂ ಕೂಡ ಅಲ್ಲಿ ನೀರು ಸಿಗಲಿಲ್ಲ. ಕನಿಷ್ಟ ಪಕ್ಷ ನೀವು ಮಹಾರಾಷ್ಟ್ರ ಸರ್ಕಾರದ ಜೊತೆ ಸಂಪರ್ಕ ಮಾಡಿ, ಅಲ್ಲಿಂದ ಪೈಪ್‌ಲೈನ್ ಹಾಕಿ ಅಲ್ಲಿಂದ ನೀರನ್ನು ತೆಗೆದುಕೊಳ್ಳಬಹುದಾಗಿತ್ತು. ಅಲ್ಲಿಂದ ಅದನ್ನು ಪೂರೈಕೆ ಮಾಡಬಹುದಾಗಿತ್ತು. ಅದನ್ನು ಮಾಡಲಿಲ್ಲ. ಇಲ್ಲವೆಂದರೆ ನೀವು ಟೆಂಪರ್‍ವರಿಯಾಗಿ ಏನಾದರೂ ಒಂದು ವ್ಯವಸ್ಥೆ ಮಾಡಿ. ಹಳೆಯ ಪೈಪುಗಳು ಇದ್ದರೆ ರಿಪೇರಿ ಮಾಡತಕ್ಕಂಥ ವ್ಯವಸ್ಥೆ ಮಾಡಬೇಕಾಗಿತ್ತು. ಅದನ್ನೂ ಕೂಡ ಮಾಡಲಿಲ್ಲ. ಅದಕ್ಕಾಗಿ ಆ ಊರಿನ ಜನರು ಪಕ್ಕದ ಮಹಾರಾಷ್ಟ್ರ ಕೊನೆಯಲ್ಲಿ ಇರತಕ್ಕಂಥ ತಾಲ್ಲೂಕುಗಳಿಗೆ ಇವತ್ತು ಹೋಗಿ ಅಲ್ಲಿ ನೀರು ತರತಕ್ಕಂಥ ವ್ಯವಸ್ಥೆ ಮಾಡಬೇಕು.

11.50 ಎ.ಎಂ.

ಬಾಲ್ಕಿ, ಹುಮ್ನಾಬಾದ್, ಬಸವಕಲ್ಯಾಣ ಮುಂತಾದ ಪ್ರತಿಯೊಂದು ತಾಲ್ಲೂಕುಗಳಲ್ಲಿ ಈ ಪರಿಸ್ಥಿತಿ ಇದೆ. ಇದೇ ರೀತಿಯ ಪರಿಸ್ಥಿತಿ ಬಿಜಾಪುರದಲ್ಲೂ ಕೂಡ ಇದೆ. ಬಿಜಾಪುರಕ್ಕೆ ಸಂಬಂಧಪಟ್ಟ ಹಾಗೆ ಕೃಷ್ಣಾ ಯೋಜನೆ ಇನ್ನೂ ಮುಗಿದಿಲ್ಲ. ಆ ಯೋಜನೆಗೆ ನೀವು ಸಾಕಷ್ಟು ಹಣವನ್ನು ಒದಗಿಸಿಕೊಡಬೇಕಾಗಿತ್ತು, ಒದಗಿಸಿಕೊಟ್ಟಿಲ್ಲ. ಹಣವನ್ನು ಒದಗಿಸಿಕೊಡದ ಕಾರಣ ಆ ಯೋಜನೆ ನಿಗಧಿತ ಸಮಯದಲ್ಲಿ

ಪೂರ್ಣಗೊಂಡಿಲ್ಲ. ಹೀಗಾಗಿ ಇವತ್ತು ಏನಾಗಿದೆ ಎಂದರೆ ಅಲ್ಲಿನ ಪ್ರತಿಯೊಂದು ಓಣಿಯಲ್ಲೂ ಕೂಡ ಕುಡಿಯುವ ನೀರಿಗಾಗಿ ಒಂದು ದೊಡ್ಡ ಹೋರಾಟ ನಡೆಯುತ್ತಿದೆ. ಅಲ್ಲದೆ ಇಂಟರನಲ್ ಪೈಪ್‌ಲೈನನ್ನು ಬದಲಾವಣೆ ಮಾಡಿಲ್ಲ ಮತ್ತು ಮೈನ್ ಪೈಪ್‌ಲೈನ್‌ನಿಂದ ನೀರು ತರತಕ್ಕಂತಹ ವ್ಯವಸ್ಥೆಯನ್ನು ಸರ್ಕಾರ ಮಾಡುತ್ತಾ ಇಲ್ಲ. ಇಂಟರ್‌ನಲ್ ಪೈಪ್‌ಲೈನ್‌ಗೆ ಸಂಬಂಧಿಸಿದಂತೆ ವಿಷಯ ಕ್ಯಾಬಿನೆಟ್‌ನ ಮುಂದಿದೆ. ಸ್ಯಾಂಕ್ಷನ್ ಕೊಡತಕ್ಕಂಥದ್ದು, ಹಣವನ್ನು ಒದಗಿಸುವಂಥದ್ದು, ಆ ಇಂಟರ್‌ನಲ್ ಪೈಪ್ ಲೈನನ್ನು ಎಷ್ಟು ಬೇಕೋ ಅಷ್ಟನ್ನು ಒದಗಿಸಬೇಕಾದರೆ ಅದಕ್ಕೆ ಸರ್ಕಾರ ಒಪ್ಪಬೇಕು. ಅದು ಆದ ಮೇಲೆ ಅರ್ಬನ್ ವಾಟರ್‌ಸಪ್ಲೈಗೆ ಸಂಬಂಧಿಸಿದಂತೆ ಆಗ ಅವರು ಕೆಲಸವನ್ನು ಪ್ರಾರಂಭ ಮಾಡಿದರು. ಇದು ಮೂರು-ನಾಲ್ಕು ವರ್ಷದಿಂದ ನಡೆದಿದೆ. ವಾಟರ್‌ಸಪ್ಲೈಗೆ ಹಣವನ್ನು ಏನೊ ಒದಗಿಸಿದ್ದಾರೆ ಆದರೆ ಪೈಪ್‌ಲೈನ್‌ಗಳಿಗೆ ಹಣವನ್ನು ನಿಗದಿಮಾಡಿಲ್ಲ. ಹೀಗಾಗಿ ಅಲ್ಲಿರತಕ್ಕಂತಹ ಮೈನ್‌ಸೋರ್ಸ್‌ನಲ್ಲಿ ಇನ್ನು ಪೈಪ್‌ಲೈನ್‌ನ್ನು ಹಾಕಿಲ್ಲ. ಯಗಚಿಯಲ್ಲಿ ನೀರು ಸಿಗುತ್ತದೆ. ತಾವು ಅಲ್ಲಿಗೆ ಹೋದರೆ ಗೊತ್ತಾಗುತ್ತದೆ. ರಿಕ್ಷಾದಲ್ಲಿ 8-10 ಕೊಡಗಳನ್ನು ಇಟ್ಟುಕೊಂಡು ಹೋಟೆಲ್‌ಗಳಿಗೆ, ಮನೆಗಳಿಗೆ ಹೋಗಿ ನೀರನ್ನು ಮಾರುತ್ತಾರೆ. ಇಂತಹ ಪರಿಸ್ಥಿತಿ ಅಲ್ಲಿಯೂ ಕೂಡ ಇದೆ. ಅದರ ಜೊತೆಗೆ ಮುದ್ದೇಬಿಹಾಳ ಆಗಬಹುದು, ಅಥವಾ ಸಿಂಧಗಿ ಸೇರಿದಂತೆ ಬೇರೆ ಎಲ್ಲಾ ತಾಲ್ಲೂಕು ಮಟ್ಟಗಳಲ್ಲಿಯೂ ಕೂಡ ಇವತ್ತಿನ ದಿವಸ ಇದೇ ಪರಿಸ್ಥಿತಿ ಉಲ್ಬಣಗೊಂಡಿದೆ. ಗುಲ್ಬರ್ಗದಲ್ಲಿಯೂ ಕೂಡ ತಮಗೆ ಗೊತ್ತಿದೆ. ಪ್ರತಿಯೊಂದು ಪತ್ರಿಕೆಯ ಮುಖಪುಟದಲ್ಲಿ ಪ್ರತಿಯೊಂದು ಜಿಲ್ಲೆ, ತಾಲ್ಲೂಕಿನ ಬಗ್ಗೆ ಲೇಖನ ಬರುತ್ತಿದೆ. ಪ್ರಜಾವಾಣಿ, ಸಂಯುಕ್ತ ಕರ್ನಾಟಕ, ಕನ್ನಡಪ್ರಭಾ, ಇಂಗ್ಲೀಷ್ ಪತ್ರಿಕೆಗಳಲ್ಲಿ ಎಲ್ಲದರಲ್ಲೂ ಕೂಡ ಇವತ್ತಿನ ದಿನ ಕುಡಿಯುವ ನೀರಿನ ಬಗ್ಗೆ ವಿಶೇಷವಾದಂತಹ ಲೇಖನ ಬರೆಯುತ್ತಿದ್ದಾರೆ. ಜನ ಇವತ್ತು ರೊಚ್ಚಿಗೆದ್ದಿದ್ದಾರೆ. ಅವರನ್ನು ನಾವು ಯಾವ ರೀತಿಯಲ್ಲೂ ಸಮಾಧಾನಪಡಿಸುವುದಕ್ಕಾಗುತ್ತಿಲ್ಲ. ನಮಗೆ ಕನಿಷ್ಟ ಪಕ್ಷ ಕುಡಿಯುವ ನೀರಿಗೂ ಕೂಡ ವ್ಯವಸ್ಥೆ ಮಾಡಿಕೊಡಲಿಲ್ಲ ಅಂದರೆ ನೀವೆಂಥ ಶಾಸಕರು ಎನ್ನತಕ್ಕಂಥ ಅಪವಾದ ಇವತ್ತು ಶಾಸಕರ ಮೇಲೆ ಬರುತ್ತಾ ಇದೆ. ಅವರು ಸರ್ಕಾರದ ಶಾಸಕರನ್ನೇ ಬೈಯುತ್ತಾರಂತಲ್ಲ, ಈ ಕಡೆ ಇರುವಂತಹ ಶಾಸಕರಿಗೂ ಕೂಡ ಅದನ್ನೇ ಹೇಳುತ್ತಾರೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮಾನ್ಯ ವಿರೋಧಪಕ್ಷದ ನಾಯಕರು ಏನು ಹೇಳುತ್ತಿದ್ದಾರೆ, ಅದನ್ನು ಕೇಳಿಸಿಕೊಳ್ಳುವಂತವರು ಯಾರೂ ಇಲ್ಲ. ಇದಕ್ಕೆ ಉತ್ತರ ಕೊಡುವವರು ಯಾರು? ಮಧ್ಯೆ ಎದ್ದುಬಿಟ್ಟು ಬಾಯಿಗೆ ಬಂದಂತೆ ಏನೋ ಉತ್ತರವನ್ನು ಅವರು ಬಹಳಷ್ಟು ಅಂಕಿಅಂಶಗಳನ್ನು ಕೊಟ್ಟು ಹೇಳುತ್ತಿದ್ದಾರೆ. ಅದನ್ನು ಗಂಭೀರವಾಗಿ ಪರಿಗಣಿಸಿ ಕೇಳಬೇಕೆನ್ನುವ ಸೌಜನ್ಯವೂ ಕೂಡ ಸರ್ಕಾರಕ್ಕಿಲ್ಲ. ಉತ್ತರ ಕೊಡುವಾಗ ಏನೋ ಒಂದು ಉತ್ತರವನ್ನು ಹೇಳಿಬಿಡುವುದು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಾವು ಅಂಕಿಅಂಶವನ್ನು ಸರ್ಕಾರಕ್ಕೆ ಕೊಡುತ್ತಾ ಇದ್ದೇವೆ. ಯಾವಯಾವ ಹಳ್ಳಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ ಎಂದು ಹೇಳುತ್ತಾ ಇದ್ದೇವೆ. ನೀವು ಕನಿಷ್ಟ ಪಕ್ಷ ಏನು ವ್ಯವಸ್ಥೆ ಮಾಡಿದ್ದೀರಿ; ಎಂದು ಪ್ರತ್ಯುತ್ತರವನ್ನು ಹೇಳಬೇಕಾಗಿದೆ. ಬೇಡಿಕೆಯ ಮೇಲೆ ಡೀಟೈಲ್ ಆಗಿ ಮಾತನಾಡಬಹುದು ಎಂದು ಹೇಳಿದ್ದಿರಿ. ನಾನು ವಿಶೇಷವಾಗಿ ಕುಡಿಯುವ ನೀರಿನ ವಿಷಯವನ್ನು ನಾನು ಚರ್ಚೆಗೆ ತೆಗೆದಕೊಂಡರೆ ಈ ಸದನದ ಸಮಯವನ್ನು ಹಾಳು ಮಾಡುತ್ತಾರೆಂದು ಹೇಳಿದರು. ಇದಕ್ಕಿಂತ ದೊಡ್ಡ ವಿಷಯ ಏನಿದೆ? ಸಿಂಧ್ಯರವರಿಗಂತೂ ಗೊತ್ತಿಲ್ಲ. ಅವರಿಗೆ ರಾಜಕಾರಣದಲ್ಲಿ ಉಸಿರುಕಟ್ಟುವಂತಹ ವಾತಾವರಣವಿದ್ದರೆ ನಮ್ಮ ಹಳ್ಳಿಗಳಿಗೆ ಹೋದರೆ ಜನರಿಗೆ ಉಸಿರುಕಟ್ಟಿಸುವಂತಹ ಸ್ಥಿತಿ ಉಂಟು ಮಾಡಿದ್ದಾರೆ. ಕುಡಿಯುವ ನೀರಿಗೆ ನೀವು ಸರಿಯಾದ ವ್ಯವಸ್ಥೆ ಮಾಡಿಲ್ಲ ಎಂದು ಹೇಳುತ್ತಾರೆ. ಅದಕ್ಕೆ ಕನಿಷ್ಟ ಪಕ್ಷ ಜನರ ಸಮಸ್ಯೆಯನ್ನು ಕೇಳುವಂತಹ ಸೌಜನ್ಯ ಮತ್ತು ಇದಕ್ಕೆ ಉತ್ತರ ಕೊಡುವಂಥದ್ದು ಆಗಲಿ, ಕೊನೆಗೆ ನಾನಾದರೂ ಒಂದು ನಿರ್ಧಾರಕ್ಕೆ ಬಂದಿದ್ದೇನೆ. ಸದನದ ಮುಂದೆ ಈ ವಿಷಯ ತರತಕ್ಕಂಥದ್ದು ನಮ್ಮೆಲ್ಲರ ಹಕ್ಕು. ಏಕೆಂದರೆ ಜನರ ಗೋಳು, ಜನರಿಗೆ ಆಗತಕ್ಕಂತಹ ತೊಂದರೆ, ಅದನ್ನು ನಿವಾರಿಸುವಂತಹ ಒಂದು ವೇದಿಕೆ ಯಾವುದು ಎಂದರೆ ಅದು ನಮ್ಮ ಈ ಅಸೆಂಬ್ಲಿ. ಅಸೆಂಬ್ಲಿಯಲ್ಲಿ ಇದನ್ನು ತರತಕ್ಕಂಥದ್ದು ನಮ್ಮ ಕರ್ತವ್ಯ. ಇದನ್ನು ತಂದ ಮೇಲೆಯೂ ಕೂಡ ಸರ್ಕಾರ ಇದರ ಬಗ್ಗೆ ಸರಿಯಾಗಿ ವರ್ತಿಸಲಿಲ್ಲ ಎಂದು ಹೇಳಿದರೆ ಜನ ತಕ್ಕ ಪಾಠ ಕಲಿಸುತ್ತಾರೆ. ಜನ ಈಗಾಗಲೇ ಅವರಿಗೆ ಏನು ಬುದ್ಧಿ ಕಲಿಸಬೇಕೋ ಅಷ್ಟು ಬುದ್ಧಿಯನ್ನು ಕಲಿಸಿದರೂ ಕೂಡ ಇನ್ನು ಏಕೋ ಅವರಿಗೆ ಬುದ್ಧಿ ಬಂದಂತಿಲ್ಲ.

ಶ್ರೀ ಡಿ.ಮಂಜುನಾಥ್: ಇವತ್ತಿನ ಅಜೆಂಡಾದಲ್ಲಿ ಬೇಡಿಕೆಗಳ ಪಟ್ಟಿಯಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ನೈರ್ಮಲ್ಯ ಎಂದು ಇದೆ. ಇದರ ಬಗ್ಗೆ ವ್ಯಾಪಕವಾಗಿ ಚರ್ಚೆಯಾಗಿದ್ದರೆ ಚೆನ್ನಾಗಿರುತ್ತಿತ್ತು. ಅದರ ಜೊತೆಗೆ ಇನ್ನೊಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಎಲ್ಲಾ ಜಿಲ್ಲಾ ಪಂಚಾಯಿತಿಗೆ ಇವತ್ತಿನ ದಿವಸ ಕುಡಿಯುವ ನೀರಿಗೋಸ್ಕರ ಹಣವನ್ನು ಕೊಟ್ಟಿದೆ. ಆದರೆ ದುರಾದೃಷ್ಟವಶಾತ್.....

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ನೀವು ಹಣವನ್ನು ಕೊಟ್ಟಿರುವುದರ ಬಗ್ಗೆ ಆಮೇಲೆ ಹೇಳಿ. ಈಗ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಚರ್ಚೆಯಾಗುತ್ತಿದೆ. ವಿರೋಧ ಪಕ್ಷದ ನಾಯಕರು ಹೇಳುತ್ತಿರಬೇಕಾದರೆ ಗ್ರಾಮೀಣಾಭಿವೃದ್ಧಿ ಸಚಿವರು ಸದನದಲ್ಲಿ ಇರಬೇಕಾಗಿತ್ತು. ಅವರು ಇದಕ್ಕೆ ಸರಿಯಾದ ಉತ್ತರವನ್ನು ಕೊಡಬೇಕಾಗುತ್ತದೆ.

ಉಪಾಧ್ಯಕ್ಷರು: ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರು ಮೇಲ್ಮನೆಯಲ್ಲಿದ್ದಾರೆ. ಇಲ್ಲಿ ಉಪಸ್ಥಿತರಿರುವ ಮಂತ್ರಿಗಳು ಅವರು ಹೇಳುತ್ತಿರುವುದನ್ನು ನೋಟ್ ಮಾಡಿಕೊಳ್ಳುತ್ತಿದ್ದಾರೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಇಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಚರ್ಚೆಯಾಗುತ್ತಿದೆ. ಪ್ರತಿಯೊಂದಕ್ಕೂ ಮಂತ್ರಿಗಳು ಕೌನ್ಸಿಲ್‌ನಲ್ಲಿ ಇದ್ದಾರೆಂದು ಹೇಳುವುದಲ್ಲ. ಇದು ವಿಧಾನಸಭೆಯಾಗಿದ್ದು ನಾವು ಕೇಳುತ್ತಿದ್ದೇವೆ, ವಿರೋಧಪಕ್ಷದ ನಾಯಕರೂ ಸಹ ಹೇಳುತ್ತಿದ್ದಾರೆ. ಆದುದರಿಂದ ಸಂಬಂಧಪಟ್ಟ ಸಚಿವರು ಉತ್ತರವನ್ನು ಕೊಡಬೇಕಾಗುತ್ತದೆ. ಎಲ್ಲಾ ಮಂತ್ರಿಗಳು ಈ ವಿಷಯವನ್ನು ಲಘುವಾಗಿ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ.

ಉಪಾಧ್ಯಕ್ಷರು: ತಾವು ಮತ್ತೆ ಮತ್ತೆ ಅದನ್ನೇ ಮಾತನಾಡುತ್ತಾ ಇದ್ದರೆ ಹೇಗೆ? ಸಮಯವನ್ನು ಸುಮ್ಮನೆ ವ್ಯಯ ಮಾಡಬಾರದು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಬಿಜಾಪುರ, ಬೀದರ್ ಆಯಿತು. ಇನ್ನೂ ಗುಲ್ಬರ್ಗದಲ್ಲಿ ಕೆಂಡದಂತಹ ಸುಡುಬಿಸಿಲು ಇದ್ದು ನೀರಿನ ಅಭಾವಕ್ಕೆ ಪ್ರಖ್ಯಾತವಾಗಿರುವ ಈ ಜಿಲ್ಲೆಯಲ್ಲಿ ಈಗಾಗಲೇ ಕುಡಿಯುವ ನೀರಿಗಾಗಿ ತೀವ್ರ ಹಾಹಾಕಾರ ಉಂಟಾಗಿದೆ. ಈ ಬೇಸಿಗೆಯಲ್ಲಿ ಭೀಕರ ಸಮಸ್ಯೆ ಎದುರಿಸಬೇಕಾಗಿರುವ ಭೀತಿ ಮೂಡಿದೆ. ಅದರ ಜೊತೆಗೆ ಗುಲ್ಬರ್ಗಾದ ಸುಮಾರು 430 ಗ್ರಾಮಗಳಲ್ಲಿ ಈಗಾಗಲೇ ನೀರಿನ ಅಭಾವವಿದೆ. ಆ ಪೈಕಿ ಸುಮಾರು 140 ಹಳ್ಳಿಗಳಿಗೆ ನೀವು ನೀರನ್ನು ಸಾರಿಗೆ ಮೂಲಕ ಸರಬರಾಜು ಮಾಡಬೇಕಾಗುತ್ತದೆ. ನೀವು ಆ ರೀತಿ ಮಾಡದೆ ಗತ್ಯಂತರವಿಲ್ಲ. ಜಿಲ್ಲಾಧಿಕಾರಿಗಳು ಈ ಹಳ್ಳಿಗಳಿಗೆ ಸದರಿ ವ್ಯವಸ್ಥೆ ಮಾಡಬೇಕು. ಕುಡಿಯುವ ನೀರಿನ ವ್ಯವಸ್ಥೆಗೂ ಹಣ ಬಿಡುಗಡೆಯಾಗಿಲ್ಲ. ನೀವು ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದೀರೆಂದು ನಾನು ನಂತರ ಹೇಳುತ್ತೇನೆ. ಆದರೆ ಸುಮಾರು 430 ಹಳ್ಳಿಗಳಿಗೆ ಕುಡಿಯುವ ನೀರಿಗೆ ತೀವ್ರ ಅಭಾವವಿದೆ. ಅದರಲ್ಲಿ 130 ಹಳ್ಳಿಗಳಿಗೆ ಟ್ರಾನ್ಸ್‌ಪೋರ್ಟ್ ಮೂಲಕ ಸರಬರಾಜು ಮಾಡಬೇಕೆಂದು ಜಿಲ್ಲಾಧಿಕಾರಿಯವರು ಕೇಳಿಕೊಂಡಿದ್ದಾರೆ. ಅದಕ್ಕೆ ಹಣದ ಅಭಾವವಿದೆ. ಆ ಹಣವನ್ನು ಬಿಡುಗಡೆ ಮಾಡಲು ಎಷ್ಟು ಜಿಲ್ಲಾಧಿಕಾರಿಗಳು ಕೇಳಿಕೊಂಡಿದ್ದಾರೆ? ಆದರೂ ಹಣ ಇವತ್ತು ಬಿಡುಗಡೆಯಾಗಿಲ್ಲ. ಒಂದು ವೇಳೆ ಅವರು ಕೊಟ್ಟಂತಹ ಹಣವನ್ನು ಉಪಯೋಗ ಮಾಡದೆ ಇದ್ದರೆ ಯಾಕೆ ಅವರು ಉಪಯೋಗ ಮಾಡಿಲ್ಲವೆಂದು ಕೇಳಿ ಅವರ ಮೇಲೆ ಆ್ಯಕ್ಷನ್ ತೆಗೆದುಕೊಳ್ಳಬೇಕು. ಒಂದು ಕಡೆ ಹಣವನ್ನು ಬಿಡುಗಡೆ ಮಾಡಿದ್ದೇವೆಂದು ನೀವೇ ಹೇಳುತ್ತೀರಿ. ಇನ್ನೊಂದು ಕಡೆ ಹಣದ ಕೊರತೆ ಇಲ್ಲವೆಂದು ತಾವು ಹೇಳುತ್ತಿದ್ದಿರಿ. ಅಂದಾಗ ಲೋಪ ಎಲ್ಲಿದೆ? ಜಿಲ್ಲಾಧಿಕಾರಿ ಅಥವಾ ಜಿಲ್ಲಾಪರಿಷತ್‌ನಲ್ಲಿ ಅಥವಾ ಪಿಹೆಚ್‌ಇ ಇಂಜಿನಿಯರಿಂಗ್ ಡಿವಿಷನ್‌ನಲ್ಲಿ ಅಥವಾ ಯಾವ ಸಂಸ್ಥೆಯಲ್ಲಿ ಲೋಪವಿದೆ ಎಂಬುದನ್ನು ತಾವು ಹೇಳಬೇಕು. ಇದರ ಜೊತೆಯಲ್ಲಿ ಇವತ್ತಿನದಿವಸ ವಾಟರ್‌ಟೇಬಲ್ ಕೆಳಗೆ ಹೋಗಿರುವುದು ಎಲ್ಲರಿಗೂ ಕೂಡ ಗೊತ್ತಿದೆ. ಆದರೆ ನಾನು ಏನು ಹೇಳುತ್ತೇನೆಂದರೆ ಮಹಾರಾಷ್ಟ್ರದಲ್ಲಿ ಇವತ್ತು ಭೀಮಾ ಮತ್ತು ಕೃಷ್ಣ ರಿವರ್ ಮೇಲೆ ಸಾಕಷ್ಟು ಬ್ರಿಡ್ಜ್‌ನ್ನು ಕಟ್ಟಿ ಬ್ಯಾರೇಜ್‌ಗಳನ್ನು ಕಟ್ಟಿ

ಶಾಶ್ವತವಾದಂತಹ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಿಕೊಂಡಿದ್ದಾರೆ. ಜೊತೆಗೆ ನೀರಾವರಿಗೂ ಕೂಡ ಅವರು ಉಪಯೋಗ ಮಾಡುತ್ತಾ ಇದ್ದಾರೆ ಅದಕ್ಕಾಗಿ ನನ್ನ ಕಳಕಳಿಯ ಮನವಿಯೇನೆಂದರೆ ತಾವು ಈಗಾಗಲೇ ಕ್ರಿ.ಶ.2000ನೇ ಇಸವಿಯೊಳಗಡೆ ಕೃಷ್ಣಾ ಬೇಸಿನ್‌ನಲ್ಲಿರತಕ್ಕಂತಹ ನೀರನ್ನು ಉಪಯೋಗ ಮಾಡಿಕೊಳ್ಳಬೇಕೆಂದು ಬಚಾವತ್ ಆವಾರ್ಡ್ ಇದೆ. ನಾವು ಕನಿಷ್ಟಪಕ್ಷ ಮಲ್ಟಿಪರ್‌ಪಸ್ ಸ್ಕೀಂ ತಯಾರಿಸಿ ಒಂದು ಕಡೆ ನೀರಾವರಿಗೆ ಮತ್ತೊಂದು ಕಡೆ ಕುಡಿಯುವ ನೀರಿಗಾಗಿ ಶಾಶ್ವತವಾದ ವ್ಯವಸ್ಥೆಯನ್ನು ಮಾಡಬೇಕಾಗಿದೆ. ಈ ಮಲ್ಟಿಪರ್‌ಪಸ್ ಸ್ಕೀಂಗೆ ನಿಮಗೆ ವರ್ಲ್ಡ್‌ಬ್ಯಾಂಕ್‌ನಿಂದ ಸಾಲ ಸಿಗುವಂತಹ ಸಾಧ್ಯತೆ ಇದೆ. ಕುಡಿಯುವ ನೀರಿಗೆ ಹಾಗೂ ಇರಿಗೇಷನ್‌ಗೆ ಒದಗಿಸಿರುವ ದುಡ್ಡನ್ನು ನಾವು ಸೂಕ್ಷ್ಮ ರೀತಿಯಲ್ಲಿ ಖರ್ಚು ಮಾಡಿದರೆ ಖಂಡಿತವಾಗಿ ಈ ಕೃಷ್ಣಾ ಬೇಸಿನ್‌ನಲ್ಲಿರುವ ಅದು ಘಟಪ್ರಭಾ ಇರಬಹುದು. ಮಲಪ್ರಭಾ ಇರಬಹುದು, ಕೃಷ್ಣಾ ಇರಬಹುದು, ನಾರಾಯಣಪುರ, ಬೆಣ್ಣೆತೊರೆ ಇರಬಹುದು, ಭೀಮಾ ಇರಬಹುದು, ಇವೆಲ್ಲಕ್ಕೂ ಕೂಡ ಬ್ಯಾರೇಜ್‌ಗಳನ್ನು ಮಾಡಿ ಅಲ್ಲಲ್ಲಿ ನೀರು ನಿಲ್ಲಿಸುವ ಮೂಲಕ ಶಾಶ್ವತವಾದ ಕೆಲವು ಯೋಜನೆಗಳನ್ನು ಹಮ್ಮಿಕೊಂಡರೆ ಬಹಳ ಉಪಯುಕ್ತವಾಗುತ್ತದೆ ಎನ್ನುವಂತಹ ಮಾತನ್ನು ನಾನು ಹೇಳುತ್ತಿದ್ದೇನೆ. ಮತ್ತು ಇದು ಗುಲ್ಬರ್ಗ ಜಿಲ್ಲೆ ಒಂದಕ್ಕೆ ಅಲ್ಲ; ಎಲ್ಲೆಲ್ಲಿ ನದಿಗಳು ಇವೆ ಅಲ್ಲಿ ಎಲ್ಲಾ ಕಡೆ ಮಾಡಬೇಕು. ಅದು ರಾಯಚೂರು ಇರಬಹುದು, ಧಾರವಾಡ ಇರಬಹುದು, ಬೆಳಗಾಂ ಇರಬಹುದು, ಮಂಗಳೂರು ಇರಬಹುದು. ಅಥವಾ ಯಾವುದೇ ಜಿಲ್ಲೆ ಇರಬಹುದು; ಮಂಡ್ಯ ಇರಬಹುದು. ಮೈಸೂರು ಇರಬಹುದು. ಎಲ್ಲೆಲ್ಲಿ ಸಾಧ್ಯ ಇದೆ ಅಲ್ಲಿ ನೀವು ಹೆಚ್ಚಿನ ಬ್ಯಾರೇಜಸ್ ಮಾಡಿಕೊಂಡು ಮಾಡಬೇಕು. ಇವತ್ತು ವಿಶೇಷವಾಗಿ ಭೀಮ ಮತ್ತು ಕೃಷ್ಣ ನದಿಗಳಿಗೆ ಮಹಾರಾಷ್ಟ್ರದವರು ಸಾಕಷ್ಟು ಬ್ಯಾರೇಜಸ್ ಕಟ್ಟಿಸಿ ಇವತ್ತು ನಮಗೆ ನೀರಿನ ತೊಂದರೆ ಮಾಡಿದ್ದಾರೆ. ಇವತ್ತು ಜಾನುವಾರುಗಳಿಗೆ ಮತ್ತು ಮನುಷ್ಯರಿಗೆ ಬೇಕಾದ ಕುಡಿಯುವ ನೀರಿಗೆ ನಾವು ಅವರಿಗೆ ರಿಕ್ವೆಸ್ಟ್ ಮಾಡಿಕೊಳ್ಳಬೇಕಾಗಿದೆ. ಇವತ್ತು ಒಂದು ಹನಿ ನೀರೂ ಕೂಡ ಇಲ್ಲ. ಅದಕ್ಕಾಗಿ ತಾವು ಮಹಾರಾಷ್ಟ್ರ ಸರ್ಕಾರಕ್ಕೆ ಉಜ್ಜನಿ ಡ್ಯಾಂನಿಂದ ನೀರು ಬಿಡುವಂತೆ ಕೇಳಿಕೊಳ್ಳಬೇಕಾಗುತ್ತದೆ. ಭೀಮ ನದಿಯಿಂದ ಮತ್ತು ಕೃಷ್ಣ ನದಿಯಿಂದ ನೀರು ಬಿಡತಕ್ಕ ವ್ಯವಸ್ಥೆ ಆಗಬೇಕು. ಅದು ಆಗದೇ ಹೋದರೆ ನದಿ ದಂಡೆಯಲ್ಲಿರತಕ್ಕ ನೂರಾರು ಹಳ್ಳಿಗಳು ಏನಿವೆ ಅವು ನೀರಿಲ್ಲದೆ ಕೊರಗುತ್ತವೆ. ಮುಂದೆ ಮೇ ತಿಂಗಳಲ್ಲಿ ನಿಮಗೆ ಎಷ್ಟು ಹಣ ಕೊಟ್ಟರೂ ನೀರು ಸಿಗುವುದಿಲ್ಲ. ಆದ್ದರಿಂದ ದಯವಿಟ್ಟು ಇದಕ್ಕೆ ತಕ್ಷಣ ನಿಮ್ಮ ಡೆಲಿಗೇಷನ್ ಕಳುಹಿಸುತ್ತೀರೋ ಅಥವಾ ನೀವೇ ಮಹಾರಾಷ್ಟ್ರಕ್ಕೆ ಹೋಗುತ್ತೀರೋ, ಒಟ್ಟಿನಲ್ಲಿ ಏನಾದರೂ ಮಾಡಿ ಈ ಸಮಸ್ಯೆಯನ್ನು ಬಗೆಹರಿಸಬೇಕೆಂದು ಹೇಳುತ್ತೇನೆ. ಇದರಿಂದ ಬಾಂಬೆ ಕರ್ನಾಟಕದಲ್ಲಿರತಕ್ಕ ಹಳ್ಳಿಗಳಿಗೆ ಅನುಕೂಲವಾಗುತ್ತದೆ, ಹೈದರಾಬಾದ್ ಕರ್ನಾಟಕದಲ್ಲಿರತಕ್ಕ ಹಳ್ಳಿಗಳಿಗೆ ಇದರ ಅನುಕೂಲವಾಗುತ್ತದೆಂಬ ಮಾತನ್ನು ಹೇಳಬಯಸುತ್ತೇನೆ. ಇನ್ನು ಕೆಲವೇ ಜಿಲ್ಲೆಗಳ

ಉದಾಹರಣೆಗಳನ್ನು ಕೊಟ್ಟು ನನ್ನ ಮಾತನ್ನು ಮುಗಿಸುತ್ತೇನೆ. ರಾಯಚೂರಿನಲ್ಲಿ ಕೂಡ ಪ್ರತಿದಿನ ಕೇವಲ 25 ರಿಂದ 30 ನಿಮಿಷಗಳವರೆಗೆ ನೀರು ಬಿಡಲಾಗುತ್ತಿದೆ; ಕನಿಷ್ಟಪಕ್ಷ 45 ನಿಮಿಷಗಳವರೆಗಾದರೂ ನೀರು ಸರಬರಾಜು ಮಾಡಿದರೆ ಆ ಸಮಸ್ಯೆ ಸರಿಹೋಗುತ್ತದೆಂಬ ಮಾತನ್ನು ಇವತ್ತು ಅಲ್ಲಿನ ಜನರು ಹೇಳುತ್ತಾರೆ. ಆದರೆ ನೀವು ಇವತ್ತಿನ ದಿವಸ ಅಲ್ಲಿ ನೀರಿನ ತಾಪತ್ರಯ ಇದ್ದರೂ ಕೂಡ ಆ ಕಡೆ ಲಕ್ಷ್ಯ ಇಲ್ಲ. ಏಕೆಂದರೆ ಅಲ್ಲಿ ತುಂಗಭದ್ರ ಚೆನಲ್‌ನಿಂದ ಶಾಶ್ವತವಾಗಿ ನೀರಿನ ಸಮಸ್ಯೆಯನ್ನು ಪರಿಹಾರ ಮಾಡಬೇಕೆಂಬ ಯೋಜನೆ ಇದೆ. ಆದರೆ ಅದಕ್ಕೆ ಬಜೆಟ್‌ನಲ್ಲಿ ಹೆಚ್ಚಿನ ಹಣ ಒದಗಿಸುತ್ತಿಲ್ಲ. ಹೆಚ್ಚಿನ ಹಣ ಒದಗಿಸಿ ಆ ಯೋಜನೆಯನ್ನು ಪೂರ್ಣ ಮಾಡಬೇಕೆಂದು ಪ್ರಯತ್ನ ಮಾಡಿದರೂ ಅದು ಯಾವುದೇ ಯೋಜನೆಯ ಕೆಳಗೆ ಇವತ್ತಿನ ದಿವಸ ಆಗುತ್ತಿಲ್ಲ. ಆದರೂ ಕೂಡ ಏನು ಮಾಡುತ್ತಾರೆಂದರೆ ಟೋಕನ್ ಗ್ರಾಂಟ್ ಇಟ್ಟು ಅವರಿಗೆ ಎಲ್ಲಿ ಬೇಕು ಆ ಕಡೆ ಹೆಚ್ಚಿನ ಹಣ ಕೊಡುತ್ತಾರೆ; ಎಲ್ಲಿ ಅವರಿಗೆ ಬೇಕಾಗಿಲ್ಲ ನಿರ್ಲಕ್ಷ್ಯ ಮಾಡಬೇಕಾಗಿದೆ ಅಲಕ್ಷ್ಯ ಮಾಡಬೇಕಾಗಿದೆ ಆ ಕಡೆ ಹಣ ಕೊಡುವುದಿಲ್ಲ. ಸುಮ್ಮನೆ ಹೋದವರಿಗೆ ಬಜೆಟ್‌ನಲ್ಲಿ ತೋರಿಸುತ್ತಿದ್ದಾರೆ. ನಿಮ್ಮಲ್ಲಿಗೆ ಒಂದು ಕೋಟಿ ರೂಪಾಯಿ ಇಟ್ಟಿದ್ದೇವೆಂದು ಹೇಳುತ್ತಾರೆ. 50 ಕೋಟಿ ರೂಪಾಯಿಗಳ ಪ್ರಾಜೆಕ್ಟ್ ಇದ್ದು ಅದಕ್ಕೆ ಒಂದು ಕೋಟಿ ರೂಪಾಯಿಗಳನ್ನು ಇಟ್ಟರೆ ಕೆಲಸ ತೆಗೆದುಕೊಳ್ಳುವುದಿಲ್ಲ. ಮೂರನೇ ಒಂದು ಭಾಗ ಪ್ರಾವಿಷನ್ ಇಲ್ಲವೆಂದು ಇಲಾಖೆಯವರು ರಿಜೆಕ್ಟ್ ಮಾಡುತ್ತಾರೆ. ಎಫ್.ಡಿ.ಗೆ ಹೋದರೆ ವಾಪಸ್ಸು ಬರುತ್ತದೆ; ಅದಕ್ಕೆ ಆಡಳಿತಾತ್ಮಕ ಒಪ್ಪಿಗೆ ದೊರೆಯುವುದಿಲ್ಲ, ತಾಂತ್ರಿಕ ಒಪ್ಪಿಗೆ ದೊರೆಯುವುದಿಲ್ಲ. ಈ ಪರಿಸ್ಥಿತಿ ಇವತ್ತು ರಾಯಚೂರು ಜಿಲ್ಲೆಯಲ್ಲಿದೆ. ರಾಯಚೂರು ಜಿಲ್ಲೆಯ ಬಗ್ಗೆ ಹೇಳಬೇಕಾದರೆ, ರಾಯಚೂರು ತಾಲ್ಲೂಕಿನಲ್ಲಿ 6 ಹಳ್ಳಿಗಳು, ದೇವದುರ್ಗದಲ್ಲಿ 7 ಹಳ್ಳಿಗಳು, ಮಾನ್ವಿಯಲ್ಲಿ 11 ಹಳ್ಳಿಗಳು, ಲಿಂಗಸೂರಿನಲ್ಲಿ 12 ಹಳ್ಳಿಗಳು, ಸಿಂಧನೂರಿನಲ್ಲಿ 29, ಗಂಗಾವತಿಯಲ್ಲಿ 12 ಯಲಬುರ್ಗದಲ್ಲಿ ಸುಮಾರು 7 ಹಳ್ಳಿಗಳು ಈ ಪರಿಸ್ಥಿತಿಗೆ ಒಳಗಾಗಿವೆ. ಈ ರೀತಿ ಇಲ್ಲಿ ಬಹಳಷ್ಟು ನೀರಿನ ತಾಪತ್ರಯ ಇದೆ. ಇಂಥಕಡೆಗೆ ಬೇರೆ ಕಡೆಯಿಂದ ನೀರು ಟ್ರಾನ್ಸ್‌ಪೋರ್ಟ್ ಮಾಡಿಕೊಡಬೇಕೆಂಬ ಬೇಡಿಕೆ ಅಲ್ಲಿನ ಜಿಲ್ಲಾಧಿಕಾರಿಗಳಿಂದ ಬಂದಿದೆ. ಇದಕ್ಕೆ ಎಷ್ಟು ಹಣ ಬಿಡುಗಡೆ ಮಾಡಬೇಕೆಂಬುದಕ್ಕೆ ಎಸ್ಟಿಮೇಟ್ ಕೂಡ ಕಳುಹಿಸಿದ್ದಾರೆ. ಆದರೆ ಸರ್ಕಾರದಿಂದ ಟ್ರಾನ್ಸ್‌ಪೋರ್ಟ್‌ೇಷನ್‌ಗೆ ಹಣ ಹೋಗಿಲ್ಲ. ಇದು ಏತಕ್ಕೆ ಹೋಗಿಲ್ಲ ಎಂಬುದಕ್ಕೆ ಇವತ್ತು ಸರ್ಕಾರದವರು ಉತ್ತರ ಹೇಳಬೇಕು. ಮಾನ್ಯ ಎಂ.ಎಸ್.ಪಾಟೀಲರಿಗೆ ಗೊತ್ತಿರಬಹುದು. ಜಿಲ್ಲಾಧಿಕಾರಿಗಳು ಇಷ್ಟೊಂದು ಹಣ ಕೇಳಿದರೂ ಕುಡಿಯುವ ನೀರಿನ ಟ್ರಾನ್ಸ್‌ಪೋರ್ಟೇಷನ್‌ಗೆ ಹಣ ಬಿಡುಗಡೆಯಾಗಿಲ್ಲ. ಇದಕ್ಕೆ ತಾವು ಮತ್ತು ಸರ್ಕಾರ ಉತ್ತರವನ್ನು ಕೊಡಬೇಕಾಗುತ್ತದೆ. ದಯವಿಟ್ಟು ಈ ಕಡೆ ಸರ್ಕಾರ ಏತಕ್ಕೆ ಗಮನ ಹರಿಸಿಲ್ಲ ಎಂಬುದನ್ನು ಸ್ಪಷ್ಟಪಡಿಸಬೇಕು. ಇವತ್ತು ಲಿಂಗಸೂರಿನಂಥ ಊರಿನಲ್ಲಿ ಲೀಟರ್ ರೇಟ್ ಮೇಲೆ ನೀರು ಮಾರಾಟ ಮಾಡುತ್ತಿದ್ದಾರೆ. ಸಾಮಾನ್ಯವಾಗಿ

ಮೀಟಿಂಗ್‌ಗಳಲ್ಲಿ ಬಿಸ್ಲರಿ ವಾಟರ್ ಅನ್ನು ದುಡ್ಡುಕೊಟ್ಟು ತಂದು ಕುಡಿಯುತ್ತಾರೆ. ಇವತ್ತು ಆ ಪರಿಸ್ಥಿತಿ ಹಳ್ಳಿಯ ಜನರದ್ದು ಆಗಿದೆ. ಲೀಟರ್ ಲೆಕ್ಕದಲ್ಲಿ ನೀರನ್ನು ಖರೀದಿ ಮಾಡುತ್ತಾರೆ. ಆದೇ ರೀತಿಯಾಗಿ ಚಾಮರಾಜನಗರದಂತಹ ಮಲೆನಾಡು ಪ್ರದೇಶದಲ್ಲಿ ಎಲ್ಲಿ ಹೆಚ್ಚಿನ ಗುಡ್ಡಗಾಡು ಪ್ರದೇಶ ಇದೆ ಅಂಥ ಕಡೆ ಕೂಡ ನೀರಿನ ಕೊರತೆ ಇದೆ ಎಂದು ಅಲ್ಲಿಯೂ ಸಹ ಮುಷ್ಕರ ಮಾಡಿದ್ದಾರೆ. ಖಾಲಿ ಕೊಡ ತೆಗೆದುಕೊಂಡು ಕುಳಿತಿದ್ದಾರೆ. ಅದರ ಬಗ್ಗೆ ಮಾನ್ಯ ವಾಟಾಳ್ ನಾಗರಾಜ್ ಅವರು ಆಮೇಲೆ ಹೇಳುತ್ತಾರೆ. ಅಂದರೆ ಈ ನೀರಿನ ಕೊರತೆ ಯಾವ ಊರಿಗೂ ಬಿಟ್ಟಿಲ್ಲ. ಚಾಮರಾಜನಗರ ಮಲೆನಾಡು ತಾಲ್ಲೂಕಿನಲ್ಲಿ ಹೇರಿದೆ. 71 ತಾಲ್ಲೂಕುಗಳಲ್ಲಿ ಅದೂ ಒಂದು ಆಗಿದೆ. ಅದನ್ನು ನೀವೇ ಸೇರಿಸಿದ್ದೀರೆಂದು ಹೇಳುತ್ತಾರೆ.

ಶ್ರೀ ವಾಟಾಳ್ ನಾಗರಾಜ್: ನೀವೆಲ್ಲಾ ಒಂದು ದೊಡ್ಡ ಪಿತೂರಿ ಮಾಡುತ್ತಿದ್ದೀರೆಂದು ಕಾಣುತ್ತದೆ. ಹೇಗಾದರೂ ಇರಲಿ ಎಂದು ನಾವು ನಿಮ್ಮ ಜೊತೆಯಲ್ಲಿದ್ದೇವೆ. ಆದರೂ ನಿಮಗೆ ಇನ್ನೂ ನಂಬಿಕೆ ಬಂದಿಲ್ಲ. ಅವರು ಮುಖ್ಯಮಂತ್ರಿಯಾಗಿದ್ದಾಗ ಎಲ್ಲಾ ಕಡೆ ಮಾಡಬೇಕೆಂದು ದೊಡ್ಡ ಪಿತೂರಿ ನಡೆಯುತ್ತಿದೆ. ಇದು ಸರಿಯಲ್ಲ. ತಾವು ನಮ್ಮ ರಕ್ಷಣೆಗೆ ಬರಬೇಕು. ನಾನು ಶ್ರೀ ಖರ್ಗೆಯವರ ಬಗ್ಗೆ, ವಿರೋಧ ಪಕ್ಷದ ನಾಯಕರಾಗಿ ನಮ್ಮೆಲ್ಲರನ್ನು ಒಟ್ಟಿಗೆ ತೆಗೆದುಕೊಂಡು ಹೋಗುತ್ತಾರೆಂದರೆ ಇದರ ಹಿಂದೆ ಏನೋ ಪಿತೂರಿ ನಡೆಯುತ್ತಿದೆ. ಇದು ಒಳ್ಳೆಯದಲ್ಲ. ಅವರ ಸರ್ಕಾರ ಮನಗಂಡು ಅಲ್ಲಿ ಅನ್ಯಾಯವಾಗಿದೆ ಎಂದು ತೊಂದರೆಯಾಗಿದೆ ಎಂದು ಅದನ್ನು ಮಲೆನಾಡಿಗೆ ಸೇರಿಸಿದರು. ಆಗ ಅವರು ಕಂದಾಯ ಮಂತ್ರಿಗಳಾಗಿದ್ದರು, ಇವರು ಮುಖ್ಯ ಮಂತ್ರಿಗಳಾಗಿದ್ದರು. ಆಗ ಅಲ್ಲಿ ಏನೋ ನಡೆದಿದೆ. ಅದನ್ನು ಮರೆತು ಇವರು ಈ ರೀತಿ ಹೋದರೆ ನಮ್ಮ ಪರಿಸ್ಥಿತಿ ಏನು?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಒಂದು ದಿವಸವಾದರೂ ನಮ್ಮಿಂದ ಅನ್ಯಾಯವಾಗಿದೆ ಎಂದು ಹೇಳಿದರೆ ನಾನು ಅವರು ಹೇಳಿದ್ದನ್ನು ಒಪ್ಪುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ನಾನು ಅನ್ಯಾಯವಾಗಿದೆ ಎಂದು ಹೇಳುವುದಕ್ಕೆ ಹೋಗುವುದಿಲ್ಲ.

ಶ್ರೀ ಕೆ.ಎಸ್.ಈಶ್ವರಪ್ಪ: ಮಾನ್ಯ ಖರ್ಗೆಯವರು ಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಚಾಮರಾಜನಗರವನ್ನು ಮಲೆನಾಡು ಅಭಿವೃದ್ಧಿಗೆ ಸೇರಿಸಿದ್ದು ಅನ್ಯಾಯವೋ ಅಥವಾ ಇವತ್ತು ಚಾಮರಾಜ ನಗರವನ್ನು ಟೀಕಿಸಿದ್ದು ಅನ್ಯಾಯವೋ? ಅದನ್ನು ಅವರೇ ಸ್ಪಷ್ಟಪಡಿಸಬೇಕು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಾನು ಹೇಳಿದ್ದು ಅಲ್ಲಿಯೂ ಕುಡಿಯುವ ನೀರಿಗೆ

ತೊಂದರೆ ಇದೆ ಎಂದು.

ಶ್ರೀ ವಾಟಾಳ್ ನಾಗರಾಜ್: ಇಡೀ ರಾಜ್ಯದಲ್ಲಿ ಜಾಸ್ತಿ ತೊಂದರೆ ಇರುವುದು ಚಾಮರಾಜ ನಗರದಲ್ಲಿ ಎಂದು ಒತ್ತಿ ಒತ್ತಿ ಹೇಳುತ್ತಿದ್ದಾರೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ರಾಜ್ಯದ ಎಲ್ಲಾ ಕಡೆ ಕುಡಿಯುವ ನೀರಿನ ತೊಂದರೆ ಇದೆ. ಬೆಳಗಾಂ ಪರಿಸ್ಥಿತಿ ತಮಗೆ ಗೊತ್ತಿದೆ. ಬೆಳಗಾಂನಲ್ಲಿ ಇಂಥ ಪರಿಸ್ಥಿತಿ ಯಾವತ್ತೂ ಇರಲಿಲ್ಲ. ಇವತ್ತು ಬೆಳಗಾಂ ಜಿಲ್ಲೆಯಲ್ಲಿ ಕುಡಿಯುವ ನೀರಿಗೆ ತುಂಬಾ ಅಭಾವವಾಗಿದೆ. ಬೆಳಗಾಂ ಸಿಟಿಯವರಿಗೆ ಸುಮಾರು 22 ಕಿಲೋಮೀಟರ್ ದೂರದಲ್ಲಿರತಕ್ಕ ಕುಡಿಯುವ ನೀರಿನ ವ್ಯವಸ್ಥೆ ಏನಿದೆ ಅದು ಇವತ್ತು ಬತ್ತಿಹೋಗಿ ಅನೇಕ ಬೋರ್‌ವೆಲ್‌ಗಳಿಂದ ನೀರು ಪಡೆದುಕೊಳ್ಳತಕ್ಕ ವ್ಯವಸ್ಥೆಯನ್ನು ಅಲ್ಲಿ ಕಾಣುತ್ತಿದ್ದೇವೆ. ಇಂಥ ಒಂದು ಕೆಟ್ಟ ಪರಿಸ್ಥಿತಿ ಎಲ್ಲಾ ಜಿಲ್ಲೆಗಳಲ್ಲಿ ಒದಗಿಬಂದಿದೆ. ಸುಮಾರು 37 ಹಳ್ಳಿಗಳಲ್ಲಿ ಸಾಕಷ್ಟು ನೀರಿನ ಬವಣೆ ಇದೆ ಎಂಬುದು ತಿಳಿದುಬಂದಿದೆ. ಅದಕ್ಕೆ ಸರ್ಕಾರ ಕ್ರಮ ಜರುಗಿಸಿಲ್ಲ ಎಂಬ ಮಾತನ್ನು ಸ್ಪಷ್ಟವಾಗಿ ಹೇಳುತ್ತೇನೆ. ಬಳ್ಳಾರಿ ಜಿಲ್ಲೆಯ ಪರಿಸ್ಥಿತಿ ತಮಗೆ ಗೊತ್ತಿದೆ. ಬಳ್ಳಾರಿಯಲ್ಲಿ ಬಿಸಿಲಿನ ತಾಪ 44-45 ಡಿಗ್ರಿಯವರೆಗೆ ಹೋಗುತ್ತದೆ. ಮನುಷ್ಯರು ಫ್ಯಾನ್ ಹಾಕಿಕೊಂಡರೂ ಸಹ ಕೂರುವುದಕ್ಕಾಗುವುದಿಲ್ಲ. ಇನ್ನು ನೀರಿನ ಪರಿಸ್ಥಿತಿಯನ್ನು ಕೇಳಲೇಬೇಡಿ. ಅಂಥ ಪರಿಸ್ಥಿತಿ ಇದ್ದಾಗ ಬರಗಾಲ ಪೀಡಿತ ಪ್ರದೇಶಗಳು ಏನಿರುತ್ತವೆ, ಅದು ಕೋಲಾರ ಇರಬಹುದು, ಬಳ್ಳಾರಿ ಇರಬಹುದು, ರಾಯಚೂರು ಇರಬಹುದು, ಬಿಜಾಪುರ ಇರಬಹುದು ಇವಕ್ಕೆ ಹೆಚ್ಚಿನ ಹಣ ಮತ್ತು ಒತ್ತನ್ನು ಕೊಡತಕ್ಕದ್ದು ಬೇಕು. ಆದರೆ ದುರ್ದೈವದಿಂದ ಅಂಥ ಜಿಲ್ಲೆಗಳಿಗೆ ಹೆಚ್ಚಿನ ಹಣ ಬಿಡುಗಡೆ ಮಾಡತಕ್ಕದ್ದು ಆಗಿಲ್ಲ. ನಾನು ತಿಳಿದುಕೊಂಡಿದ್ದೆ, ಮಾನ್ಯ ಪ್ರಕಾಶ್ ಅವರು ಗ್ರಾಮೀಣಾಭಿವೃದ್ಧಿ ಸಚಿವರಾಗಿರುವಾಗ ಬಳ್ಳಾರಿಯಲ್ಲಿ ನೀರಿನ ಕೊರತೆ ಇರುವುದಿಲ್ಲ, ಎಲ್ಲವನ್ನು ನೀಗಿಸಿದ್ದಾರೆ ಅಥವಾ ಎಕ್ಸ್‌ಟ್ರಾ ಪ್ರಿಕಾಷನ್ ತೆಗೆದುಕೊಂಡು, ಆದಷ್ಟು ಕೇರ್ ತೆಗೆದುಕೊಂಡು ನೀರಿನ ಸಮಸ್ಯೆ ಬಗೆಹರಿದಿದೆ ಎಂದು ನಾನು ತಿಳಿದುಕೊಂಡಿದ್ದೆ. ಆದರೆ ಅಲ್ಲಿಯೂ ಕೂಡ ಬಳ್ಳಾರಿ ಪ್ರಾಪರ್‌ನಲ್ಲಿ ಒಂದು ಮಡಿಕೆ ನೀರಿನ ಬೆಲೆ 2 ರಿಂದ 5 ರೂಪಾಯಿ ಇದೆ ಎಂದು ಇವತ್ತು ವರದಿಯಾಗಿದೆ. ಮಾನ್ಯ ದಿವಾಕರ್ ಬಾಬು ಅವರು ಹೇಳುತ್ತಿದ್ದರು, ಸಾಕಷ್ಟು ನೀರಿನ ಬವಣೆ ಅಲ್ಲಿಯೂ ಇರುವ ಕಾರಣ ಜನರು ತೊಂದರೆಗೆ ಈಡಾಗಿದ್ದಾರೆ. ಇದೇ ಮಾತು ಚಿತ್ರದುರ್ಗ ಜಿಲ್ಲೆಯಲ್ಲಿದೆ, ಇದೆ ಮಾತು ನಮ್ಮ ತುಮಕೂರು ಜಿಲ್ಲೆಯಲ್ಲಿದೆ, ಇದೇ ಮಾತು ನಮ್ಮ ಮೈಸೂರು ಜಿಲ್ಲೆಯಲ್ಲಿದೆ ಮತ್ತು ಧಾರವಾಡದಲ್ಲಿ ಕೂಡ ಇದೆ. ಅದೇ ರೀತಿ ಇವತ್ತು ಚಿಕ್ಕಮಗಳೂರಿನಂಥ ಜಿಲ್ಲೆಯಲ್ಲಿ ಸಹ ಈ ಕುಡಿಯುವ ನೀರಿನ ತೊಂದರೆಯಾಗಿದೆ. ಉಡುಪಿಯಲ್ಲಿ ಸಹ ಈ ಸಮಸ್ಯೆ ಉದ್ಭವಿಸಿದೆ ಎಂದು ಇವತ್ತಿನ ಪತ್ರಿಕೆಯಲ್ಲಿ ಬಂದಿದೆ ಹೀಗೆ ಎಲ್ಲಾ ಜಿಲ್ಲೆಗಳಲ್ಲಿ ಒಂದೇ ಎಂದು ಅಲ್ಲ ಪ್ರತಿಯೊಂದು ಜಿಲ್ಲೆಗಳಲ್ಲಿ ಈವೊಂದು ಕುಡಿಯುವ ನೀರಿನ

ಸಮಸ್ಯೆ ಇದ್ದ ಕಾರಣ ಸರ್ಕಾರ ಆ ಕಡೆಗೆ ಗಮನಹರಿಸಿಲ್ಲ. ಅವರು ಹೇಳುವುದೇನು ನಾವು ಮೊನ್ನೆ ಹಣ ಬಿಡುಗಡೆ ಮಾಡಿದ್ದೇವೆಂದು. ತಮ್ಮ ಗಮನಕ್ಕೆ ಒಂದು ವಿಚಾರ ತರುತ್ತೇನೆ. ಅವರಿಗೆ ತಾವು ಶಹಭಾಷಗಿರಿ ಕೊಡುತ್ತೀರೋ ಏನು ಕೊಡುತ್ತಿರೋ ಅದು ತಮಗೆ ಬಿಟ್ಟಿದ್ದು. ಟೋಟಲ್ ಹಣ ರಿಲೀಸ್ ಆಗಿದ್ದು ಮಾನ್ಯ ಮಂಜುನಾಥ್‌ರವರೇ, ದಿನಾಂಕ 31-3-98ಕ್ಕೆ 101 ಕೋಟಿ ರೂ.ಗಳು ಅದರಲ್ಲಿ ಖರ್ಚಾಗಿದ್ದು ಎಷ್ಟಂದರೆ 83 ಕೋಟಿ ರೂ.ಗಳು. ಇಲ್ಲಿ ಎಕ್ಸಸ್ ಎಕ್ಸ್‌ಪೆಂಡಿಚರ್ ಆಗಿದೆಯೆಂದು ಬರೆದುಕೊಂಡು, ನಾವು ಹಣವಿಲ್ಲವೆಂದರೆ ನಮ್ಮಲ್ಲಿ ಹಣವಿದೆಯೆಂದು ಹೇಳುತ್ತೀರಿ. ನಾವು ರಿಲೀಸ್ ಮಾಡಿದ್ದು 101 ಕೋಟಿರೂ. ಎಂದು ತಾವು ಹೇಳುತ್ತೀರಿ. ಏಕೆಂದರೆ ಇದರಲ್ಲಿ ಸೆಂಟ್ರಲ್ ಸೆಕ್ಟಾರ್ ಸ್ಟೇಟ್, ಸೆಕ್ಟಾರ್ ಹಣವಿದ್ದ ಕಾರಣ ಹಣ ಉಳಿದಿರಬಹುದು. ಆದರೆ ನೀವು ಖರ್ಚು ಮಾಡಿದ್ದು 83 ಕೋಟಿ ಮಾತ್ರ. ಅಂದರೆ 18 ಕೋಟಿ ರೂಪಾಯಿಗಳನ್ನು ಹೋದವರ್ಷ ನಿಮ್ಮಲ್ಲಿಯೇ ಇಟ್ಟುಕೊಂಡಿದ್ದೀರಿ. ಒಂದು ಕಡೆ ನೀರಿನ ಬವಣೆಯಿದೆ ಟ್ರಾನ್ಸ್‌ಪೋರ್ಟೇಷನ್‌ಗೆ ದುಡ್ಡು ಕೊಡಿ ಅಂದರೆ ಹಣವಿಲ್ಲವೆಂದು ಹೇಳುತ್ತೀರಿ. ಇನ್ನೊಂದು ಕಡೆ ಹಣವನ್ನು ಖರ್ಚುಮಾಡದೆ ಇಟ್ಟುಕೊಂಡಿದ್ದೀರಿ. ಯಾರು ಇದಕ್ಕೆ ಜವಾಬ್ದಾರರು? ಯಾರು ಆ ಅಧಿಕಾರಿಗಳು? ಏನು ಕ್ರಮ ಜರುಗಿಸಿದ್ದೀರಿ? ಇದನ್ನು ಹೇಳಬೇಕು. ಜೊತೆಯಲ್ಲಿ ಇವತ್ತು ಫಂಡ್ ಅವೈಲಬಲ್ ಇರತಕ್ಕದ್ದು ಎಷ್ಟಿತ್ತು? 104 ಕೋಟಿ ರೂಗಳು. 104 ಕೋಟಿಯಲ್ಲಿ 101 ಕೋಟಿ ರಿಲೀಸ್ ಮಾಡಿದ್ದೀರಿ. ಅದರಲ್ಲಿ ಖರ್ಚು ಮಾಡಿದ್ದು 83 ಕೋಟಿ. ಆದರೆ ಲೇಟೆಸ್ಟ್ ಇನ್‌ಫರ್ಮೇಷನ್ ಅವರು ಕೊಟ್ಟಿದ್ದು 83 ಕೋಟಿ ಕೊಟ್ಟರೂ ಕೂಡ ಸೆಂಟ್ರಲ್ ಸೆಕ್ಟಾರ್‌ನಲ್ಲಿ ಏನಾಗಿದೆ 104 ಕೋಟಿಯಲ್ಲಿ ಎಕ್ಸ್‌ಪೆಂಡೀಚರ್ ಆಗಿದ್ದು 72 ಕೋಟಿ ಮಾತ್ರ. ಅವರು ಕೊಟ್ಟಿರುವ ಪುಸ್ತಕದ ಆಧಾರದ ಮೇಲೆ ಏನು ಅಂಕಿಸಂಖ್ಯೆಯನ್ನು ಇಲಾಖೆಯವರು ಒದಗಿಸಿದ್ದಾರೆ ಅದರ ಮೇಲೆ ಹೇಳುತ್ತಿದ್ದೇನೆ. 104 ಕೋಟಿಯಲ್ಲಿ 72 ಕೋಟಿ ಖರ್ಚಾಗಿದೆ. ಖರ್ಚಾಗದೆ ಇರುವುದು 31 ಕೋಟಿ. ಸ್ಟೇಟ್ ಸೆಕ್ಟಾರ್‌ನಲ್ಲಿ ಖರ್ಚಾಗದಿರುವುದು 18 ಕೋಟಿ. ಹೀಗೆ ಒಟ್ಟು 49.46 ಕೋಟಿ. ಅಂದರೆ 50 ಕೋಟಿ ಇನ್ನು ಖರ್ಚಾಗದೆ ಉಳಿದಿರುವ ಹಣ. ಅಂದಾಗ ನಾವು ಯಾವ ನಂಬಿಕೆಯಿಂದ ಹೇಳೋಣ ಈ ಸರ್ಕಾರ ಇನ್ನು ಹೆಚ್ಚು ಖರ್ಚುಮಾಡಿಯೆಂದು? ಅವೈಲಬಲ್ ಫಂಡ್‌ನಲ್ಲಿ ಖರ್ಚು ಮಾಡಿಲ್ಲ. ನ್ಯಾಚುರಲ್ ಕೆಲಾಮಿಟಿ ಹಣದಲ್ಲಿ ಕೇಂದ್ರಸರ್ಕಾರದಿಂದ ಬೇಡತಕ್ಕ ಪ್ರಶ್ನೆ ಏಕೆ ಬಂತು? ನೀರಿನ ಅಭಾವದಲ್ಲಿ ನಿಮ್ಮ ಪ್ರಕಾರ ಅದು ಇಲ್ಲವೆಂದು ಆಗುತ್ತದೆ. ಅಥವಾ ಜಿಲ್ಲಾಧಿಕಾರಿಗಳು ಖರ್ಚು ಮಾಡುವುದಕ್ಕೆ ತಯಾರಾಗಿಲ್ಲವೆಂದು ಕೊಟ್ಟಿರಬಹುದು ಇಲ್ಲಿ. ಹಣವಿದ್ದೂ ಕೂಡ ಖರ್ಚು ಆಗಲಿಲ್ಲ, ಇದಕ್ಕೆ ಹೊಣೆ ಯಾರು? ಇದಕ್ಕೆ ಯಾರು ಜವಾಬ್ದಾರರು? ಏಕೆ ಈ ರೀತಿ ಸರ್ಕಾರ ಮಾಡುತ್ತಿದೆಯೆಂದು ನನಗೆ ಅರ್ಥವಾಗುತ್ತಿಲ್ಲ. ಅದಕ್ಕೆ ಸ್ಪಷ್ಟವಾದ ವಿಚಾರವಿದೆ. ಆಮೇಲೆ ನ್ಯಾಚುರಲ್ ಕೆಲಾಮಿಟಿಯಲ್ಲಿ 50 ಕೋಟಿ ಇದರಲ್ಲಿ ನ್ಯಾಚುರಲ್ ಕೆಲಾಮಿಟಿಯಲ್ಲಿ ಜಿಲ್ಲಾಧಿಕಾರಿಗಳಲ್ಲಿ 1-4-97ಕ್ಕೆ ಬ್ಯಾಲೆನ್ಸ್ ಇರತಕ್ಕದ್ದು

25 ಕೋಟಿ 43 ಲಕ್ಷ. ರಿಲೀಸ್ ಆಗಿದ್ದು ಕುಡಿಯುವ ನೀರಿಗೆ 36ಕೋಟಿ. ಅದರಲ್ಲಿ ಇನ್ನು 25 ಕೋಟಿ ಅವರ ಹತ್ತಿರ ಪೆಂಡಿಂಗ್ ಇದೆ. ಸೆಂಟ್ರಲ್ ಮತ್ತು ಸ್ಟೇಟ್ ಸರ್ಕಾರ್‌ನಿಂದ ಬರತಕ್ಕ 50ಕೋಟಿ ಏನಾಯಿತು? ಇದೆಲ್ಲಾ ಲೆಕ್ಕಹಾಕಿದರೆ 75ಕೋಟಿ ರೂಪಾಯಿ ನೀರಿಗಾಗಿ ಕೊಟ್ಟಂತಹ ಹಣವನ್ನು ಖರ್ಚುಮಾಡದೆ ಮಾರ್ಚಿ 98ರೊಳಗೆ ಉಳಿದಿದೆ ಎನ್ನುವುದಕ್ಕೆ ಇದೊಂದು ಉದಾಹರಣೆ. ಆಮೇಲೆ ಇನ್ನೊಂದು ವಿಚಾರವನ್ನು ಹೇಳುತ್ತೇನೆ. ನಾವು ಹಣ ಬಿಡುಗಡೆ ಮಾಡಿದ್ದೇವೆಂದು ಹೇಳಿದ್ದೀರಿ; ಎಂದು ಮಾಡಿದ್ದೀರಿ? ವಿಧಾನಸಭೆ ಸೇರಿದ್ದು 15ನೇ ತಾರೀಖು ಆದರೆ ನೀವು ಹಣ ಬಿಡುಗಡೆ ಮಾಡಿದ್ದು 15ನೇ ತಾರೀಖು. ಇವರು ಹಣ ಬಿಡುಗಡೆ ಮಾಡಿದ್ದು ಬೆಂಗಳೂರುನಗರಕ್ಕೆ 15 ಲಕ್ಷ, ಬೆಂಗಳೂರು ಗ್ರಾಮಾಂತರಕ್ಕೆ 80 ಲಕ್ಷ; ಹೀಗೆ ಇಡೀ ರಾಜ್ಯದಲ್ಲಿ 36 ಕೋಟಿ 26 ಲಕ್ಷ ರೂಪಾಯಿಗಳನ್ನು ಮೊನ್ನೆ 15-4-98ಕ್ಕೆ ಬಿಡುಗಡೆ ಮಾಡಿದ್ದಾರೆ. ನಾನು ನಿಮ್ಮನ್ನು ಕೇಳುತ್ತೇನೆ ರಿವ್ಯೂ ಏಕೆ ಮಾಡಲಿಲ್ಲ? 75 ಕೋಟಿ ರೂಪಾಯಿ ಹೋದ ವರ್ಷದ್ದು ಏನಾಯಿತು? ಏಕೆ ಜಿಲ್ಲಾಧಿಕಾರಿಗಳಲ್ಲಿ 25 ಕೋಟಿ ರೂಪಾಯಿ ಉಳಿಯಿತು? 36ಕೋಟಿ ರೂಪಾಯಿಗಳನ್ನು ಯಾವ ಬಾಬ್ತಿನಲ್ಲಿ ಖರ್ಚುಮಾಡಿದ್ದೀರಿ? ಏಕೆಂದರೆ ಟ್ರಾನ್ಸ್‌ಪೋರ್ಟೇಷನ್‌ಗೆ ಅನೇಕ ಜಿಲ್ಲಾಧಿಕಾರಿಗಳು ಹಣವನ್ನು ಕೇಳಿದಾಗ ಬಿಡುಗಡೆ ಮಾಡುವುದಕ್ಕೆ ಆಗಿಲ್ಲ ಅಂದರೆ ನೀರು ಸರಬರಾಜು ಹೇಗೆ ಮಾಡುತ್ತೀರಿ? ಅದಲ್ಲದೆ ಇನ್ನೂ ಅಂಕಿಅಂಶಗಳನ್ನು ಈಗ ಹೇಳುವುದಿಲ್ಲ ಡಿಮಾಂಡ್ ಬಂದಾಗ ಸವಿಸ್ತಾರವಾಗಿ ಹೇಳುತ್ತೇನೆ. ಆದರೆ ಒಂದು ಮಾತನ್ನು ಹೇಳುತ್ತೇನೆ, ಗ್ರಾಮೀಣ ನೀರು ಸರಬರಾಜು ಯೋಜನೆಯಲ್ಲಿ ಇವರು ಕೊಟ್ಟಂತಹ ಅನುದಾನ ಮತ್ತು ಲೆಕ್ಕ ನೋಡಿದಾಗ ಸುಮಾರು 38 ಕೋಟಿ ಅದರಲ್ಲೂ ಕೂಡ ಉಳಿತಾಯ ತೋರಿಸಿದ್ದೀರಿ. ಎಕ್ಸಸ್ ಎಕ್ಸ್‌ಪೆಂಡಿಚರ್ ಆಗಿಲ್ಲ. ಬಿಡುಗಡೆ ಆದ ಹಣ 101 ಕೋಟಿ ಇದ್ದರೂ ಅದರಲ್ಲಿ ಖರ್ಚಾಗಿದ್ದು 83 ಕೋಟಿ ಮಾತ್ರ ಎಂದು ಹೇಳಿದ್ದೀರಿ. ಅದಕ್ಕಾಗಿ ಇದೆಲ್ಲವನ್ನೂ ನೋಡಿದಾಗ, ಇವತ್ತು ಕುಡಿಯುವ ನೀರಿಗಾಗಿ ಹೆಚ್ಚಿನ ಗಮನವನ್ನು ಜಿಲ್ಲಾಪಂಚಾಯಿತಿಗಳಾಗಲೀ ಜಿಲ್ಲಾಧಿಕಾರಿಗಳಾಗಲೀ ಕೊಟ್ಟಿಲ್ಲವೆನ್ನುವುದಕ್ಕೆ ಇದೊಂದು ಉದಾಹರಣೆ. ಪಟ್ಟಣ ಪ್ರದೇಶಗಳಲ್ಲಿ ಅದರಲ್ಲಿ ಬೆಂಗಳೂರುನಗರ ಪ್ರದೇಶದಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಕೆಟ್ಟುಹೋಗಿದೆ. ಅದರ ಬಗ್ಗೆ ಪ್ರಸ್ತಾಪ ಮಾಡಿದಾಗ, ಅದಕ್ಕೆ ಸೆಪರೇಟಾಗಿ ಉತ್ತರ ಕೊಡುತ್ತೇನೆಂದು ಮಾನ್ಯ ಅನಂತನಾಗ್‌ರವರು ಹೇಳಿದ್ದಾರೆ. ಒಇಸಿಎಫ್ ಜಪಾನ್ ಅಲ್ಲಿಂದ ಏಡ್ ತೆಗೆದುಕೊಳ್ಳುವುದು ಏನಿದೆ ಜಪಾನ್ ಏಡ್‌ನ್ನು ನಿಲ್ಲಿಸಬೇಕೆಂದು ಹೇಳಿ ತಮಿಳುನಾಡು ಮುಖ್ಯಮಂತ್ರಿಗಳಾದ ಎಂ.ಕರುಣಾನಿಧಿಯವರು ಲೆಟರ್ ಬರೆದಿದ್ದಾರೆ. ಅದರ ಬಗ್ಗೆ ಸವಿಸ್ತಾರವಾದ ಸ್ಟೇಟ್‌ಮೆಂಟನ್ನು ಇಲ್ಲಿ ಕೊಡಬೇಕಾಗುತ್ತದೆ. ಏಕೆಂದರೆ ಕಾವೇರಿ 4ನೇ ಹಂತದ ಕುಡಿಯುವ ನೀರಿನ ವ್ಯವಸ್ಥೆಯನ್ನು ಕೆಡಿಸಬೇಕೆಂದು ಈ ಯೋಜನೆಯನ್ನು ನಿಲ್ಲಿಸಬೇಕೆಂದು ತಮಿಳುನಾಡಿನವರು ಅಬ್ಜೆಕ್ಷನ್ ಮಾಡುತ್ತಿದ್ದಾರೆ. ಅದರ ಬಗ್ಗೆ ಸರ್ಕಾರದ ನಿಲುವೇನು? ಸರ್ಕಾರ ಯಾವ ನಿಲುವನ್ನು ತೆಗೆದುಕೊಂಡಿದೆ? ಅದರ ಬಗ್ಗೆ

ಸಪರೇಟ್ ಹೇಳಿಕೆಯನ್ನು ಕೊಡಬೇಕು. ನಾನು ಇನ್ನು ಹೆಚ್ಚಿಗೆ ಪ್ರಸ್ತಾಪ ಮಾಡದೆ ಇಷ್ಟು ಮಾತ್ರ ಹೇಳುತ್ತೇನೆ, ಇವತ್ತು ನೀರಿನ ಬವಣೆ ಹಾಹಾಕಾರವಿದೆ. ಕುಡಿಯುವ ನೀರಿಗೆ ಬಹಳ ತೊಂದರೆಯಿದೆ. ಒಂದು ಕಡೆ ಹಣವಿದ್ದರೂ ಕೂಡ ಯೋಜನೆಗಳನ್ನು ತೀವ್ರಗತಿಯಿಂದ ಇಂಪ್ಲಿಮೆಂಟ್ ಮಾಡಲಿಕ್ಕೆ ಜಿಲ್ಲಾಧಿಕಾರಿಗಳು ಸಾಕಷ್ಟು ಆಸಕ್ತಿಯನ್ನು ವಹಿಸಿಲ್ಲ. ಅವರ ಮೇಲೆ ಕ್ರಮವನ್ನು ಜರುಗಿಸಬೇಕೆನ್ನುವ ಮಾತನ್ನು ಹೇಳುತ್ತೇನೆ. ಅದಕ್ಕೆ ಅವರಿಂದ ಸಮಾಧಾನಕರವಾದ ಉತ್ತರವನ್ನು ಬಯಸುತ್ತೇನೆ. ಉತ್ತರ ಕೊಟ್ಟಮೇಲೆ ಪುನಃ ಏನು ಕ್ಲಾರಿಫಿಕೇಷನ್ ಕೇಳಬೇಕೋ ಕೇಳುತ್ತೇನೆ.

+ ಶ್ರೀ ಕೆ.ಎಸ್.ಈಶ್ವರಪ್ಪ (ಶಿವಮೊಗ್ಗ): ಮಾನ್ಯ ಉಪಾಧ್ಯಕ್ಷರೆ, ಇಲ್ಲಿ ಕುಳಿತಿರತಕ್ಕ ಶಾಸಕರೆಲ್ಲರಿಗೂ ನಾನು ಹೇಳುವುದು ಅರ್ಥವಾಗಬಹುದು ಯಾವುದೇ ಒಬ್ಬ ಶಾಸಕರು ನನ್ನ ಕ್ಷೇತ್ರದಲ್ಲಿ ನೀರಿನ ಸಮಸ್ಯೆಯಿಲ್ಲವೆಂದು ಹೇಳುವ ಶಾಸಕರು ಒಬ್ಬರೂ ಸಿಗುವುದಿಲ್ಲ. ಸದನದಲ್ಲಿ ಇವತ್ತು ಇಡೀ ರಾಜ್ಯದಲ್ಲಿರತಕ್ಕ ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ. ಮಾನ್ಯ ವಿರೋಧಪಕ್ಷದ ನಾಯಕರು ಸಾಕಷ್ಟು ವಿಚಾರಗಳನ್ನು ಹೇಳಿದ್ದಾರೆ. ಸಾಕಷ್ಟು ಸಮಯವನ್ನೂ ಸಹ ತೆಗೆದುಕೊಂಡಿದ್ದಾರೆ. ನಾನು ಹೆಚ್ಚಿಗೆ ಸಮಯ ತೆಗೆದುಕೊಳ್ಳದೆ ಪೂರ್ಣ ವಿವರಗಳಿಗೆ ಹೋಗುವುದಕ್ಕೆ ಇಷ್ಟಪಡುವುದಿಲ್ಲ. ನಮಗೆ ಗೊತ್ತಿರತಕ್ಕ ಸಮಸ್ಯೆಗಳನ್ನು ತಮಗೆ ಗಮನಕ್ಕೆ ತರುತ್ತೇನೆ. ಮಾನ್ಯ ನಗರಾಭಿವೃದ್ಧಿ ಸಚಿವರು, ಪೌರಾಡಳಿತ ಸಚಿವರು ಗ್ರಾಮೀಣಾಭಿವೃದ್ಧಿ ಸಚಿವರು ಈಗ ಬಂದು ಕುಳಿತಿದ್ದಾರೆ. ಎಲ್ಲಿಲ್ಲಿ ಏನೇನು ಆಗಿದೆಯೆಂದು ಹೇಳುವುದಿಲ್ಲ. ಇಷ್ಟೊಂದು ಸಮಸ್ಯೆಗಳನ್ನು ನಾವು ಅವರ ಮುಂದೆ ಪ್ರಸ್ತಾಪ ಮಾಡುವ ಸಂದರ್ಭದಲ್ಲಿ ಸಂಬಂಧಪಟ್ಟ ಸಚಿವರು ಇಲ್ಲವೆಂದರೆ ಸರ್ಕಾರದಿಂದ ಸರಿಯಾದ ಉತ್ತರ ಸಿಗುತ್ತದೆಯೆ? ನಾವು ಯಾರ ಹತ್ತಿರ ಹೇಳಬೇಕೋ ಗೊತ್ತಾಗುವುದಿಲ್ಲ. ನಾನು ನೇರವಾದ ಉತ್ತರವನ್ನು ಕೇಳಲಿಕ್ಕೆ ಬಯಸುತ್ತೇನೆ, ಇಡೀರಾಜ್ಯದಲ್ಲಿ ಕುಡಿಯುವ ನೀರಿಗಾಗಿ ಇಷ್ಟೊಂದು ತೊಂದರೆ ಪಡುತ್ತಿರುವ ಸಂದರ್ಭದಲ್ಲಿ ರಾಜ್ಯಸರ್ಕಾರ ಕೇಂದ್ರಸರ್ಕಾರಕ್ಕೆ ಮನವಿಯನ್ನು ಅರ್ಪಿಸಿದೆ. 400ಕೋಟಿ ರೂಪಾಯಿ ಕುಡಿಯುವ ನೀರಿನ ಕೆಲಸ ತೆಗೆದುಕೊಳ್ಳಬೇಕೆಂದರೆ ಇದರ ಅರ್ಥ ಕುಡಿಯುವ ನೀರಿನ ಸಮಸ್ಯೆಯಿದೆ ಎಂದು. ಗ್ರಾಮೀಣಪ್ರದೇಶಗಳಲ್ಲಿ ಮತ್ತು ನಗರಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯಿದೆ. ಇದಕ್ಕಾಗಿ 400ಕೋಟಿ ರೂಪಾಯಿ ಕೇಂದ್ರ ಸರ್ಕಾರದಿಂದ ಬಂದರೆ ಕುಡಿಯುವ ನೀರಿನ ಸಮಸ್ಯೆ ರಾಜ್ಯದಲ್ಲಿದೆ.

(ಮಾನ್ಯ ಶರಣಪ್ಪನವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

12.20 ಪಿಎಂ

ಇಂತಹ ಸಂದರ್ಭದಲ್ಲಿ ಈ ನೀರಿನ ಒಂದು ಸಮಸ್ಯೆ ಬಗ್ಗೆ ನಾವು ಚರ್ಚೆ

ಮಾಡುತ್ತಿದ್ದೇವೆ. ನಗರಪ್ರದೇಶ ಇರಬಹುದು, ಗ್ರಾಮೀಣ ಪ್ರದೇಶ ಇರಬಹುದು, ಸರ್ಕಾರ ಯೋಜನೆ ಎಷ್ಟು ಮಾಡಿದೆ, ಆ ಯೋಜನೆಗೆ ಮಾಡಿದಷ್ಟು ಹಣವನ್ನಾದರೂ ಕೂಡ ಬಿಡುಗಡೆ ಮಾಡಿದ್ದರೆ ಈ ಸಮಸ್ಯೆ ಉದ್ಭವಿಸುತ್ತಿರಲಿಲ್ಲ. ಈಗಾಗಲೇ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ್ದಾರೆ, 110 ಕೋಟಿ ಹಣ ಇಟ್ಟುಕೊಂಡು ಬಿಡುಗಡೆ ಮಾಡಿದ್ದು ಎಷ್ಟು ಎಂದರೆ ಕೇವಲ 80 ಚಿಲ್ಲರೆ ಕೋಟಿ ಎಂದು. ಇದೇನು ತೋರಿಸುತ್ತದೆ ಎಂದರೆ ನೀರಿನ ಬಗ್ಗೆ ರಾಜ್ಯಸರ್ಕಾರ ಸಂಪೂರ್ಣವಾದ ಗಮನ ಕೊಡುತ್ತಿಲ್ಲ ಎಂದು. ಎಷ್ಟು ಹಣ ಬಿಡುಗಡೆ ಮಾಡಬೇಕಿತ್ತು, ಅಷ್ಟು ಹಣ ಬಿಡುಗಡೆ ಮಾಡುವ ದಿಕ್ಕಿನಲ್ಲಿ ಇವತ್ತು ಈ ಚರ್ಚೆ ಆಗತಕ್ಕಂಥ ಸಂದರ್ಭದಲ್ಲಿ ಸಚಿವರು ಸ್ಪಷ್ಟವಾಗಿ ಹೇಳಲಿ. ಹಣವನ್ನು ಇವತ್ತು ನಾವು ಬಿಡುಗಡೆ ಮಾಡುತ್ತಿದ್ದೇವೆ, ಇಷ್ಟು ಹಣ ಮೀಸಲಿಟ್ಟಿದ್ದೇವೆ, ನಗರಪ್ರದೇಶಗಳಿಗೆ ಇಷ್ಟು ಇಟ್ಟಿದ್ದೇವೆ, ಗ್ರಾಮಾಂತರ ಪ್ರದೇಶಗಳಿಗೆ ಇಷ್ಟು ಇಟ್ಟಿದ್ದೇವೆ, ಇವತ್ತು ಇಷ್ಟು ಹಣ ಬಿಡುಗಡೆ ಮಾಡುತ್ತೇವೆ ಎಂದು ಹೇಳಿದರೆ ಒಳ್ಳೆಯದು. ಇದು ಮಂತ್ರಿಗಳಿಗೆ, ಶಾಸಕರುಗಳಿಗೆ ಗೊತ್ತಿದೆ. ಇಂತಹ ಸಮಸ್ಯೆ ಇರುವಾಗ ಹಣವನ್ನೇ ಬಿಡುಗಡೆ ಮಾಡಿಲ್ಲವೆಂದರೆ ಚರ್ಚೆ ಮಾಡಿ ಏನು ಉಪಯೋಗ? ಇನ್ನೊಂದು ವಿಷಯವನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಚ್ಚೆಪಡುವುದೇನೆಂದರೆ, ಅದು ನಿರ್ಲಕ್ಷ್ಯ. 1990ನೇ ಇಸವಿಯಲ್ಲಿ ಸನ್ಮಾನ್ಯ ವಿರೇಂದ್ರ ಪಾಟೀಲರು ಮುಖ್ಯಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ ಕರ್ನಾಟಕ ರಾಜ್ಯದ ಅನೇಕ ನಗರಗಳಿಗೆ ಕುಡಿಯುವ ನೀರಿನ ಯೋಜನೆಗಳು ಮಂಜೂರು ಆಗಿದ್ದವು. ಅವುಗಳ ಉದ್ಘಾಟನೆ ಕೂಡ ಆಯಿತು. ಚಾಮರಾಜನಗರ, ಶಿವಮೊಗ್ಗ, ಮೈಸೂರು ಮುಂತಾಗಿ 18 ನಗರಗಳಲ್ಲಿ ಇದರ ಉದ್ಘಾಟನೆ ಆಯಿತು. ನನಗೆ ಗೊತ್ತಿರುವ ಹಾಗೆ ಹೆಚ್ಚಿನ ಭಾಗಗಳಲ್ಲಿ ಈ ಯೋಜನೆಗಳು ಪೂರ್ಣವಾಗಿ ಮುಗಿದಿಲ್ಲ. ಒಂದು ಉದಾಹರಣೆ ಎಂದರೆ ನಮ್ಮ ಶಿವಮೊಗ್ಗ ನಗರದ್ದು. ಇದು ಮೂರು ವರ್ಷಗಳಲ್ಲಿ ಯೋಜನೆ ಮುಗಿಯಬೇಕು ಎಂದು ಇತ್ತು. ಅದಕ್ಕೆ ನಿಗದಿಯಾಗಿ ಮೀಸಲಿಟ್ಟಂಥ ಹಣ ಐದು ಕೋಟಿ. ಅದು ಇವತ್ತು ಮೂರು ವರ್ಷಗಳಿಂದ ಎಂಟು ವರ್ಷಕ್ಕೆ ಹೋಯಿತು. ಇದು ನಿಜವಾಗಿಯೂ ನಿರ್ಲಕ್ಷ್ಯತನ. ಹಣವನ್ನೂ ಸರ್ಕಾರ ಬಿಡುಗಡೆ ಮಾಡಿಲ್ಲ ಮತ್ತು ಅಧಿಕಾರಿಗಳೂ ಆ ಕಡೆಗೆ ಗಮನ ಕೊಟ್ಟಿಲ್ಲ. ಆವಾಗ ಐದು ಕೋಟಿಯಲ್ಲಿ ಮುಗಿಯಬೇಕಾಗಿದ್ದಂಥ ಯೋಜನೆಗೆ ಇವತ್ತು 13 ಕೋಟಿ ರೂಪಾಯಿ ಆಯಿತು. ಇದು ಯಾರಿಗೆ ನಷ್ಟ? ಇದರಿಂದ ಜನಸಾಮಾನ್ಯರಿಗೆ ಮತ್ತೆ ತೆರಿಗೆಹಾಕುವುದು. ವಾಟರ್‌ಟ್ಯಾಕ್ಸ್ ಕೊಡಿ, ಕೆ.ಎಸ್.ಆರ್.ಟಿ.ಸಿ. ಬಸ್ಸುದರ ಜಾಸ್ತಿಮಾಡಿ, ವಿದ್ಯುತ್ ದರವನ್ನು ಜಾಸ್ತಿ ಮಾಡಿದ್ದೇವೆ ಎಂದು ನಮ್ಮಿಂದಲೇ ಹಣವನ್ನು ತೆಗೆದುಕೊಂಡು ಮತ್ತೆ ನಮಗೇ ಹಾಕುವುದು. ಈಸ್ಥಿತಿ ಬಂದಿದೆ. ಒಂದು ಸಮಯದ ನಿರ್ಲಕ್ಷ್ಯ, ಎರಡನೇಯದು ಹಣದ ನಿರ್ಲಕ್ಷ್ಯ. ಆ ರೀತಿ ನೀವು ಸಮಯಕ್ಕೆ ಸರಿಯಾಗಿ ಕೆಲಸ ಮಾಡಿದ್ದರೆ ಇವರು ಮೊದಲಿನಿಂದಲೂ ಹಣ ಬಿಡುಗಡೆಮಾಡುತ್ತಾ ಅಧಿಕಾರಿಗಳಿಗೆ ಟೈಮ್‌ಬೌಂಡ್ ಫಿಕ್ಸ್ ಮಾಡಿದ್ದರೆ ಇವತ್ತು ಈ ಸಮಸ್ಯೆ ಬರುತ್ತಿರಲಿಲ್ಲ. ಕೆಲವು ಕಡೆ

ಹಣವನ್ನೂ ಕೂಡ ಬಿಡುಗಡೆ ಮಾಡಿದ್ದಾರೆ. ಆದರೆ ಬಿಡುಗಡೆ ಮಾಡಿದ ಹಣದಲ್ಲಿ ಪೂರ್ಣ ಕೆಲಸ ಸಹ ಆಗಿಲ್ಲ. ಅದಕ್ಕೋಸ್ಕರ ನಾನು ಸರ್ಕಾರವನ್ನು ಕೇಳುವುದಕ್ಕೆ ಇಚ್ಛೆಪಡುವುದು ಏನೆಂದರೆ, ಈ ರೀತಿಯಾಗಿ ಹಣಬಿಡುಗಡೆ ಆಗಿರುವ ಭಾಗಗಳಲ್ಲಿ ಯೋಜನೆ ಕೂಡ ಸ್ಯಾಂಕ್ಷನ್ ಆಗಿರುವ ಭಾಗದಲ್ಲಿ ಸಮಯವನ್ನು ನೀವು ನಿಗದಿ ಮಾಡಿಕೊಟ್ಟಿದ್ದರೂ ಕೂಡ ಕೆಲಸ ಮಾಡದೇ ಇರುವಂಥ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ? ಹಣವನ್ನು ಬಿಡುಗಡೆ ಮಾಡಿದ್ದೀರಿ, ಸಮಯವನ್ನೂ ಕೂಡ ನಿಗದಿಮಾಡಿದ್ದೀರಿ. ಅವರು ಬೇಕಾದಂಥ ಮೆಟೀರಿಯಲ್ಸ್‌ನ್ನೂ ಸಹ ತರಿಸಿಕೊಂಡಿದ್ದಾರೆ. ಆದರೂ ಕೂಡ ಅಧಿಕಾರಿಗಳು ಆರಾಮವಾಗಿ ಕುಳಿತಿದ್ದಾರೆ. ಇದಕ್ಕೆ ಯಾರು ಜವಾಬ್ದಾರರು? ಜನ ಸಾಯುತ್ತಿದ್ದಾರೆ, ನಗರಸಭಾ ಸದಸ್ಯರು ಧರಣಿ ಮಾಡುತ್ತಿದ್ದಾರೆ, ಗ್ರಾಮೀಣ ಪ್ರದೇಶಗಳಲ್ಲಿ ಧರಣಿ ಮಾಡುತ್ತಿದ್ದಾರೆ. ಏಕೆಂದರೆ ನಾನು ಹೆಚ್ಚಿನ ಸಮಯ ತೆಗೆದುಕೊಳ್ಳಬಾರದು ಎನ್ನುವ ಉದ್ದೇಶದಿಂದ ನಿಮಗೆ ಹೇಳುತ್ತಿದ್ದೇನೆ. ಪೂರ್ಣ ಸಮಯವನ್ನು ಮಾನ್ಯ ವಿರೋಧ ಪಕ್ಷದ ನಾಯಕರು ತೆಗೆದುಕೊಂಡಿದ್ದಾರೆ. ಎಲ್ಲಾ ಅಂಶಗಳನ್ನು ಅವರು ನಿಮ್ಮ ಗಮನಕ್ಕೆ ತಂದಿದ್ದಾರೆ. ಜನತೆಯ ಹಣ ನಿಮ್ಮ ಹತ್ತಿರ ಬಂದು ಬೀಳುತ್ತಾ ಇದೆ. ನೀವು ಹಣ ಬಿಡುಗಡೆ ಮಾಡುತ್ತೇವೆ ಎಂದು ಒಪ್ಪಿಕೊಂಡಿದ್ದೀರಿ. ಆದರೆ ಕೆಲವು ಕಡೆ ಬಿಡುಗಡೆ ಮಾಡಿಲ್ಲ. ಅಂತಹ ಕಡೆ ತಕ್ಷಣವೇ ಹಣ ಬಿಡುಗಡೆ ಮಾಡಿ. ಎರಡನೇಯದು ಬಿಡುಗಡೆ ಮಾಡಿರುವ ಜಾಗದಲ್ಲಿ ಎಲ್ಲಿ ಕೆಲಸ ಆಗಿಲ್ಲವೋ ಅಲ್ಲಿ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ತುರ್ತು ಕ್ರಮ ತೆಗೆದುಕೊಂಡರೆ ಆವಾಗಲಾದರೂ ಕೂಡ ನಿಮಗೆ ಅರ್ಥವಾಗುತ್ತದೆ ಅವರು ಇನ್ನಾದರೂ ಗಮನ ಕೊಡುತ್ತಾರೆ ಎಂದು. ನೀವು ಒಬ್ಬರ ಬಗ್ಗೆಯೂ ಕ್ರಮ ತೆಗೆದುಕೊಳ್ಳುವುದಿಲ್ಲ, ಹಣವನ್ನೂ ಬಿಡುಗಡೆ ಮಾಡುವುದಿಲ್ಲ. ಆವಾಗ ನೀರಿನ ಸಮಸ್ಯೆ ಹಾಗೆಯೇ ಉಳಿದಿರುತ್ತದೆ. ಈ ಬಗ್ಗೆ ಮಾತನಾಡಬಹುದು, ಇನ್ನೊಂದು ವಿಷಯದ ಬಗ್ಗೆಯೂ ಮಾತನಾಡಬಹುದು. ಅದಕ್ಕೆ ಉತ್ತರವೂ ಸಿಗಬಹುದು. ಖಂಡಿತ ನಮಗೆ ನಿಮ್ಮ ಉತ್ತರ ಬೇಡ. ನಮಗೆ ಬೇಕಾಗಿರುವುದು ನೀರು. ನೀರು ಕೊಡುವಂಥ ಸಂದರ್ಭದಲ್ಲಿ ನೀವು ಏನು ಕ್ರಮ ತೆಗೆದುಕೊಳ್ಳುತ್ತೀರಿ? ಈ ಅಂಶವನ್ನೂ ಸಹ ತಾವು ಹೇಳಬೇಕಾಗುತ್ತದೆ. ಮತ್ತೆ ಅನೇಕ ಭಾಗಗಳಲ್ಲಿ ಕುಡಿಯುವ ನೀರಿನ ಬಗ್ಗೆ ಹೋರಾಟ ನಡೆದಿದೆ. ಹೀಗೆ ಹೋರಾಟ ನಡೆದಿರತಕ್ಕಂಥ ಸಂದರ್ಭಗಳಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ, ಸಂಬಂಧಪಟ್ಟ ಮುಖ್ಯಕಾರ್ಯದರ್ಶಿಗಳಿಗೆ ನಾಗರೀಕರು ಹೋಗಿ ಮನವಿಕೊಟ್ಟು ಬಂದಿದ್ದಾರೆ. ನಗರಪ್ರದೇಶಗಳಲ್ಲಿ ಜಿಲ್ಲಾಧಿಕಾರಿಗಳಿಗೆ, ತಹಸೀಲ್ದಾರರಿಗೆ ಮನವಿಗಳನ್ನು ಕೊಟ್ಟಿದ್ದಾರೆ. ಆ ಮನವಿಗಳು ತಮ್ಮತನಕ ಬಂದಿವೆಯಾ? ಹೋರಾಟವನ್ನು ಇವತ್ತು ಹುಡುಗಾಟಿಕೆಗಾಗಿ ಮಾಡುತ್ತಿಲ್ಲ, ತಮಾಷೆ ಮಾಡುವುದಕ್ಕೆ ಹೋರಾಟ ಮಾಡುತ್ತಿಲ್ಲ. ಯಾವುದೇ ಪಕ್ಷದ ಮೆರವಣಿಗೆಗೋಸ್ಕರ ಹೋರಾಟ ಮಾಡುವುದಿಲ್ಲ. ಜನಸಾಮಾನ್ಯರ ಸಮಸ್ಯೆ ಬಗ್ಗೆ ಸಂಘಸಂಸ್ಥೆಗಳು, ರಾಜಕೀಯ ಪಕ್ಷಗಳು ಹೋರಾಟ ಮಾಡಿರುವಂಥ

ಸಂದರ್ಭದಲ್ಲಿ, ಹೋರಾಟ ಮಾಡಿ ಅವರು ಮನೆಮಠ, ಕೆಲಸ ಬಿಟ್ಟು ಅಧಿಕಾರಿಗಳ ಹತ್ತಿರ ಹೋಗಿ ಮನವಿ ಕೊಟ್ಟಾಗ ಅದನ್ನು ನೋಡುವುದರ ಬಗ್ಗೆಯೂ ಸಂಪೂರ್ಣವಾದ ನಿರ್ಲಕ್ಷ ಇದೆ. ಅಧಿಕಾರಿಗಳು ಅವುಗಳನ್ನು ಸರ್ಕಾರಕ್ಕೆ ಕಳುಹಿಸಿದ್ದಾರೋ ಇಲ್ಲವೋ ಗೊತ್ತಿಲ್ಲ. ಅಕಸ್ಮಾತ್ ಮನವಿಗಳು ಬಂದಿದ್ದರೆ, ಸರ್ಕಾರ ಈ ದಿಸೆಯಲ್ಲಿ ಗಮನ ಕೊಟ್ಟಿದ್ದಾರೋ ಇಲ್ಲವೋ ಗೊತ್ತಿಲ್ಲ. ಏಕೆಂದರೆ ಹೋರಾಟ ಮಾಡಿದ ಸಮಾಧಾನವಷ್ಟೇ ವಿನಹ ಏನೂ ಕೆಲಸ ಆಗಿದೆಯೆಂದರೆ ಒಂದು ಹನಿ ನೀರೂ ಬಂದಿಲ್ಲ. ಅದಕ್ಕೋಸ್ಕರ ನಾನು ಹೇಳುತ್ತಿದ್ದೇನೆ ಏನೆಂದರೆ ಎಲ್ಲೆಲ್ಲಿ ಹೋರಾಟಗಳಾಗಿ ಅದು ನಿಮ್ಮ ಗಮನಕ್ಕೆ ಬಂದಿದೆ, ಸಂಬಂಧಪಟ್ಟಂಥ ಅಧಿಕಾರಿಗಳು ಏನು ನಿಮಗೆ ಮನವಿ ಕಳುಹಿಸಿದ್ದಾರೆ, ಆ ಕಡೆಗಾದರೂ ನೀವು ಗಮನ ಕೊಡಬೇಕು. ಇನ್ನೊಂದು ಏನಾಗಿದೆ ಎಂದರೆ, ಅನೇಕ ಕಡೆ ಈ ರೀತಿ ಯೋಜನೆಗಳು ಸ್ಯಾಂಕ್ಷನ್ ಆಗಿರುವ ಕಡೆ ಕೊಟ್ಟಿರುವಂಥ ಮೆಟೀರಿಯಲ್ಸ್, ಅದು ಪೈಪುಗಳು ಇರಬಹುದು, ಬೇರೆ ಇರಬಹುದು ಎಲ್ಲಾ ಕೀಳುದರ್ಜೆಯ ಮೆಟೀರಿಯಲ್ಸ್‌ನ್ನು ಕೊಟ್ಟಿದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲಿ ಬೋರ್‌ವೆಲ್‌ಗಳನ್ನು ತೆಗೆಯುತ್ತೇವೆ ಅನ್ನುತ್ತಾರೆ. ಒಂದೊಂದು ಬೋರವೆಲ್ ತೆಗೆದಂಥ ಸಂದರ್ಭದಲ್ಲಿ ಅದು ಒಂದುನೂರು ಅಡಿ ಹೋದರೆ ಮುನ್ನೂರು ಅಡಿ ಎಂಬ ಲೆಕ್ಕವನ್ನು ಕೊಡುತ್ತಾರೆ. ಇದರ ಬಗ್ಗೆ ಕ್ರಮ ತೆಗೆದುಕೊಳ್ಳುವುದು ಯಾವಾಗ? ಜನರ ಹಣ ಲೂಟಿ ಮಾಡುತ್ತಿದ್ದಾರೆ. ಜನತೆಯ ತೆರಿಗೆ ಹಣವನ್ನು ನೀವು ಸಂಗ್ರಹಮಾಡಿ ಈರೀತಿ ಅಧಿಕಾರಿಗಳಿಗೋಸ್ಕರ ಕೊಡುವುದಕ್ಕೆ ಈ ಯೋಜನೆಗಳು ಆಗಿವೆ. ಹೀಗಾಗಿ ಇದನ್ನು ಕೊಡುವ ದಿಕ್ಕಿನಲ್ಲಿ ತುರ್ತಾಗಿ ಕ್ರಮ ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ. ಮತ್ತೆ ಅತ್ಯಂತ ಜರೂರಾಗಿ ಈ ಸಂದರ್ಭದಲ್ಲಿ ಇಡೀ ರಾಜ್ಯದಲ್ಲಿ ಒಂದೊಂದು ಜಿಲ್ಲೆಗೆ ಒಂದು ವಿಶೇಷ ಸ್ಕ್ವಾಡ್‌ನ್ನು ನೇಮಕ ಮಾಡಲಿ. ಏಕೆಂದರೆ, ಈ ಬೇಸಿಗೆ ಕಾಲದಲ್ಲಿ ಏಕೆ ಈರೀತಿಯ ತೊಂದರೆಯಾಗಿದೆ? ಯಾರು ನಗರಸಭೆ, ಪುರಸಭೆ, ಜಿಲ್ಲಾ ಪಂಚಾಯತ್‌ಗಳಲ್ಲಿರುವಂಥ ಅಧಿಕಾರಿಗಳ ನಿರ್ಲಕ್ಷ್ಯವೋ, ಅಥವಾ ಏನು ಕೆಲಸ ಆಗಬೇಕಾಗಿತ್ತು ಅದು ಆಗುತ್ತಿಲ್ಲವೋ ಅಥವಾ ವಾಲ್ವ್‌ಮನ್‌ಗಳು ಸರಿಯಾಗಿ ನೀರು ಬಿಡುತ್ತಿಲ್ಲವೋ? ಒಂದೊಂದು ಕಡೆ ಒಂದೊಂದು ಹೇಳುತ್ತಾರೆ. ಇನ್ನೂ ಕೆಲವುಕಡೆಯಲ್ಲಿ ಕೆ.ಇ.ಬಿ. ಅಧಿಕಾರಿಗಳು ಸರಿಯಾದ ಸಮಯಕ್ಕೆ ಆ ಕರೆಂಟ್‌ನ್ನು ಕೊಡದೇ ಇರುವುದಕ್ಕೋಸ್ಕರ ಈ ಸಮಸ್ಯೆ ಬಂದಿದೆ. ಈ ಮಾತು ಕೂಡ ಇದೆ. ಈ ರೀತಿ ಏನೇನು ಸಮಸ್ಯೆಗಳಿವೆ ಎನ್ನುವುದನ್ನು ಅರ್ಥ ಮಾಡಿಕೊಳ್ಳುವುದಕ್ಕೆ, ನಮ್ಮ ಗೋಳು ಕೇಳುವುದಕ್ಕೆ ಮಂತ್ರಿಗಳು ತಯಾರಿಲ್ಲ. ಇನ್ನು ಆ ನಗರಪ್ರದೇಶಗಳಲ್ಲಿ, ಗ್ರಾಮೀಣ ಪ್ರದೇಶಗಳಲ್ಲಿ ಆ ಜನರ ಗೋಳು ಕೇಳುವವರು ಯಾರು? ಅದಕ್ಕೋಸ್ಕರವಾಗಿ ಪ್ರತಿ ಜಿಲ್ಲೆಗೆ ನೀರಿಗೋಸ್ಕರ ಸರ್ಕಾರ ಒಂದೊಂದು ವಿಶೇಷ ಸ್ಕ್ವಾಡ್‌ನ್ನು ನೇಮಕಮಾಡಲಿ. ಆ ಸ್ಕ್ವಾಡ್ ತತಕ್ಷಣ ಹದಿನೈದು ದಿವಸಗಳಲ್ಲೋ, ಇಪ್ಪತ್ತು ದಿವಸಗಳಲ್ಲೋ ಏನೇನು ಸ್ಥಿತಿ ಇದೆಯೆಂದು ತಿಳಿದು, ಸಮಸ್ಯೆಯನ್ನು

ಪರಿಹಾರ ಮಾಡುವುದಕ್ಕೋಸ್ಕರ ಅಥವಾ ಮತ್ತೊಂದಕ್ಕೋ ಸರ್ಕಾರ ಸ್ಕ್ವಾಡ್ ಜೊತೆಗೆ ವಿಶೇಷ ಸಮಸ್ಯೆಯನ್ನು ಸಂಬಂಧಪಟ್ಟ ಮಂತ್ರಿಗಳು ಗಮನದಲ್ಲಿಟ್ಟುಕೊಂಡು ಆ ಸ್ಕ್ವಾಡ್‌ನವರು ಹೇಳುವ ಸಮಸ್ಯೆಗಳನ್ನು ಕೇಳಿ ಆ ನೀರಿನ ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕೋಸ್ಕರ ಹಣವನ್ನು ಬಿಡುಗಡೆ ಮಾಡಲಿ. ಆ ಅಧಿಕಾರಿಗಳು ಬೇರೆಬೇರೆ ಇಲಾಖೆಗಳಲ್ಲಿ ಏನೇನು ಸಮಸ್ಯೆಗಳಿವೆ ಇದೆ, ಅದನ್ನು ಪರಿಹಾರ ಮಾಡುವುದಕ್ಕೋಸ್ಕರ ತುರ್ತಾಗಿ ಗಮನ ಕೊಟ್ಟಾಗ ಮಾತ್ರ ಇದರ ಅನುಕೂಲವಾಗುತ್ತದೆ. ಇಲ್ಲದಿದ್ದರೆ ಇಡೀ ರಾಜ್ಯದಲ್ಲಿ ಯಾವರೀತಿ ನೀರಿಗೋಸ್ಕರ ಕೂಗುತ್ತಿದ್ದೇವೋ, ಅದೇ ಕೂಗು ಸ್ವಾತಂತ್ರ್ಯ ಬಂದು ಐವತ್ತು ವರ್ಷಗಳಾದರೂ ಇನ್ನೂ ನೀವು ಸರ್ಕಾರ ಇರುವತನಕ ಇದೇ ಕೂಗು ಇರುತ್ತದೆ. ಹಾಗಾಗಿ ಈ ಕೂಗನ್ನು ಕೂಗುವುದಕ್ಕೆ ಅವಕಾಶ ಕೊಡದೆ ಇಡೀ ರಾಜ್ಯದಲ್ಲಿ ವಿಶೇಷವಾದ ನೀರಿನ ಸ್ಕ್ವಾಡ್‌ನ್ನು ನೇಮಕ ಮಾಡಲಿ. ಮತ್ತೆ ಶಾಸಕರಿಗೆ ಮತ್ತು ಜಿಲ್ಲಾ ಪಂಚಾಯತ್ ಸದಸ್ಯರಿಗೆ ತಕ್ಷಣ ಅವರ ಶಕ್ತಿಗೆ ತಕ್ಕಂತೆ ಕನಿಷ್ಟ ನೀರಿಗೋಸ್ಕರ ಎಂ.ಎಲ್.ಎ.ಗಳಿಗೆ ಹತ್ತು ಲಕ್ಷ, ಜಿಲ್ಲಾ ಪಂಚಾಯತ್ ಸದಸ್ಯರಿಗೆ ಎರಡು ಲಕ್ಷ ರೂಪಾಯಿಗಳಾದರೂ ಕೂಡ ಕುಡಿಯುವ ನೀರಿನ ಯೋಜನೆಗೋಸ್ಕರ ಕೊಟ್ಟು ನಿಮ್ಮ ಭಾಗದಲ್ಲಿ ನೀವು ಕೆಲಸ ಮಾಡಿ ಎಂದು ಹೇಳಿದರೆ, ಆಗಲಾದರೂ ಕೂಡ ತುರ್ತಾಗಿ ಬರುವಂಥ ಸಮಸ್ಯೆಗಳನ್ನು ಪರಿಹಾರ ಮಾಡುವುದಕ್ಕೆ ಅನುಕೂಲವಾಗುತ್ತದೆ. ಈ ದಿಕ್ಕಿನಲ್ಲಿ ಸರ್ಕಾರ ಗಮನಕೊಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಅಧ್ಯಕ್ಷರೇ, ಕುಡಿಯುವ ನೀರಿನ ಬವಣೆ ಇಡೀ ರಾಜ್ಯದಲ್ಲಿ ಸಮಗ್ರವಾಗಿ ಎಲ್ಲಾ ಕಡೆ ಇದೆ. ರಾಜ್ಯದ ಪತ್ರಿಕೆಗಳು ಪ್ರತಿದಿನ ವಿಶೇಷವಾಗಿ ಕುಡಿಯುವ ನೀರಿನ ಬಗ್ಗೆ ಒಂದು ವರದಿಯನ್ನು ಕೊಡುತ್ತಾ ಬಂದಿದ್ದಾರೆ. ಇದು ಸರ್ಕಾರದ ಗಮನಕ್ಕೂ ಕೂಡ ಬಂದಿದೆ. ಪಟ್ಟಣ ಪ್ರದೇಶದಲ್ಲಿ, ಗ್ರಾಮೀಣ ಪ್ರದೇಶದಲ್ಲಿ ಯಾವ ಕಡೆಗೆ ಕಡಿಮೆ ಇದೆ ಎನ್ನತಕ್ಕಂಥಾದ್ದು ಅಲ್ಲ. ಇದು ನಿಜವಾಗಿಯೂ ಕೂಡ ಕರುಣಾಜನಕ ಪರಿಸ್ಥಿತಿ. ಕಣ್ಣೀರಿನ ಕಥೆ ಇದು. ಇದು ನಾನು ಪಕ್ಷ ಅಥವಾ ರಾಜಕಾರಣ ಮಾಡಬೇಕಾದಂಥ ಪ್ರಶ್ನೆ ಅಲ್ಲ. ವಸ್ತುಸ್ಥಿತಿಯ ಬಗ್ಗೆ ಪತ್ರಿಕೆಗಳು ಬೆಳಕನ್ನು ಚೆಲ್ಲಿವೆ. ಎಲ್ಲಾ ಭಾಗಗಳಲ್ಲೂ ಪ್ರತಿ ಜಿಲ್ಲೆಯ ನೀರಿನ ಚಿತ್ರವನ್ನು ಅವರು ಕೊಟ್ಟಿದ್ದಾರೆ. ಅಂದಾಗ ಇದೆಲ್ಲಾ ನೋಡಿದಾಗ ಸಮಗ್ರವಾಗಿ ಈ ಕುಡಿಯುವ ನೀರಿನ ವ್ಯವಸ್ಥೆ ಸಂಪೂರ್ಣವಾಗಿ ವಿಫಲವಾಗಿದೆ. ಕರ್ನಾಟಕ ರಾಜ್ಯದಲ್ಲಿ ಹಳ್ಳಿಗಳಲ್ಲಿ, ಪಟ್ಟಣಗಳಲ್ಲಿ ಇದು ಸಂಪೂರ್ಣವಾಗಿ ವಿಫಲವಾಗಿದೆ. ಈ ಬಗ್ಗೆ ಸರ್ಕಾರ ಪ್ರಾಮಾಣಿಕವಾದಂಥ ಚಿಂತನೆ ಏನು ಮಾಡಿದೆ ಎನ್ನತಕ್ಕಂಥಾದ್ದು ನಮ್ಮ ನೇರವಾದಂಥ ಪ್ರಶ್ನೆ. ಗ್ರಾಮಾಂತರ ಪ್ರದೇಶಗಳ ಬಗ್ಗೆ ನಾನು ಹಿಂದೆ ಈ ಸದನದಲ್ಲಿ ತಮಗೆ ಹೇಳಿದಾಗ, ನನ್ನ ಕ್ಷೇತ್ರದಲ್ಲಿ ಮುನ್ನೂರು ಕೊಳವೆ ಬಾವಿಗಳು ಕೆಟ್ಟಿವೆ. ಈ ಕೊಳವೆಬಾವಿಗಳನ್ನು ತತಕ್ಷಣ ರಿಪೇರಿ ಮಾಡಿಸಿಕೊಡಬೇಕು ಎನ್ನತಕ್ಕಂಥಾದ್ದು. ಈ ಬೇಸಿಗೆ ಕಾಲದಲ್ಲಿ ಏನಾಗುತ್ತದೆ ಎಂದರೆ ನಾವು ಒಂದು

ಹಂತದಲ್ಲಿ ಕೊಳವೆಬಾವಿಯನ್ನು ಹಾಕುತ್ತೇವೆ. ಅದು ಇನ್ನೂ ಕೆಳಗಡೆ ನೀರಿನ ಮಟ್ಟ ಹೋದಾಗ ಕೊಳವೆಗಳು ಜಾಸ್ತಿಬೇಕಾಗುತ್ತವೆ. ಅಂತಹ ಕಡೆ ಕೊಳವೆ ಬಾವಿಗಳು ಕೆಟ್ಟು ಹೋಗಿದೆ ಎಂದು ತೀರ್ಮಾನ ಮಾಡಿದರೆ ಮತ್ತೆ ಹೊಸ ಕೊಳವೆ ಬಾವಿ ತೆಗೆಯತಕ್ಕ ಪ್ರಶ್ನೆ ಇಲ್ಲ. ಮತ್ತು ಜಾಸ್ತಿ ತೋಡಿಸುವುದಕ್ಕೆ ಜಾಸ್ತಿ ಕೊಳವೆಗಳನ್ನು ಕೊಡುತ್ತಾ ಇಲ್ಲ. ಇದೆಲ್ಲಕ್ಕಿಂತ ಹೆಚ್ಚಾಗಿ ಗ್ರಾಮ ಪಂಚಾಯಿತ್ತಿಗಳಿಗೆ ಹಣ ಇಲ್ಲ. ನೇರವಾಗಿ ಈ ಕೊಳವೆ ಬಾವಿ ರಿಪೇರಿ ಮಾಡತಕ್ಕ ವ್ಯವಸ್ಥೆ ಇರುವುದು ಗ್ರಾಮಪಂಚಾಯಿತ್ತಿಗಳಿಗೆ. ಈಗ್ರಾಮ ಪಂಚಾಯಿತ್ತಿಗಳಿಗೆ ನೇರವಾಗಿ ಹಣ ಇಲ್ಲ. ಈ ದೃಷ್ಟಿಯಿಂದ ನೋಡಿದಾಗ ಒಂದು ಕಡೆ ಗ್ರಾಮಗಳು ಮತ್ತೊಂದು ಕಡೆ ಪಟ್ಟಣಗಳು. ನನಗನ್ನಿಸುತ್ತದೆ, ಮುಂದೆ ಇನ್ನು 10 ವರ್ಷಗಳಲ್ಲಿ ಕೊಳವೆ ಬಾವಿ ಇಡೀ ರಾಜ್ಯದಲ್ಲಿ ಕೆಟ್ಟು, ಭೂಮಿಯಲ್ಲಿ ನೀರು ಇಲ್ಲದೇ ಅದೊಂದು ದೊಡ್ಡ ದುರಂತ ಕಾದಿದೆ. ಅದರ ಬಗ್ಗೆ ಇವರು ತಜ್ಞರ ಜೊತೆಯಲ್ಲಿ, ವೈಜ್ಞಾನಿಕವಾಗಿ ಈ ರಾಜ್ಯದಲ್ಲಿ ನೀರಿನ ಕೊರತೆ ಸಮಗ್ರವಾಗಿದೆ ಎಂಬುದನ್ನು ಹೇಳಬೇಕು. ಈಗ ಅನೇಕ ಜಿಲ್ಲೆಗಳಲ್ಲಿ, ಕೋಲಾರ ಜಿಲ್ಲೆಯಲ್ಲಿ 800 ಅಡಿ ಆಳ ಹೊಡೆದರೂ ನೀರು ಸಿಕ್ಕುವುದಿಲ್ಲ. ಕೆಲವು ಕಡೆ 300 ಅಡಿ. ಈ ಪರಿಸ್ಥಿತಿ ಬಂದಾಗ ಒಂದು ಹಂತದಲ್ಲಿ, ಇಡೀ ರಾಜ್ಯದಲ್ಲಿ ಎಲ್ಲೇ ಕೊಳವೆ ಬಾವಿ ತೆಗೆದರೂ ನೀರು ಸಿಕ್ಕುವುದಿಲ್ಲ ಎನ್ನುವ ಪರಿಸ್ಥಿತಿ ನಿರ್ಮಾಣವಾದರೆ, ನಾಳೆ ಕುಡಿಯುವ ನೀರಿಗೆ ನಮ್ಮ ಯೋಜನೆ ಏನು? ಈ ಕುಡಿಯುವ ನೀರಿಗೆ ಕೊಳವೆ ಬಾವಿಗಳನ್ನೇ ನಂಬಿ, ನಾವು ಕುಡಿಯುವ ನೀರಿನ ವ್ಯವಸ್ಥೆ ಮಾಡುವುದಕ್ಕೆ ಆಗುವುದಿಲ್ಲ. ಇದಕ್ಕೆ ಸಮಗ್ರ, ಕರ್ನಾಟಕ ಪ್ರತಿ ಹಳ್ಳಿ, ಪ್ರತಿ ಪಟ್ಟಣಗಳಿಗೆ ಅನೇಕ ಜಲಾಶಯಗಳಿಂದ ನೀರನ್ನು ಒದಗಿಸತಕ್ಕ ವ್ಯವಸ್ಥೆ. ಇದಕ್ಕೆ ಒಂದು ಯೋಜನೆಯಾಗಬೇಕು. ಒಂದು ಪರಿಣಾಮಕಾರಿಯಾದಂಥ, ಭಾರಿ ಪ್ರಮಾಣದ ದೊಡ್ಡ ಯೋಜನೆ ಆಗಬೇಕಾಗುತ್ತದೆ. ಬಹಳ ದಿವಸಗಳ ಕಾಲ ನಮಗೆ ಈ ಕೊಳವೆ ಬಾವಿಗಳಿಂದ ನೀರು ಸಿಗುತ್ತದೆ ಎಂಬ ಯೋಜನೆಯನ್ನು ನಾವು ಕೈಬಿಡಬೇಕು. ಇನ್ನು ಮುಂದೆ 10 ವರ್ಷದ ಚಿಂತನೆ ಮಾಡಬೇಕು. ಇನ್ನು 10 ವರ್ಷಕ್ಕೆ ನಾವು ಪ್ರಾಮಾಣಿಕವಾಗಿ ನೀರು ಕೊಡಬೇಕಾದರೆ, ಕೊಳವೆ ಬಾವಿಗಳಿಂದ ನೀರು ಸಿಕ್ಕುವುದಿಲ್ಲ. ತಮಗೆ ಗೊತ್ತಿರುವ ಹಾಗೆ ಅನೇಕ ಜಿಲ್ಲೆಗಳಲ್ಲಿ 500-600-800 ಅಡಿ ಹೋದರೂ ನೀರು ಸಿಕ್ಕುತ್ತಾ ಇಲ್ಲ. ಅಂದಮೇಲೆ, ಈ ಪರಿಸ್ಥಿತಿ ಇಡೀ ರಾಜ್ಯಕ್ಕೆ ಉದ್ಭವಿಸಿದರೆ, ನೀರಿನ ಮಟ್ಟ ತೀರಾ ಕೆಳಗೆ ಹೋಗಿ, ನೀರೇ ಸಿಗದೇ ಇದ್ದಾಗ ನಾವು ಎಲ್ಲಿ ನೀರು ಕೊಡಬೇಕು? ಅದಕ್ಕೆ ಬೇರೆ ಯೋಜನೆಯನ್ನು ಮಾಡುವುದಕ್ಕೆ ಸರ್ಕಾರ ಚಿಂತನೆ ಮಾಡಬೇಕು. ಇದಕ್ಕೆ ಎಲ್ಲಿಂದ ಹಣ ತರಬೇಕು, ಇದಕ್ಕೆ ವಿಶ್ವಬ್ಯಾಂಕಿನಿಂದ ತರಬೇಕೇ ಅಥವಾ ಕೇಂದ್ರದಿಂದ ತರಬೇಕೇ ಮತ್ತು ಯಾರ ಜೊತೆಯಲ್ಲಿ ಮಾತನಾಡಬೇಕೆಂಬ ಬಗ್ಗೆ ಅವರು ಸಮಗ್ರವಾಗಿ ಚಿಂತನೆ ಮಾಡಬೇಕು. ಮತ್ತು ಇದಕ್ಕೆ ಶಾಶ್ವತವಾದಂಥ ಪರಿಹಾರ. ನಾವು ಸುಮ್ಮನೆ ಹಾಸ್ಯವಾಗಿ ಹೇಳುವುದಾದರೆ, ನೀರಿಗಿಂತ ಸಾರಾಯಿ ಯಾವುದೇ ತೊಂದರೆ ಇಲ್ಲದೇ ಸಿಗುತ್ತಾ ಇದೆ. ಆದರೆ ನೀರು ಸಿಕ್ಕುತ್ತಾ ಇಲ್ಲ. ಯಾವ ಹಳ್ಳಿ, ಯಾವಬೀದಿಗೆ ಹೋದರೂ ಧಾರಾಳವಾಗಿ ಸಾರಾಯಿ ಸಿಗುತ್ತದೆ.

ಏಕೆಂದರೆ, ನೀರು ಮಾತ್ರ ಸಿಕ್ಕುತ್ತಾ ಇಲ್ಲ. ನಿಜ, ಅವರೂ ಕೂಡ ಇದನ್ನು ಒಪ್ಪುತ್ತಿದ್ದಾರೆ. ನಾನು ಹೇಳತಕ್ಕ ಈ ಪರಿಸ್ಥಿತಿಯನ್ನು ಅವರು ಒಪ್ಪುತ್ತಾರೆ. ಸಾರಾಯಿಗೆ ಬರ ಎಂದೂ ಎಲ್ಲೂ ಇಲ್ಲ. ಸಾರಾಯಿ ಎಲ್ಲಾ ಕಡೆ ಸಿಗುತ್ತದೆ. ಯಾವ ಹಳ್ಳಿ, ಯಾವ ಬೀದಿ, ಯಾವ ಪಟ್ಟಣ ಎಲ್ಲಿ ಕೇಳಿದರೂ ಸಾರಾಯಿಗೆ ಬರ ಆಯಿತು, ಬೀರಿಗೆ ಬರ ಆಯಿತು ಎಂಬದನ್ನೂ ಎಲ್ಲಿಯೂ ನಾವು ನೋಡಲಿಲ್ಲ,...

ಶ್ರೀ ಎಸ್.ಸುರೇಶ್‌ಕುಮಾರ್: ಈ ಸರ್ಕಾರದವರು ಹಳ್ಳಿಗಳಿಗೆ ಬೋರ್ ಕೊಡಿ ಎಂದು ಹೇಳಿದರೆ, ಬಾರ್ ಕೊಡುತ್ತೇವೆಂದು ಹೇಳುತ್ತಾರೆ.

ಶ್ರೀ ವಾಟಾಳ್ ನಾಗರಾಜ್: ಇದು ಸತ್ಯವೂ ಹೌದು. ನನ್ನ ವಾದದಲ್ಲಿ ಹಾಸ್ಯವೂ ಇರಬಹುದು. ಆದರೆ ಸತ್ಯ ಇದೆ.

ಶ್ರೀ ಎಂ.ಪಿ.ಪ್ರಕಾಶ್: ಈ ಬೋರ್ ಮತ್ತು ಬಾರ್‌ಗಳ ನಡುವೆ ಬೇಕಾದಷ್ಟು ಅಂತರ ಇದೆ. ಆದರೆ, ಬಾರ್‌ಗೂ ನೀರು ಬೇಕಾಗುತ್ತದೆ. ಸಾರಾಯಿಗೂ ನೀರು ಬೇಕಾಗುತ್ತದೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಅವರಿಗೆ ನೀರು ಯಾವರೀತಿಯಾಗಿ ಸಿಗುತ್ತದೆ ಎಂದು ನಮಗೆ ಗುಮಾನಿ. ಹಾಗಾದರೆ, ಸಾರಾಯಿ ಮತ್ತು ಈ ಬಾರ್‌ನವರಿಗೆ ನೀರು ಹೇಗೆ ಸಿಗುತ್ತಾ ಇದೆ? ನಮಗೆ ಕುಡಿಯುವುದಕ್ಕೆ ನೀರು ಸಿಗುತ್ತಾ ಇಲ್ಲ, ಬಾರ್‌ನವರಿಗೆ ಹಾಗೂ ಸಾರಾಯಿನವರಿಗೆ ಹೇಗೆ ಸಿಗುತ್ತಾ ಇದೆ.

ಶ್ರೀ ವೈಜನಾಥ ಪಾಟೀಲ್: ಸಾರಾಯಿ ಗುತ್ತೇದಾರರಿಗೆ ಈ ನೀರು ಸರಬರಾಜು ಯೋಜನೆಯನ್ನು ಕೊಟ್ಟರೆ, ವ್ಯವಸ್ಥಿತವಾಗಿ ಮಾಡುತ್ತಾರೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಇದು ಒಳ್ಳೆಯ ಸಲಹೆ. ಸಾರಾಯಿ ಗುತ್ತೇದಾರರಿಗೆ ನೀರು ಸರಬರಾಜು ಯೋಜನೆಯನ್ನು ಕೊಟ್ಟರೆ, ಬಹಳ ಚೆನ್ನಾಗಿರುತ್ತದೆ ಎಂಬುದು.

ಶ್ರೀ ಡಿ.ವಿ.ಸದಾನಂದಗೌಡ: ಅವರು ಬಹಳ ವ್ಯವಸ್ಥಿತವಾಗಿ ಮಾಡುತ್ತಾರೆ. ನಮ್ಮ ನೀರು ಸರಬರಾಜು ಸಿಬ್ಬಂದಿಯವರೆಲ್ಲಾ, ಆ ಸಾರಾಯಿ ಗುತ್ತಿಗೇದಾರರಿಂದ ತರಬೇತಿ ಕೊಡಿಸುವುದು ಒಳ್ಳೆಯದು.

ಶ್ರೀ ವಾಟಾಳ್ ನಾಗರಾಜ್: ಇದು ಒಳ್ಳೆಯ ಸಲಹೆ. ಏಕೆಂದರೆ, ಸಾರಾಯಿನವರಿಗೆ ನೀರು ಹಂಚಿಕೆ ಮಾಡುವುದನ್ನು ಕೊಟ್ಟರೆ ಒಳ್ಳೆಯದು. ಏಕೆಂದರೆ, ಎರಡೂ ಒಟ್ಟಿಗೆ ಇರುತ್ತದೆ. ಅದರಲ್ಲೇನೂ ವ್ಯತ್ಯಾಸ ಬರುವುದಿಲ್ಲ. ಇದೊಂದು ಒಳ್ಳೆಯ ಸಲಹೆ ಎಂದು ನಾನು ಅಂದುಕೊಂಡಿದ್ದೇನೆ. ಮಾನ್ಯ ವೈಜನಾಥ ಪಾಟೀಲರು ಮುಂದೆ ಮಂತ್ರಿಗಳಾಗಿ ಬರುತ್ತಾರೆಂದು ಅಂದುಕೊಂಡಿದ್ದೇನೆ. ಆಗ, ಅದೇ ಇಲಾಖೆ ತಮಗೆ

ಸಿಗುವುದಾದರೆ, ಈ ಸಾರಾಯಿ ಇಲಾಖೆಯೇ ತಮಗೆ ಸಿಗುವುದಾದರೆ, ಇದನ್ನು ಮಾಡುವುದು ಒಳ್ಳೆಯದು ಎಂದು ನನಗನಿಸುತ್ತದೆ.

ಶ್ರೀಮತಿ ಬಿ.ಟಿ.ಲಲಿತಾ ನಾಯಕ್: ಸಾರಾಯಿಗೆ ದುಡ್ಡು ಕೊಡುತ್ತಾರೆ, ಆದರೆ, ನೀರಿಗೆ ಯಾರೂ ದುಡ್ಡು ಕೊಡುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್: ತಮಗೆ ಹೇಳುವುದೇನೆಂದರೆ, ನೀರಿಗಿಂತ ಸಾರಾಯಿ ಧಾರಾಳವಾಗಿ ಸಿಗುತ್ತದೆ, ಇದು ತಮಗೆ ಗೊತ್ತಿಲ್ಲವೇ? ನಾನೇಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ನಾಳೆ ನಾವು ಬಹಳ ಅಪಾಯದಲ್ಲಿದ್ದೇವೆ. ತಾವು, ಮಂಜುನಾಥ್‌ರವರು ಹಾಗೂ ನಾಗೇಗೌಡರಂಥ ಹಿರಿಯರು ಏನಿದ್ದೀರಿ, ಮುಂದೆ 10 ವರ್ಷದ ಯೋಜನೆ, ನಾಳೆ ಇಡೀ ಭೂಮಿಯಲ್ಲಿ ನೀರಿನ ಅಂಶವೇ ಖಾಲಿಯಾಗಿ ಹೋಯಿತು ಎಂದರೆ, ಆಗ ನೀವು ಎಲ್ಲಿಂದ ನೀರು ತರಬೇಕು? ಬೇರೆ ಯಾವುದಾದರೂ ಜಲಾಶಯಗಳ ಮೂಲಕ, ನದಿಗಳ ಮೂಲಕ ವ್ಯವಸ್ಥೆ ಮಾಡಿ, ಪ್ರತಿ ಹಳ್ಳಿ ಮತ್ತು ಪಟ್ಟಣಗಳಿಗೆ ಒಂದು ವಿಶೇಷವಾದಂಥ ಯೋಜನೆಯನ್ನು ಹಾಕಬೇಕು. ಕರ್ನಾಟಕದಲ್ಲಿ ಎಷ್ಟು ಹಳ್ಳಿಗಳಿವೆ, ಎಷ್ಟು ಪಟ್ಟಣಗಳಿವೆ, ಇವೆಲ್ಲಾ ದೃಷ್ಟಿಯಿಂದ ಶಾಶ್ವತವಾಗಿ ಕುಡಿಯುವ ನೀರಿನ ವ್ಯವಸ್ಥೆಗಾಗಿ ಎಷ್ಟು ಕೋಟಿ ರೂಪಾಯಿಗಳು ಬೇಕಾಗುತ್ತದೆ ಎನ್ನುವುದನ್ನು ನೀವು ಮಾತನಾಡಬೇಕು. ಯಾವುದಾದರೂ ಮೂಲಕ ತರತಕ್ಕಂಥ ಯೋಜನೆ ನೀವು ಮಾಡಲಿಲ್ಲವೆಂದರೆ, ಇನ್ನು 10 ವರ್ಷದಲ್ಲಿ, ಅದು ನಿಮ್ಮ ಸರ್ಕಾರ ಇರಬಹುದು, ಇನ್ನೊಂದು ಸರ್ಕಾರ ಇರಬಹುದು. ನೀರಿನ ಕೂಗು ಬಹಳ ದೊಡ್ಡದಾಗುತ್ತದೆ. ಈಗ ತಮಗೆ ಗೊತ್ತಿರುವಂತೆ ಮೂರು ದಿನಕ್ಕೊಂದುಸಾರಿ ನೀರು ಬಿಡುತ್ತಿದ್ದಾರೆ. ಕರ್ನಾಟಕದ ಅನೇಕ ಮೂಲೆಗಳಲ್ಲಿ ಅದರಲ್ಲಿಯೂ ಚಾಮರಾಜನಗರದ ವಿಷಯವಾಗಿ ನಾನು ತಮಗೆ ಹೇಳಿದೆ. ನಾನು ಇಲ್ಲಿ ಧರಣಿಯನ್ನೂ ಮಾಡಿದೆ. ಮೂರು ದಿವಸಕ್ಕೊಂದು ಸಲ ನೀರು ಬಿಡುವ ಪರಿಸ್ಥಿತಿಯಾಗಿದೆ. 300 ಕೊಳವೆ ಬಾವಿ ಕೆಟ್ಟಿದೆ, ತಾವು ಅದರ ವರದಿ ತರಿಸುತ್ತೇವೆಂದು ಹೇಳಿದಿರಿ. ನನಗೆ ನೀವು ಏನೂ ಮಾಡಬೇಕಾಗಿಲ್ಲ. ಸದ್ಯಕ್ಕೆ ಒಂದು ಸಾವಿರ ಲೀಟರ್ ಕೊಳವೆ ಕೊಟ್ಟರೆ ಸಾಕು. ಹಾಲಿ ತೆಗೆದಿರತಕ್ಕ ಕೊಳವೆ ಬಾವಿಗಳಿಗೆ ಸ್ವಲ್ಪ ಜಾಸ್ತಿ ಅಳಕ್ಕೆ ಕೊಳವೆಯನ್ನು ಬಿಟ್ಟರೆ, ನೀರು ಸಿಗತಕ್ಕಂಥ ವ್ಯವಸ್ಥೆ. ಇದು ಕರ್ನಾಟಕದ ಉದ್ದಗಲಕ್ಕೂ ಮಾಡಬೇಕಾದ್ದು ಜೊತೆಗೆ ಬಾವಿಗಳು ಒಣಗಿವೆ, ಕೆರೆಗಳು ಒಣಗಿವೆ. ಈ ಬಾವಿ ಮತ್ತು ಕೆರೆಗಳು ಒಣಗತಕ್ಕ ವ್ಯವಸ್ಥೆ ನಮ್ಮಲ್ಲಿ ಇಷ್ಟು ಯಾವತ್ತೂ ಆಗಿರಲಿಲ್ಲ. ಅಂದರೆ, ಇದಕ್ಕೆ ಯಾರು ಕಾರಣ ಎಂದಲ್ಲ. ಪರಿಸ್ಥಿತಿ, ನಿಸರ್ಗ. ಎಲ್ಲಾ ಕಡೆ ನಾವು ಮರಗಳನ್ನು ಸಿಕ್ಕಾಪಟ್ಟೆ ಕಡಿಯುತ್ತಾ ಇದ್ದೇವೆ. ಮಳೆಯ ಅಂಶ ಕಡಿಮೆಯಾಗಿದೆ. ಅನೇಕ ಕಡೆ, ಈಗ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದು ಕಾಲದಲ್ಲಿ ಸಮಗ್ರವಾಗಿ ಒಂದೂವರೆ ತಿಂಗಳು, ಎರಡು ತಿಂಗಳು ಮಳೆ. ಇವತ್ತು ಅಲ್ಲಿ ಆ ಪರಿಸ್ಥಿತಿ ಇಲ್ಲ. ಎಲ್ಲಾ ಮಲೆನಾಡು ಪ್ರದೇಶ ನೋಡಿದಾಗ, ಮಲೆನಾಡಿನವರದೇ ಒಂದು ದೊಡ್ಡ

ಸೌಂದರ್ಯ, ಅದರ ವ್ಯವಸ್ಥೆ, ಅದರ ಚಿತ್ರವನ್ನು ನಾವು ನೆನೆದುಕೊಂಡಾಗ, ಆ ಮಳೆಗಾಲ ಆ ವ್ಯವಸ್ಥೆ ಇವತ್ತು ಇಲ್ಲ. ಮಂಗಳೂರಾಗಲೀ, ಚಿಕ್ಕಮಗಳೂರಾಗಲೀ, ಕಡೂರಾಗಲೀ, ತೀರ್ಥಹಳ್ಳಿಯಾಗಲೀ, ಯಾವ ಪ್ರದೇಶದಲ್ಲೂ ಕೂಡ ಇವತ್ತು ಆ ಸೌಂದರ್ಯ ಉಳಿದಿಲ್ಲ. ಮಲೆನಾಡು, ಅದು ಬಯಲುನಾಡು. ಬಯಲುಸೀಮೆಯಾಗುವಂಥ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಇದಕ್ಕೆ ಕಾರಣ ನಮ್ಮಲ್ಲಿ ಅರಣ್ಯ ಹೋಗುತ್ತಿದೆ. ಮಳೆಯ ಅಂಶ ಕಡಿಮೆಯಾಗುತ್ತಾ ಇದೆ. ಎಲ್ಲಾ ಕಡೆ ಅರಣ್ಯ ನಾಶವಾಗುತ್ತಿದೆ. ಅರಣ್ಯ ನಾಶವಾಗುವುದರಿಂದ, ಮಳೆ ಕಡಿಮೆಯಾಗಿದೆ. ಈ ದೃಷ್ಟಿಯಿಂದ ವೈಜ್ಞಾನಿಕವಾಗಿ ನಾವು ನೋಡಬೇಕಾದ್ದು ನಮ್ಮ ಕರ್ತವ್ಯ. ಈ ದೃಷ್ಟಿಯಿಂದ ನಾನು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ಒಂದು ಕಾಲದಲ್ಲಿ ಪಟ್ಟಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆಗೆಂದು ಮಾನ್ಯ ವೀರೇಂದ್ರಪಾಟೀಲರು ಮುಖ್ಯಮಂತ್ರಿಯಾಗಿದ್ದಾಗ, ಸುಮಾರು 16 ಪಟ್ಟಣಗಳಿಗೆ ಮಾಡಿ, ಈಗ ಸ್ವಲ್ಪ ಹೆಚ್ಚು ಕಡಿಮೆ 60-70 ಪಟ್ಟಣಗಳಿಗೆ ಮಾಡಬೇಕೆಂಬತಕ್ಕಂಥಾದ್ದು. ಇದಕ್ಕೆ ಹಣವನ್ನೂ ಒದಗಿಸಿದ್ದಾರೆ, ಕೆಲಸ ಆರಂಭವಾಗಿದೆ. ನಾನು ತಮಗೆ ಏನು ಹೇಳುತ್ತೇನೆಂದರೆ, ನಮ್ಮದೇ ಒಂದು ಕೆಲಸ. ಚಾಮರಾಜನಗರದ್ದು ಸುಮಾರು 7 ವರ್ಷವಾಗಿದೆ, ಇನ್ನೂ ಮುಗಿದಿಲ್ಲ. ಅಂದರೆ, ಮುಗಿಸುವುದಿಲ್ಲವೆಂದು ನಾನೇನು ಸರ್ಕಾರದ ಮೇಲೆ ಆರೋಪಣೆ ಮಾಡುತ್ತಾ ಇಲ್ಲ. ತರಾತುರಿಯಿಂದ ತ್ವರಿತವಾಗಿ, ಈ ಕೆಲಸ ಮಾಡಬೇಕಾದ್ದು ಅವರ ಕರ್ತವ್ಯ. ಅದನ್ನು ತಾವು ಮಾಡಬೇಕೆಂದು ಹೇಳುತ್ತೇನೆ. ಸ್ವಲ್ಪ ನನ್ನ ಅಂದಾಜು ಪ್ರಕಾರ, ಕನಿಷ್ಟ, ಇಡೀ ಕರ್ನಾಟಕದಲ್ಲಿ 50 ಸಾವಿರ ಕೊಳವೆ ಬಾವಿಗಳು ಕೆಟ್ಟಿವೆ. ಕಿರು ನೀರು ಯೋಜನೆ ಸುಮಾರು 6 ರಿಂದ 8 ಸಾವಿರದವರೆಗೂ ಕೆಟ್ಟಿವೆ, ಮತ್ತು ರಾಷ್ಟ್ರೀಯ ನೀರು ಯೋಜನೆ ಕನಿಷ್ಟ 4 ಸಾವಿರಕ್ಕೂ ಹೆಚ್ಚು ಕೆಟ್ಟಿರತಕ್ಕ ವ್ಯವಸ್ಥೆ. ಅದಕ್ಕೆ ನಾನಾ ಕಾರಣಗಳಿವೆ. ನೀರಿನ ಅಂಶ, ಕೊಳವೆ ಬಾವಿ ಅಂಶ ಹೀಗೆ ಅನೇಕ ಕಾರಣಗಳಿವೆ. ಈ ದೃಷ್ಟಿಯಿಂದ ಮಾನ್ಯ ಪ್ರಕಾಶ್‌ರವರಲ್ಲಿ ಮನವಿ ಮಾಡುತ್ತಿದ್ದೇವೆ. ತಾವು ವಿಶೇಷವಾಗಿ ಮತ್ತು ವೈಯಕ್ತಿಕವಾಗಿ ಗಮನ ಕೊಡಬೇಕು. ಪ್ರತಿ ಹಳ್ಳಿ ಮತ್ತು ಪಟ್ಟಣಗಳಿಗಾಗಿ ನೀವು ಒಂದು ಟೀಮನ್ನು ಸಂಘಟನೆ ಮಾಡಿ, ಇದಕ್ಕೆ ಯಾವರೀತಿ ಮಾಡಬೇಕು, ಎಷ್ಟು ದಿವಸದಲ್ಲಿ ಮುಗಿಸಬೇಕೆಂಬ ವ್ಯವಸ್ಥೆಯನ್ನು ತಾವು ಮಾಡಬೇಕು. ಪ್ರತಿ ಜಿಲ್ಲೆಯ ಪರಿಸ್ಥಿತಿ ಪತ್ರಿಕೆಗಳಲ್ಲೂ ಬಂದಿದೆ. ಈ ಸದನದಲ್ಲಿ ಚರ್ಚೆಗಿಂತ ಹೆಚ್ಚಾಗಿ, ಪತ್ರಿಕೆಗಳಲ್ಲಿ ಬಂದಿದೆ. ಆ ವರದಿಗಳೂ ತಮ್ಮ ಹತ್ತಿರ ಇವೆ. ಈಗ ತಾವು ಈ ಬಗ್ಗೆ ಏನು ಯೋಚನೆ ಮಾಡಿದ್ದೀರಿ, ಏನು ಚಿಂತನೆ ಮಾಡಿದ್ದೀರಿ ಎನ್ನುವುದನ್ನು ಸ್ಪಷ್ಟವಾಗಿ ಈ ಸದನಕ್ಕೆ ಒಂದು ಹೇಳಿಕೆಯನ್ನು ಕೊಡಬೇಕು. ಜೊತೆಗೆ, ತಾವು ಆಗಲೇ ನನ್ನ ಕ್ಷೇತ್ರದ ಬಗ್ಗೆ ವರದಿ ಮಾಡುವುದಕ್ಕಾಗಿ ಕೆಲವು ಅಧಿಕಾರಿಗಳನ್ನು ಕಳುಹಿಸಿದ್ದೀರಿ, ಅದು ನನಗೆ ಗೊತ್ತು. ಅದೇನಾಗಿದೆ, ಆ ವರದಿ ಏನಾಯಿತು? ಆ ಕೊಳವೆ ಬಾವಿ ರಿಪೇರಿಗೆ ತಾವೇನು ಕ್ರಮ ಕೈಗೊಂಡಿದ್ದೀರಿ. ತಮ್ಮ ಬೇಡಿಕೆಗಳು ಬಂದಾಗ ಸಮಗ್ರವಾಗಿ ಮಾತನಾಡೋಣ. ಈ ಸಂದರ್ಭದಲ್ಲಿ ಮಾತನಾಡುವಾಗ,

ಇದನ್ನು ತಾವು ಪ್ರಾಮಾಣಿಕವಾಗಿ ಮಾಡಲಿಲ್ಲವೆಂದರೆ, ನಿಜವಾಗಿಯೂ ಕರ್ನಾಟಕ ರಾಜ್ಯದಲ್ಲಿ ನಿಮಗೆ ಮತ್ತು ನಿಮ್ಮ ಸರ್ಕಾರಕ್ಕೆ ಒಳ್ಳೆಯ ಹೆಸರು ಬರಬೇಕೆಂದರೆ, ಕುಡಿಯುವ ನೀರಿನ ವ್ಯವಸ್ಥೆ ಮತ್ತು ವಿದ್ಯುಚ್ಛಕ್ತಿ ಮತ್ತು ಲೋಕೋಪಯೋಗಿ ಇಲಾಖೆಯ ರಸ್ತೆಗಳು. ಈ ಮೂರು ಹದಗೆಟ್ಟು ಹೋದರೆ ಸರ್ಕಾರದ ಆಡಳಿತ ಬಿದ್ದುಹೋಗಿದೆ ಎಂದೇ ಅರ್ಥ. ಅದರ ಬಗ್ಗೆ ಬೇರೆ ಮಾತೇ ಇಲ್ಲ. ವಸ್ತುಸ್ಥಿತಿಯನ್ನು ಒಪ್ಪಿಕೊಳ್ಳೋಣ. ರಸ್ತೆಗಳು ಸರಿ ಇಲ್ಲವೆಂದರೆ ಶಾಪ ಹಾಕುತ್ತಾರೆ, ವಿದ್ಯುಚ್ಛಕ್ತಿ ಇಲ್ಲವೆಂದರೆ ಶಾಪ ಹಾಕುತ್ತಾರೆ, ನೀರು ಇಲ್ಲವೆಂದರೆ ಶಾಪ ಹಾಕುತ್ತಾರೆ. ಈ ಮೂರು ಬಹಳ ಪ್ರಾಮುಖ್ಯವಾದ ಅಂಶಗಳು. ನೀವು ಅಪಾಯಕ್ಕೆ ಸಿಕ್ಕುವುದಕ್ಕೆ ಈ ಮೂರು ಅಂಶಗಳು. ಈ ಮೂರನ್ನು ನೀವು ಆಡಳಿತದಲ್ಲಿ ಸರಿಯಾಗಿ ನೋಡಿಕೊಳ್ಳಲಿಲ್ಲವೆಂದರೆ, ನಿಮ್ಮ ಆಡಳಿತ ಏನೇ ಮಾಡಿದರೂ ನಿಮ್ಮ ಆಡಳಿತ ಸರಿಯಿಲ್ಲ ಎನ್ನತಕ್ಕಂತಾದ್ದು ಬಹಳ ಸ್ಪಷ್ಟ. ಕೊನೆಯದಾಗಿ ವಿದ್ಯುಚ್ಛಕ್ತಿ ಬಹಳ ಮುಖ್ಯ. ಕುಡಿಯುವ ನೀರಿನ ವ್ಯವಸ್ಥೆಗೆ ವಿದ್ಯುಚ್ಛಕ್ತಿ ಬಹಳ ಮುಖ್ಯ. ಸ್ವಾಮಿ, ಮಾನ್ಯ ಅಧ್ಯಕ್ಷರೇ, ಈ ಕುಡಿಯುವ ನೀರಿನ ವ್ಯವಸ್ಥೆಗೆ ವಿದ್ಯುಚ್ಛಕ್ತಿ, ಬಹಳ ಮುಖ್ಯ. ಅನೇಕ ಕಡೆ ವಾರಗಟ್ಟಲೆ ವಿದ್ಯುತ್ ನಿಂತು ನೀರು ಎತ್ತತಕ್ಕಂಥ ಪಂಪ್‌ಗಳು ನಿಂತಿವೆ. ಈ ದೃಷ್ಟಿಯಿಂದ ಈ ವಿದ್ಯುತ್ ಇಲಾಖೆ ನೀರಾವರಿ ಇಲಾಖೆಯ ಜೊತೆಯಲ್ಲಿ ಸಾಮರಸ್ಯ ಇಲ್ಲ. ವಿದ್ಯುಚ್ಛಕ್ತಿ ಇಲಾಖೆ ಸಂಪೂರ್ಣವಾಗಿ ಸತ್ತು ಹೋಗಿದೆ. ಇದು ಉಳಿದಿಲ್ಲ. ಇದನ್ನು ಸರಿಪಡಿಸುವುದಕ್ಕೆ ಯಾರ ಕೈಯಲ್ಲಿಯೂ ಆಗುವುದಿಲ್ಲ. ವಿದ್ಯುಚ್ಛಕ್ತಿ ಇಲಾಖೆ ಇದೆಯೇ? ನಿಮ್ಮ ವಿದ್ಯುಚ್ಛಕ್ತಿ ಇಲಾಖೆ ಹಣವನ್ನು ವಸೂಲಿ ಮಾಡುವುದರಲ್ಲಿ ಜನರಿಗೆ ತೊಂದರೆ ಕೊಡುವುದರಲ್ಲಿ ಬೇಜವಾಬ್ದಾರಿ ಇಲಾಖೆ ಇದು. ನಾನು 1967ನೇ ಇಸವಿಯಿಂದ ಇದ್ದೇನೆ. ಇಷ್ಟೊಂದು ಬೇಜವಾಬ್ದಾರಿಯುತವಾದ ಇಲಾಖೆ ಯಾವುದೂ ಇಲ್ಲ. ಪರಿಸ್ಥಿತಿ ಹೇಗೆ ಇದೆ ಅಂದ್ರೆ, ಹಣ ವಸೂಲಿ ಮಾಡುತ್ತಿದ್ದೀರಿ. ತೆರಿಗೆ ವಸೂಲಿ ಮಾಡುತ್ತಿದ್ದೀರಿ. ರೈತರಿಗೆ ತೊಂದರೆ ಕೊಡುತ್ತಿದ್ದೀರಿ. ಗ್ರಾಹಕರಿಗೆ ತೊಂದರೆ ಕೊಡುತ್ತಿದ್ದೀರಿ. ಜನ ಸಾಮಾನ್ಯರಿಗೆ ತೊಂದರೆ ಕೊಡುತ್ತಿದ್ದೀರಿ. ಎಲ್ಲರಿಗೂ ಅದು ಶಾಪವಾಗಿದೆ. ಒಂದು ರೀತಿ ಕೆಟ್ಟ ಪರಿಣಾಮವಾಗಿ ಕರ್ನಾಟಕಕ್ಕೆ ಕಳಂಕ ತರತಕ್ಕಂಥ ಒಂದು ಸಂಸ್ಥೆಯಾಗಿದೆ. ಆ ಸಂಸ್ಥೆ ದಿವಾಳಿ ಎದ್ದು ಹೋಗಿದೆ. ಆ ಸಂಸ್ಥೆಯನ್ನು ಸರಿಪಡಿಸಲಿಲ್ಲ ಎಂದು ಹೇಳಿದರೆ ಇದು ಪಕ್ಷಾತೀತವಾಗಿ ನಮ್ಮ ಪಕ್ಷ ನಿಮ್ಮ ಪಕ್ಷ ಎಂದು ಅಲ್ಲ. ವಿದ್ಯುಚ್ಛಕ್ತಿ ಇಲಾಖೆಯನ್ನು ತಾವು ಸಮಗ್ರವಾಗಿ ಪರಿಶೀಲಿಸಿ ಅದರ ಬಗ್ಗೆ ನೀವು ಕ್ರಮ ತೆಗೆದುಕೊಳ್ಳಲಿಲ್ಲ ಅಂದರೆ ನನಗನ್ನಿಸುತ್ತದೆ ನಿಮಗೆ ಕೆಟ್ಟ ಹೆಸರು ಶತಸಿದ್ಧ. ಆದ್ದರಿಂದ ನಾನು ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ ಕುಡಿಯುವ ನೀರಿನ ಬಗ್ಗೆ ಸ್ಪಷ್ಟಚಿತ್ರವನ್ನು ಕೊಡಬೇಕೆಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಮಾನ್ಯ ಅಧ್ಯಕ್ಷರೇ, ಬಹಳ ಮುಖ್ಯವಾದ

ವಿಷಯಗಳನ್ನು ಹೇಳಿದ್ದಾರೆ. ಇಲ್ಲಿ ಪ್ರಶ್ನೆ ಇರತಕ್ಕಂಥಾದ್ದು ಸಮಸ್ಯೆಯನ್ನು ಸರಿಪಡಿಸುವಂತಾದ್ದರ ಬಗ್ಗೆ, ಸರ್ಕಾರ ಕಾಳಜಿ ತೆಗೆದುಕೊಳ್ಳುತ್ತಿಲ್ಲ. ಕುಡಿಯುವ ನೀರಿಗೆ ಸರ್ಕಾರ ಹಣ ಬಿಡುಗಡೆ ಮಾಡುತ್ತೇವೆಂದು ಹೇಳುತ್ತಾರೆ. ಸರ್ಕಾರ ಹಣವನ್ನು ಯಾವಾಗ ಬಿಡುಗಡೆ ಮಾಡುತ್ತದೆ. ಯಾವ ಸಂದರ್ಭದಲ್ಲಿ ಬಿಡುಗಡೆ ಮಾಡುತ್ತದೆ. ಮತ್ತು ಅದರ ಅವಶ್ಯಕತೆಯನ್ನು ಸರ್ಕಾರ ಗಂಭೀರವಾಗಿ ಪರಿಗಣನೆ ಮಾಡುವುದಿಲ್ಲ. ಸರ್ಕಾರಕ್ಕೆ ಹೇಗೆ ನಿರ್ದಿಷ್ಟವಾದ ಕಾಳಜಿ ಮತ್ತು ಯೋಜನೆ ಇರುವುದಿಲ್ಲ ಎನ್ನುವುದಕ್ಕೆ ಒಂದೇ ಒಂದು ನಿದರ್ಶನ ಅಂದರೆ ಈ ಸರ್ಕಾರಕ್ಕೆ ಮತ್ತು ನಮೆಗೆಲ್ಲರಿಗೂ ಗೊತ್ತಿದೆ. ಜನವರಿ ತಿಂಗಳಲ್ಲಿ ಸಾಮಾನ್ಯವಾಗಿ ಮುಗಿದರೆ ಜೂನ್ ತಿಂಗಳು ಅಂದರೆ ಮಳೆಗಾಲ ಪ್ರಾರಂಭವಾಗುವವರೆಗೂ ಕೂಡ ಕುಡಿಯುವ ನೀರಿನ ಅಭಾವ ಹೆಚ್ಚಾಗುತ್ತದೆ ಎನ್ನತಕ್ಕಂಥಾದ್ದು ಪ್ರತಿಯೊಬ್ಬರಿಗೂ ಗೊತ್ತಿರತಕ್ಕಂಥ ವಿಷಯ. ಈ ಸಂದರ್ಭದಲ್ಲಿ ಮಾತ್ರ ಅವರು ಹಣ ಬಿಡುಗಡೆ ಮಾಡುವುದಿಲ್ಲ. ಜನವರಿಯಿಂದ ಜೂನ್ ಮಧ್ಯೆ ಕುಡಿಯುವ ನೀರಿಗಾಗಿ ಹಣ ಬಿಡುಗಡೆ ಮಾಡುವುದಿಲ್ಲ. ಈಗ ಮಾರ್ಚಿ 15ನೇ ತಾರೀಖು ಹಣ ಬಿಡುಗಡೆ ಮಾಡಿದ್ದಾರೆ. ಆದರೆ ಈ ಹಣ ಅವರಿಗೆ ಹೋಗಿ ಕೆಲಸಕಾರ್ಯಗಳು ಸರಿಯಾದ ರೀತಿಯಲ್ಲಿ ಪ್ರಾರಂಭವಾಗಿ ಜನಗಳಿಗೆ ಕುಡಿಯಲು ನೀರು ಸಿಗುವುದು ಅಂದರೆ ಅದು ಕಡೆಗೆ ಸೆಪ್ಟೆಂಬರ್ ಅಕ್ಟೋಬರ್ ತಿಂಗಳಿಗೆ ಹೋಗುತ್ತದೆ. ಸರ್ಕಾರದ ನಿಯಮಗಳು ಎಷ್ಟು ಅಡೆತಡೆ ಆಗಿದೆ ಅಂದರೆ ಇರತಕ್ಕಂಥ ಹಣವನ್ನೂ ಕೂಡ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡುವುದಕ್ಕೆ ಸರಿಯಾದ ಸಮಯದಲ್ಲಿ ಮಾಡುವುದಕ್ಕೆ ಆಗದೇ ಇರತಕ್ಕಂಥ ರೀತಿಯಲ್ಲಿ ಈ ಸರ್ಕಾರದ ನಿಯಮಗಳು ಇವೆ. ಆ ಸರ್ಕಾರವು ನಿಯಮಾವಳಿಗಳನ್ನು ಬದಲಾವಣೆ ಮಾಡದೇ ಸರ್ಕಾರ ಹಣ ಬಿಡುಗಡೆ ಮಾಡಿದರೂ ಕೂಡ ಅದು ಸರಿಯಾದ ರೀತಿಯಲ್ಲಿ ಸಕಾಲಕ್ಕೆ ಪ್ರಯೋಜನವಾಗುವುದಿಲ್ಲ. ಎರಡನೇ ಅಂಶ ಕುಡಿಯುವ ನೀರಿಗೆ ಬೋರ್‌ವೆಲ್‌ಗಳನ್ನು ಹಾಕುತ್ತೇವೆಂದು ಹೇಳುತ್ತಾರೆ. ನಮ್ಮ ಜಿಲ್ಲೆಯನ್ನು ತಾವು ಉದಾಹರಣೆಗೆ ತೆಗೆದುಕೊಂಡರೆ ನಮ್ಮಲ್ಲಿ 450 ಅಡಿಗಳು ಹೋದರೂ ಸಹ ನೀರು ಸಿಗುವುದಿಲ್ಲ. ಹ್ಯಾಂಡ್ ಪಂಪ್ ಕೆಪ್ಯಾಸಿಟಿ ಇರತಕ್ಕಂಥಾದ್ದು 180 ಅಡಿಗಳಿಂದ ಮಾತ್ರ ನೀರು ಎತ್ತುವುದಕ್ಕೆ ಸಾಧ್ಯ ಇದೆ. ಅದು ನಮ್ಮ ಜಿಲ್ಲೆಯಲ್ಲಿ ಅಥವಾ ಬೇರೆ ಬೇರೆ ಹಲವಾರು ಜಿಲ್ಲೆಗಳಲ್ಲಿ ಇವತ್ತು 450 ಅಡಿಗಳು ಹೋದರೂ ನೀರು ಸಿಗದೇ ಇರತಕ್ಕಂಥ ಸಂದರ್ಭದಲ್ಲಿ ನೀವು ಹ್ಯಾಂಡ್‌ಪಂಪ್‌ನ್ನು ಅದಕ್ಕೆ ಫಿಕ್ಸ್ ಮಾಡಿದರೆ ಅಲ್ಲಿಂದ ನೀರು ಬರುವುದಕ್ಕೆ ಸಾಧ್ಯವಿಲ್ಲ. ನೀವು ಬೋರ್‌ವೆಲ್‌ಗಳನ್ನು ಕೊರೆದು ಹ್ಯಾಂಡ್‌ಪಂಪ್‌ಗಳನ್ನು ಹಾಕಿದರೂ ಸಹ ಜನಗಳಿಗೆ ನೀರು ಸಿಗುವುದಿಲ್ಲ. ಜನಗಳಿಗೆ ಯಾವುದೇ ಪ್ರಯೋಜನ ಆಗುವುದಿಲ್ಲ. ಅದಕ್ಕೆ ಸರ್ಕಾರ ಏನು ಯೋಚನೆ ಮಾಡಬೇಕು ಎಂದು ಹೇಳಿದರೆ ಕಿರುನೀರು ಸರಬರಾಜು ಯೋಜನೆ ಪ್ರಮುಖವಾಗಿ ವ್ಯವಸ್ಥೆ ಮಾಡುವುದಕ್ಕೆ ತಾವು ನಿರ್ಧಾರ ತೆಗೆದುಕೊಳ್ಳಬೇಕು. ಹ್ಯಾಂಡ್‌ಪಂಪ್‌ಗಳನ್ನು ಹಾಕತಕ್ಕಂಥಾದ್ದನ್ನು ಕಡಿಮೆ ಮಾಡಬೇಕು. ಒಂದು ಬೋರ್‌ವೆಲ್ ಕೊರೆದು

ಹ್ಯಾಂಡ್‌ಪಂಪ್ ಹಾಕಬೇಕಾದರೆ 25-30 ಸಾವಿರ ರೂಪಾಯಿಗಳು ಖರ್ಚಾಗುತ್ತದೆ. ಅದು ಫೈಲ್ಯೂರ್ ಆದರೆ ಮತ್ತೆ ಒಂದಷ್ಟು ಹಣ ಹೋಗುತ್ತದೆ. ಈ ಕುಡಿಯುವ ನೀರಿನ ಸಮಸ್ಯೆ ಹೆಚ್ಚು ಗಂಭೀರವಾಗುವುದು ಹೇಗೆ ಅಂದರೆ ಯೋಜನೆಗಳನ್ನು ಹಾಕುತ್ತಾರೆ. ಎ ಆರ್ ಡಬ್ಲಿಯೋ ಎನ್ ಆರ್ ಡಬ್ಲಿಯೋ ಸ್ಕೀಮ್‌ಗಳನ್ನು ಹಾಕುತ್ತಾರೆ. ಹತ್ತಾರು ವರ್ಷಗಳಿಂದ ಒಂದು ಸ್ಕೀಮ್ ಪೆಂಡಿಂಗ್ ಇರುತ್ತದೆ. ಏಕೆಂದರೆ ಅದನ್ನು ಬಜೆಟ್‌ನಲ್ಲಿ ಸೇರಿಸಿರುತ್ತಾರೆ. ಯಾವುದೋ ಒಂದು ಲೆಕ್ಕ ಶೀರ್ಷಿಕೆಯಲ್ಲಿ ಸೇರಿಸಿರುತ್ತಾರೆ. ಆ ಯೋಜನೆಗಳಿಗೆ ನಿರ್ದಿಷ್ಟವಾಗಿ ಟೈಮ್‌ಬೌಂಡ್ ಆಗಿ ಹಣ ಬಿಡುಗಡೆ ಮಾಡುವುದಿಲ್ಲ. ಇಡೀ ಕರ್ನಾಟಕ ರಾಜ್ಯದಲ್ಲಿ ಕುಡಿಯುವ ನೀರಿನ ಸಮಸ್ಯೆ ಬಹಳ ಗಂಭೀರವಾಗಿದೆ. ಒಂದು ತಿಂಗಳಿನಿಂದ ಎಲ್ಲಾಪತ್ರಿಕೆಗಳವರು ಬರೆಯುತ್ತಿದ್ದಾರೆ. ಸರ್ಕಾರದಿಂದ ನಾನು ನಿರೀಕ್ಷೆ ಮಾಡುತ್ತಿದ್ದೆ. ಯಾವ ರೀತಿ ಇದಕ್ಕೆ ಪ್ರತಿಕ್ರಿಯೆ ಬರುತ್ತದೆ ಪತ್ರಿಕೆಗಳಲ್ಲಿ ಈ ರೀತಿ ವರದಿಗಳನ್ನು ಕೊಡುತ್ತಿದ್ದಾರೆ ಎಂದಾದರೂ ಒಂದು ದಿವಸ ಅದಕ್ಕೆ ಪ್ರತಿಕ್ರಿಯೆ ಸಿಗುತ್ತದೆಯೇ ಎಂದು ನಾನು ನಿರೀಕ್ಷೆ ಮಾಡುತ್ತಿದ್ದೆ. ಎಂದೂ ಸಹ ಆ ವರದಿಗಳ ಬಗ್ಗೆ ಸರ್ಕಾರ ಪ್ರತಿಕ್ರಿಯೆ ಕೊಡಲಿಲ್ಲ. ಸಮಸ್ಯೆ ಇದೆ ಅಥವಾ ಸಮಸ್ಯೆ ಇಲ್ಲ ಎಂದು. ಈ ಸಮಸ್ಯೆಗೆ ಈ ರೀತಿಯಾದಂತಹ ಕ್ರಮ ತೆಗೆದುಕೊಂಡಿದ್ದೇವೆ ಎನ್ನುವ ಪ್ರತಿಕ್ರಿಯೆ ಇಲ್ಲ. ಇದು ಏನು ತೋರಿಸುತ್ತದೆ ಅಂದರೆ ಕುಡಿಯುವ ನೀರಿನ ಬಗ್ಗೆ ಈ ಸರ್ಕಾರ ದಿವ್ಯ ನಿರ್ಲಕ್ಷ್ಯ ತೋರಿಸುತ್ತದೆ ಎಂದು. ಸ್ಪಷ್ಟವಾಗಿ ಗೊತ್ತಾಗುತ್ತದೆ. ಕುಡಿಯುವ ನೀರಿಗೆ ಸರಿಯಾದ ವೇಳೆಗೆ ಹಣ ಬಿಡುಗಡೆ ಮಾಡಿ ನಿಗಧಿತವಾದ ಯೋಜನೆ ಇಲ್ಲದೇ ಹೋದರೆ ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕೆ ಸಾಧ್ಯ ಇಲ್ಲ. ಪ್ರತಿ ವರ್ಷ ಕುಡಿಯುವ ನೀರಿಗೆ ಅಭಾವ ಉಂಟಾಗುವುದಕ್ಕೆ ಮೊದಲೇ ಸರ್ಕಾರ ಕಾರ್ಯಕ್ರಮವನ್ನು ಹಾಕಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

(ಉಪಾಧ್ಯಕ್ಷರು (ಶ್ರೀ ಚಂದ್ರಶೇಖರ ಎಂ.ಮಾಮನಿ)ರವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಗ್ರಾಮೀಣಾ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರು) ಮಾನ್ಯ ಉಪಾಧ್ಯಕ್ಷರೇ....

ಶ್ರೀ ಮಂಜುನಾಥ್ ಸಿ ಕುನ್ನೂರ್: ಮಾನ್ಯ ಅಧ್ಯಕ್ಷರೇ, ನಾನು ಒಂದು ನಿಮಿಷ ಮಾತನಾಡುತ್ತೇನೆ....

ಉಪಾಧ್ಯಕ್ಷರು: ಬೆಳಗ್ಗೆ ನನ್ನ ಕೊಠಡಿಗೆ ಬಂದು ಈ ವಿಷಯವನ್ನು ಎತ್ತಿದಾಗ ಎಲ್ಲಾ ನಾಯಕರುಗಳು ಬಂದಿದ್ದರು. ನಾವು ಕೆಲವೇ ಕೆಲವು ಜನ ಮಾತನಾಡುತ್ತೇವೆ ಅರ್ಧ ಗಂಟೆಯಲ್ಲಿ ಮುಗಿಸುತ್ತೇವೆಂದು ಹೇಳಿದರು. ಸಾಕಷ್ಟು ಸಮಯ ಆಗಿದೆ. ಈಗ ಮಾನ್ಯ ಮಂತ್ರಿಗಳು ಉತ್ತರ ಕೊಡಲಿ ಬೇಡಿಕೆಗಳ ಮೇಲೆ ಚರ್ಚೆ ಬಂದಾಗ ಮಾತನಾಡಬಹುದು.

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೇ, ಸರ್ಕಾರ ಇಂತಹ ವಿಚಾರಗಳ ಬಗ್ಗೆ ಎಂತಹ ಕ್ರಮ ತೆಗೆದುಕೊಂಡಿದೆ ಎಂದು ಹೇಳಿ ಕನಿಷ್ಟ ಕೆಲವು ವಿಚಾರಗಳಲ್ಲಿ ಆದರೂ ಅವರು ಅಭಿನಂದನೆಯನ್ನು ಸಲ್ಲಿಸುತ್ತಾರೆಂದು ನಾನು ಭಾವಿಸಿದ್ದೆ. ಆದರೆ ಅವರು ಅಭಿನಂದನೆಯನ್ನು ಸಲ್ಲಿಸದೇ ಅವರು ವಿಚಾರಗಳನ್ನು ಸಂಪೂರ್ಣವಾಗಿ ಮನವರಿಕೆ ಮಾಡಿಕೊಳ್ಳದೇ ಈ ವಿಚಾರದಲ್ಲಿ ಸರ್ಕಾರ ಸಂಪೂರ್ಣ ದಿವ್ಯನಿರ್ಲಕ್ಷ ಮಾಡಿದೆ ಎಂದು ಹೇಳುವಂಥದ್ದನ್ನು ನಾನು ಅವರಿಂದ ನಿರೀಕ್ಷೆ ಮಾಡಿರಲಿಲ್ಲ. ಯಾವುದೇ ವಿಚಾರಗಳಲ್ಲಿ ಯೋಚನೆ ಮಾಡಿದರೂ ಕೂಡ ಕುಡಿಯುವ ನೀರನ್ನು ಕೊಡದೇ ಇರುವಂತಹ ಸರ್ಕಾರ ಅದು ನಾಲಾಯಕ್ ಸರ್ಕಾರ. ಅದರಲ್ಲಿ ಒಂದು ನಿಮಿಷವೂ ಇರಬೇಕಾದಂತಹ ಅಗತ್ಯ ಯಾರಿಗೂ ಕೂಡ ಇಲ್ಲ. ಉಲ್ಬಣಗೊಳ್ಳತಕ್ಕಂಥ ಪರಿಸ್ಥಿತಿಗಳಿಗೆ ಏನು ಕಾರಣ ಎನ್ನತಕ್ಕಂಥಾದ್ದನ್ನು ನಾನು ನನ್ನ ಇಲಾಖಾ ಬೇಡಿಕೆಗಳ ಮೇಲೆ ಉತ್ತರಕೊಡುವಂತಹ ಸಂದರ್ಭದಲ್ಲಿ ನಾನು ಕೊಡುವುದಕ್ಕೆ ತಯಾರಾಗಿದ್ದೇನೆ. ಈ ವರ್ಷ ಒಂದರಲ್ಲೇ ನಾವು ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದೇವೆ. ನಾವು ಹಣ ಬಿಡುಗಡೆ ಮಾಡಿರತಕ್ಕಂಥಾದ್ದು ಯಾವುದೇ ಕಾಲದಲ್ಲಿ ಆಗಲಾರದೇ ಮಾರ್ಚಿ ಒಂದೇ ತಿಂಗಳಲ್ಲಿ 101 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಹಣ ಕೊಡತಕ್ಕಂಥ ವಿಚಾರ ಒಂದೇ ಅಲ್ಲದೇ ತಾವು ಯೋಚನೆ ಮಾಡಬೇಕಾಗಿರುವಂಥಾದ್ದು ಅದಕ್ಕೆ ಪೂರಕವಾಗಿರತಕ್ಕಂಥಾದ್ದು, ಜನಸಂಖ್ಯೆ ಉಲ್ಬಣಗೊಳ್ಳುತ್ತಾ ಇರತಕ್ಕಂಥಾದ್ದು, ಬಿಸಿಲಿನ ತಾಪ ಹೆಚ್ಚಾಗುವಂಥಾದ್ದು ನೀರಾವರಿಗಾಗಿ ಅಂತರ್ಜಲವನ್ನು ಹೆಚ್ಚುಪ್ರಮಾಣದಲ್ಲಿ ಬಳಸುತ್ತಾ ಇರತಕ್ಕಂಥಾದ್ದು ನೀರನ್ನು ಇಂಗಿಸಲುಬೇಕಾಗಿರತಕ್ಕಂಥ ಸಮಪಾತಾಳ ಒಡ್ಡುಗಳನ್ನು ಮತ್ತು ಜಲಾನಯನ ಪ್ರದೇಶದ ಅಭಿವೃದ್ಧಿಯಲ್ಲಿ ಆಗದೇ ಇರತಕ್ಕಂಥ ಕೆಲವು ಕಾರ್ಯಕ್ರಮಗಳು ಒಟ್ಟಾರೆ ಇವೆಲ್ಲಾ ಮತ್ತು ಮನುಷ್ಯನ ಜೀವನ ಮಟ್ಟ ಹೆಚ್ಚಾದಾಗ ನಮ್ಮ ಪೂರ್ವಜರು ಬಳಸುತ್ತಿದ್ದಂತಹ ನೀರಿಗಿಂತ ಹೆಚ್ಚು ಪ್ರಮಾಣದಲ್ಲಿ ಜನ ನೀರನ್ನು ಬಳಸುತ್ತಾ ಇರುವಂತಹ ಕಾರಣದಿಂದ ನಾನು ಒಂದು ಸಣ್ಣ ಉದಾಹರಣೆ ನಿಮಗೆ ಹೇಳಬೇಕಾದರೆ ನೀವು ಬರೇ ಹಲ್ಲು ಉಜ್ಜುವಂತಹ ಒಂದು ಕ್ರಮಕ್ಕೆ 5 ನಿಮಿಷ ಕಾಲ ಅರ್ಧಲೀಟರ್ ನೀರನ್ನು ಉಪಯೋಗಿಸಬಹುದು. ಟ್ಯಾಪನ್ನು ಬಿಟ್ಟು ನೀವು ಏನಾದರೂ ಹಲ್ಲು ಉಜ್ಜಿಕೊಂಡರೆ 5 ನಿಮಿಷಕ್ಕೆ 18 ಲೀಟರ್ ನೀರು ಖರ್ಚಾಗುತ್ತದೆ. ಒಂದು ಸಣ್ಣದಾಗಿ ಚವರ ಮಾಡಿಕೊಳ್ಳುವುದಕ್ಕೆ ನಾನು ಏನೋ ಒಂದು ಸಣ್ಣ ವಿಚಾರವನ್ನು ಹೇಳುತ್ತೇನೆಂದು ಅಲ್ಲ. ಇದರ ಬಗ್ಗೆ ಸಂಪೂರ್ಣ ವಾದ ಮಾಹಿತಿ ಇದೆ. ಇದು ವೈಜ್ಞಾನಿಕವಾಗಿ ಇರುತ್ತದೆಂದು ಅಲ್ಲ. ವೈಜ್ಞಾನಿಕವಾಗಿರತಕ್ಕಂಥ ವಿಷಯಗಳನ್ನು ಚರ್ಚೆ ಮಾಡಿ ಇದರ ಬಗ್ಗೆ ನಾವೆಲ್ಲರೂ ಕೂಡ ಯೋಚನೆ ಮಾಡಬೇಕಾಗುತ್ತದೆ. ಇದರಲ್ಲಿ ಮುಖ ಕೈ ಕಾಲು ತೊಳೆಯುವುದಕ್ಕೆ ಬಳಸಿದರೆ ಅರ್ಧ ಲೀಟರ್ ಸಾಕು. ಕೇವಲ ಎರಡು ನಿಮಿಷದಲ್ಲಿ ನಲ್ಲಿ ಬಿಟ್ಟು ತೊಳೆದರೆ 18 ಲೀಟರ್. ನಲ್ಲಿಯಲ್ಲಿ ನಿಧಾನವಾಗಿ ನೀರು ತೊಟ್ಟಿಕ್ಕುತ್ತಿದ್ದರೆ 24 ಗಂಟೆಗಳಲ್ಲಿ 400 ಲೀಟರ್ ವ್ಯಯವಾಗುತ್ತದೆ. ಜೋರಾಗಿ

ಹೋದರೆ 3ಸಾವಿರ ಲೀಟರ್ ಗಟಾರವನ್ನು ಸೇರುತ್ತದೆ. ನಾವು ಏನು ಹೇಳಿದರೆ ತಾವು ಎಲ್ಲವನ್ನೂ ವೇದಾಂತಿಕರಿಸುತ್ತೀರಿ ಎನ್ನುವ ಮಾತಲ್ಲ. ಬೇಜವಾಬ್ದಾರಿಯುತವಾಗಿ ನಾವು ಮಾಡಬೇಕಾದ ಕೆಲವು ಕರ್ತವ್ಯಗಳನ್ನು ಮಾಡದೆ ಕೊಳವೆ ಬಾವಿಗಳನ್ನು ಹೆಚ್ಚು ಹೆಚ್ಚು ತೆಗೆಸುವುದು ಉತ್ತರ ಅಲ್ಲ ಎಂದು ಯಾರ್‍ಯಾರು ಮಾತನಾಡುತ್ತಾರೆ ಅವರೆಲ್ಲರೂ ಸಹ ತಮ್ಮ ತಮ್ಮ ಜಿಲ್ಲೆಗಳಿಗೆ ಎರಡು ಬೋರ್‌ವೆಲ್‌ಗಳು ಬೇಕು ಎಂದು ಅರ್ಜಿಗಳನ್ನು ಕೊಡುತ್ತಾರೆ. ಅಂತರ್ಜಲ ಎನ್ನುವುದು ಬೇಕಾದಷ್ಟು ಇರುವುದಕ್ಕೆ ಸಾಧ್ಯವಿಲ್ಲ. ನಮಗೆ ಬೇಕಾಗಿರತಕ್ಕಂಥ ನೀರಿನ ಉಪಯೋಗವನ್ನೂ ಸಹ ಸ್ವಲ್ಪ ಮಟ್ಟಿಗೆ ನಿಯಂತ್ರಣ ಮಾಡತಕ್ಕಂಥ ಕರ್ತವ್ಯವನ್ನು ಸಹ ನಾವು ಮಾಡಬೇಕಾಗುತ್ತದೆ. ಆಡಳಿತ ವಿಫಲಗೊಂಡಿದೆ ಎನ್ನುವಂತಹ ಹಿನ್ನೆಲೆಯಲ್ಲಿ ಇದು ನಮಗೆ ಬಂದಿರತಕ್ಕಂಥ ಶಾಪ. ನಮ್ಮಲ್ಲಿರತಕ್ಕಂಥ ಅರಿವಿನ ಅಭಾವ. ಇವೆಲ್ಲದರ ಜೊತೆಯಲ್ಲಿ ಆಡಳಿತ ಮಾಡಬೇಕಾದ ಎಲ್ಲಾ ಕರ್ತವ್ಯಗಳನ್ನು ಮಾಡಿದೆ. ನಿಮಗೆ ಉದಾಹರಣೆಗೆ ಹೇಳಬೇಕಾದರೆ 101 ಕೋಟಿ ರೂಪಾಯಿಗಳನ್ನು ಮಾರ್ಚಿ ಒಂದು ತಿಂಗಳಲ್ಲಿ ಕೊಟ್ಟಿದ್ದೇವೆ. ಕುಡಿಯುವ ನೀರಿಗೆ 1996-97ನೆ ಸಾಲಿನಲ್ಲಿ ಕೊಟ್ಟಿರತಕ್ಕಂಥ ಹಣ ಕೇವಲ 138.10 ಲಕ್ಷ ರೂಪಾಯಿಗಳು. ಆದರೆ ಈ ಸಾಲಿನಲ್ಲಿ ನಾವು ಕೊಟ್ಟಿರತಕ್ಕಂಥ ಹಣ 192.22 ಲಕ್ಷ ರೂಪಾಯಿಗಳು.

12.50 ಪಿ.ಎಂ.

ಅಂದರೆ ಕೇಂದ್ರ ವಲಯದಲ್ಲಿ ಮತ್ತು ರಾಜ್ಯ ವಲಯದಲ್ಲಿರತಕ್ಕ ಹಣವಲ್ಲದೆ ಮತ್ತೆ 22 ಕೋಟಿ ರೂಪಾಯಿಗಳನ್ನು ಪ್ರಕೃತಿ ವಿಕೋಪ ನಿಧಿಯಿಂದ ಕೊಟ್ಟಿದ್ದೇವೆ. ಇದರಿಂದಾಗಿ 214.47 ಕೋಟಿ ರೂಪಾಯಿಗಳು 1997-98ನೇ ಸಾಲಿನಲ್ಲಿ ಇದಕ್ಕಾಗಿ ಲಭ್ಯವಾಗಿದೆ. ಮಾರ್ಚ್‌ನಲ್ಲೇ ಕೊಟ್ಟಿರುವ ಹಣದ ಪ್ರಮಾಣವನ್ನು ನೋಡಿದರೆ ತಮಗೆ ಆಶ್ಚರ್ಯವಾಗುತ್ತದೆ. ಬಿಜಾಪುರ ಜಿಲ್ಲೆಯೊಂದಕ್ಕೆ 6.24 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. Among the districts, largest grant has been released to Bijapur which has received Rs.1.25 crore under central sector; Rs.1.77 crores under state sector; 2.80 crore under DDP and Rs.40 lakhs under calamity relief fund totalling Rs.6.24 crores. ಇದು ಕೇವಲ ಮಾರ್ಚ್ ತಿಂಗಳಿನಲ್ಲಿ ಕೊಟ್ಟಿರತಕ್ಕದ್ದು. ಇದಲ್ಲದೆ 2.63 ಕೋಟಿ ರೂಪಾಯಿಗಳು ಏಪ್ರಿಲ್ ತಿಂಗಳಿನಲ್ಲಿ ಬಿಡುಗಡೆಯಾಗುವುದಿದೆ. ನಾವು ಎಲ್ಲಾ ರೀತಿಯಾದ ಹಣಶನ್ನು ಕೊಟ್ಟಿದ್ದೇವೆ. ಕೆಲವು ಕಡೆ ಕೊಳವೆ ನೀರಿನ ಯೋಜನೆಗಳು, ನಲ್ಲಿ ನೀರಿನ ಯೋಜನೆಗಳು ಮುಕ್ತಾಯವಾಗಿಲ್ಲ ಎಂಬುದು ನಿಜ. ಏಕೆಂದರೆ, ಚುನಾವಣೆ ಬಂತು ಎಂದು ಅನುದಾನ ಎಷ್ಟು ಇರಬೇಕೋ ಅಷ್ಟನ್ನು ಒದಗಿಸಿಕೊಡದೆ, ಶೇಕಡ 10 ಭಾಗ ಅನುದಾನವಿಲ್ಲದಿದ್ದರೂ ಕೆಲವು ಕಡೆಗಳಲ್ಲಿ ನಾವು ಕೆಲಸವನ್ನು ಮಾಡಿದ್ದೇವೆಂದು

ತೋರಿಸಿಕೊಳ್ಳುವುದಕ್ಕಾಗಿ ನಮ್ಮ ನಿಯಮಾವಳಿಗಳನ್ನು ಮೀರಿ ಕೆಲವು ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಿದ್ದೇವೆ. ಆ ಹಣವನ್ನು ನಾವು ಒದಗಿಸಿಕೊಡಬೇಕಾಗುತ್ತದೆ. ಹಿಂದಿನ ವರ್ಷಗಳ ಈ ಅನುಭವವನ್ನು ಕಂಡು ಯಾವ್ಯಾವ ಹಳೆಯ ಬಾವಿಗಳಿಗೆ ಯಾವ್ಯಾವುದರ ಕಾಮಗಾರಿಯನ್ನು ಪೂರ್ತಿ ಮಾಡಲು ಆಗಿಲ್ಲ, ಆ ಕಾಮಗಾರಿಗಳಿಗೆ ಹಣವನ್ನು ಒದಗಿಸಭೇಕೆಂದು ಸುತ್ತೋಲೆಯನ್ನು ಅಧಿಕಾರಿಗಳಿಗೆ ಕೊಟ್ಟಿದ್ದೇವೆ. ಅಂದಾಜು ವೆಚ್ಚದ ಕನಿಷ್ಟ 40 ಭಾಗ ಹಣವನ್ನು ನೀವು ಇಟ್ಟುಕೊಳ್ಳದಿದ್ದರೆ ನೀವು ಆ ಕಾಮಗಾರಿಯನ್ನು ತೆಗೆದುಕೊಳ್ಳಬಾರದು, ಒಂದೇ ವರ್ಷದಲ್ಲಿ ಕಿರು ನೀರಿನ ಯೋಜನೆಯನ್ನು ಮುಕ್ತಾಯ ಮಾಡಬೇಕು, ಎರಡು ವರ್ಷದಲ್ಲಿ ರಾಷ್ಟ್ರೀಯ ಕುಡಿಯುವ ನೀರಿನ, ಕೊಳವೆ ಬಾವಿಯ ಮೂಲಕ ನೀರನ್ನು ಕೊಡುವ ಯೋಜನೆಯನ್ನು ಸಂಪೂರ್ಣವಾಗಿ ಮುಗಿಸಬೇಕೆಂದು ಅಧಿಕಾರಿಗಳಿಗೆ ತಿಳಿಸಲಾಗಿದೆ. ಗುಲ್ಬರ್ಗಾ, ರಾಯಚೂರು, ಬೀದರ್, ಬಳ್ಳಾರಿ ಈ ಜಿಲ್ಲೆಗಳ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಯವರು ಗುಲ್ಬರ್ಗಾದಲ್ಲಿ ಆ ಕಂದಾಯ ವಿಭಾಗದ ಸಮೀಕ್ಷೆಯನ್ನು ಕೈಗೊಂಡರು. ಆ ಸಂದರ್ಭದಲ್ಲಿ ನಮ್ಮ ಕಾರ್ಯದರ್ಶಿಯವರು, ಭೂಗರ್ಭ ಇಲಾಖೆಯಲ್ಲಿ ಇರತಕ್ಕ ಅಪರಕಾರ್ಯದರ್ಶಿ, ಜಲಶಿಲ್ಪ ವಿಭಾಗದಲ್ಲಿರುವ ಪ್ರಧಾನ ಇಂಜಿನಿಯರ್, ಈ ಮೂವರು ಅಲ್ಲಿ ಹೋಗಿ ತಕ್ಷಣವೇ ಇದರ ಬಗಗೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದ್ದೆವು. ಅದರಂತೆ ರಾಯಚೂರು ಮತ್ತು ಬಳ್ಳಾರಿ ಜಿಲ್ಲೆಯಲ್ಲಿ ಆ ಕ್ರಮವನ್ನು ತೆಗೆದುಕೊಂಡಿದ್ದಾರೆ. ಇದಲ್ಲದೆ ಬೇರೆ ಬೇರೆ ಕಡೆಗಳಿಂದ ರಿಗ್ ಯಂತ್ರಗಳನ್ನು ಅಭಾವವಿರುವ ಕಡೆಗಳಿಗೆ ಕಳಸಿಕೊಟ್ಟಿದ್ದೇವೆ. ಗುಲ್ಬರ್ಗಾದಲ್ಲಿ 12, ಬೀದರ್‌ನಲ್ಲಿ 6, ರಾಯಚೂರಿನಲ್ಲಿ 6, ಬಳ್ಳಾರಿಯಲ್ಲಿ 6 ರಿಗ್‌ಗಳು ಕೆಲಸ ಮಾಡುತ್ತಿದೆ. ಬೀದರ್ ಮತ್ತು ಗುಲ್ಬರ್ಗಾ ಜಿಲ್ಲೆಗಳಿಗೆ ತಲಾ ಒಂದು ಹೈಡ್ರೋ ಫ್ಯಾಕ್ಚರಿಂಗ್ ರಿಗ್‌ಗಳನ್ನು ಒದಗಿಸತಕ್ಕ ಕೆಲಸ ಮಾಡಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ: ಯಾವ್ಯಾವ ಜಿಲ್ಲೆಗಳಲ್ಲಿ ಎಷ್ಟು ರಿಗ್‌ಗಳು ಕೆಲಸ ಮಾಡುತ್ತಿದೆ? ಅದು ಖಾಸಗಿಯವರದ್ದು ಇರಬಹುದು ತಮ್ಮದ್ದು ಇರಬಹುದು.

ಶ್ರೀ ಎಂ.ಪಿ.ಪ್ರಕಾಶ್: ಸುಮಾರು 74 ರಿಗ್ ಯಂತ್ರಗಳು ಕೆಲಸ ಮಾಡುತ್ತಿವೆ. ಅದರಲ್ಲಿ 10 ರಿಗ್‌ಗಳು ಒಂದಲ್ಲ ಒಂದು ಕಾರಣದಿಂದ ಕೆಟ್ಟಿರುತ್ತದೆಂದು ಭಾವಿಸಿರುತ್ತೇವೆ. ಉಳಿದಂತೆ 60 ರಿಗ್‌ಗಳು ಕೆಲಸ ಮಾಡುತ್ತಿವೆ. ಕೇಂದ್ರ ಸರ್ಕಾರದ ನಿಯಮದ ಪ್ರಕಾರ ಒಂದು ತಿಂಗಳಿಗೆ 15 ಕೊಳವೆ ಬಾವಿಗಳನ್ನು ತೆಗೆಯಬಹುದೆಂದು ನಿಯಮವಿದ್ದರೂ ಸಹ ನಾವು 20-25 ಕೊಳವೆ ಬಾವಿಗಳನ್ನು ಒಂದು ತಿಂಗಳಿಗೆ ತೆಗೆಯತಕ್ಕ ಕೆಲಸ ಮಾಡುತ್ತಿದ್ದೇವೆ. ಆ ರೀತಿ ಮಾಡುವಂತೆ ಪಿ.ಹೆಚ್.ಇ. ನವರಿಗೆ ಸೂಚನೆ ಕೊಟ್ಟಿದ್ದೇವೆ. ಇದಲ್ಲದೆ ಖಾಸಗಿಯವರ ಮೂಲಕ ರಿಗ್‌ಗಳನ್ನು ತೆಗೆದುಕೊಳ್ಳಬಹುದು, ಕೊಳವೆ ಬಾವಿಗಳನ್ನು ತೆಗೆಸತಕ್ಕ ಕೆಲಸ ಮಾಡಬಹುದೆಂದು ತಿಳಿಸಿದ್ದೇವೆ. ಒಂದು ವೇಳೆ ಅದನ್ನು ಮಾಡಲು ಸಾಧ್ಯವಿಲ್ಲವೆಂದಿದ್ದರೆ ಮೊದಲೇ

ಬೋರ್ ಪಾಯಿಂಟ್‌ಗಳನ್ನು ಪಿ.ಹೆಚ್.ಇ.ನವರು ತಿಳಿಸಬೇಕೆಂದು ಹೇಳಿದ್ದೇವೆ. ಈಗ ಎಲ್ಲರೂ ಆ ಕ್ರಮಗಳನ್ನು ತೆಗೆದುಕೊಂಡಿದ್ದಾರೆ. ಇಲ್ಲಿ ಹಣ ಖರ್ಚಾಗಿಲ್ಲವೆಂದು ಹೇಳತಕ್ಕದ್ದು ಸರಿಯಲ್ಲ. ಹೀಗೆ ಕೇಂದ್ರದಿಂದ ಮತ್ತು ರಾಜ್ಯಸರ್ಕಾರದಿಂದ ಬಂದಂಥ ಎಲ್ಲಾ ಅನುದಾನವನ್ನು ನಾವು ಕೊಟ್ಟಷ್ಟು ಪ್ರಮಾಣದಲ್ಲಿ ಈ ಹಿಂದಿನ ಯಾವ ಸರ್ಕಾರದವರೂ ಪ್ರಾಯಶಃ ಕೊಟ್ಟಿಲ್ಲ, ಕೊಡಲು ಸಾಧ್ಯವಾಗಿಲ್ಲ. ಶಿರಾ ಮತ್ತು ಕಳಂಬೆಳ್ಳಗಳಲ್ಲಿ ನಾವು 5-6 ರಿಗ್‌ಗಳನ್ನು ಕಳುಹಿಸಿಕೊಟ್ಟು, ಬೋರ್ ಪಾಯಿಂಟ್ ವಿಫಲವಾಗುತ್ತಿದೆ. ಅದಕ್ಕಾಗಿ ನಾವು ವಿಶ್ವಬ್ಯಾಂಕ್ ಯೋಜನೆಯ ಅಡಿಯಲ್ಲಿ ಕೆಲವು ಕೆಲಸಗಳನ್ನು ಪ್ರಾರಂಭ ಮಾಡಿದ್ದೇವೆ. ಜಲಮೂಲಗಳೆಲ್ಲೆಲ್ಲಿದೆ ಅಲ್ಲಿ ಆದಷ್ಟು ಭೂ ಮೇಲ್ಭಾಗದಲ್ಲಿ ಸಿಗತಕ್ಕ ನೀರನ್ನು ಉಪಯೋಗ ಮಾಡಿಕೊಳ್ಳತಕ್ಕ ಪ್ರಯತ್ನ ಮಾಡಿ ಎಂದು ಅವರಿಗೂ ಹೇಳಿದ್ದೇವೆ. ಅದೇ ರೀತಿ ನೆದರ್‌ಲ್ಯಾಂಡ್ ಮತ್ತು ಡೆನ್ಮಾರ್ಕ್‌ಗಳ ಯೋಜನೆಗಳೂ ಸಹ ಕಾರ್ಯರೂಪದಲ್ಲಿದೆ. ಒಂದೊಂದು ಜಿಲ್ಲೆಗಳಲ್ಲಿ ಗುರುತಿಸಲ್ಪಟ್ಟಿರುವ ಭಾಗಗಳನ್ನು ಬಿಟ್ಟು ಉಳಿದ ಕಡೆಗಳಿಗೆ ಇದುವರೆಗೂ ಟ್ಯಾಂಕರ್‌ಗಳ ಮೂಲಕ ನೀರನ್ನು ಕೊಡುತ್ತಿದ್ದೇವೆ. ಯಾವುದೇ ಕಡೆ ನೀರಿನ ಅಭಾವವಿರಬಾರದೆಂದು ನಾವು ಯೋಚನೆ ಮಾಡಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ: ನನ್ನ ಜಿಲ್ಲೆಯಲ್ಲಿ ನನಗೆ ತಿಳಿದಮಟ್ಟಿಗೆ ಆ ರೀತಿ ಟ್ಯಾಂಕರ್‌ಗಳ ಮೂಲಕ ನೀರನ್ನು ಕೊಡುತ್ತಿಲ್ಲ.

ಶ್ರೀ ಎಂ.ಪಿ.ಪ್ರಕಾಶ್: ನೀರೇ ಸಿಗುವುದಿಲ್ಲ ಎಂದಾಗ ಯಾವುದೇ ಮೂಲದಿಂದ ಎಂದಾಗ ಟ್ಯಾಂಕರ್‌ನಿಂದ ನೀರನ್ನು ಕೊಡುವ ಅಗತ್ಯವಿದೆ. ನಾವು ಪ್ರತಿಯೊಬ್ಬರಿಗೂ ಹೇಳಿದ್ದೇವೆ, ನೀರಿನ ಅಭಾವವಿರುವ ಪ್ರದೇಶವೇನಿದೆ ಅಲ್ಲಿ, ಜಲಮೂಲಗಳನ್ನು ಪತ್ತೆ ಮಾಡಲು ಸಾಧ್ಯವೇ ಇಲ್ಲದಿದ್ದಂಥ ಸಂದರ್ಭದಲ್ಲಿ ಟ್ಯಾಂಕರ್‌ನಿಂದ ನೀರನ್ನು ಒದಗಿಸಬೇಕು ಎಂದು ಹೇಳಿ ವ್ಯವಸ್ಥೆ ಮಾಡಿದ್ದೇವೆ. ಮುಖ್ಯ ಕಾರ್ಯ ನಿರ್ವಾಹಕಾಧಿಕಾರಿಗಳು ಆ ಕೆಲಸವನ್ನು ಮಾಡುತ್ತಾರೆ. ತಾವು ತಮ್ಮ ಭಾಗದಲ್ಲಿ ಯಾವುದಾದರೂ ಕಡೆಯಲ್ಲಿ ನೀರಿನ ಎಲ್ಲಾ ಮೂಲಗಳು ಬತ್ತಿಹೋಗಿದೆಯೆಂದು ಹೇಳಿದರೆ ಈ ಕ್ಷಣವೇ ಟ್ಯಾಂಕರ್‌ನ್ನು ಕೊಡತಕ್ಕ ಕೆಲಸ ಮಾಡುತ್ತೇವೆ. ಇದರ ಜೊತೆಗೆ ನಾವು ಹೊಸ ಯೋಜನೆಯ ಬಗ್ಗೆ ಸಹ ಯೋಚನೆ ಮಾಡಿದ್ದೇವೆ. 16.60 ಕೋಟಿ ರೂಪಾಯಿಗಳ ಆ ಯೋಚನೆಯ ಬಗ್ಗೆ ಇಂದು ಸಂಜೆ ಬೇಡಿಕೆಗಳ ಬಗ್ಗೆ ಮಾತನಾಡುವಾಗ ಹೇಳುತ್ತೇನೆ.

ಶ್ರೀ ಕಾಗೋಡುತಿಮ್ಮಪ್ಪ: ಅದು ಒಂದು ಗಜಗರ್ಭದಂತೆ ಬಿಡಿ.

ಶ್ರೀ ಎಂ.ಪಿ.ಪ್ರಕಾಶ್: ಅದು ತಮ್ಮ ಕಾಲದಲ್ಲಿ ಗರ್ಭವನ್ನು ಧರಿಸುವಂಥ ಕಾಲದಲ್ಲಿ ಮಾಡಿದಂಥ ತಪ್ಪು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ತಾವು ಎಲ್ಲವನ್ನೂ ನಿಮ್ಮ ಕಾಲ ನಿಮ್ಮ ಕಾಲ ಎಂದು ಹೇಳುತ್ತೀರಿ. ತಮ್ಮ ಸರ್ಕಾರ ಬಂದು ಮೂರೂವರೆ ವರ್ಷಗಳಾಗಿದೆ. ಐದು ವರ್ಷಗಳ ಹಿಂದೆ ಅವರೇ ಅಧಿಕಾರ ಮಾಡಿದ್ದರು. ಮತ್ತೆ ಅವರೇ ಆಳುತ್ತಿದ್ದಾರೆ. ನೀವು ಏನು ಮಾಡಿದ್ದೀರೆಂದರೆ ಹೇಳುವುದಿಲ್ಲ, ಎಲ್ಲವನ್ನೂ ನಮ್ಮ ಕಾಲದಲ್ಲಾಗಿದೆಯೆಂದು ಹೇಳುತ್ತಾರೆ.

ಶ್ರೀ ಎಂ.ಪಿ.ಪ್ರಕಾಶ್: ನಮ್ಮ ಸರ್ಕಾರವಿರದಿದ್ದರೆ ನೀರಿಲ್ಲದೆ ಜನರು ಗುಳೆ ಏಳತಕ್ಕ ಪರಿಸ್ಥಿತಿ ಬರುತ್ತಿತ್ತು. ನಾವು ಕುಡಿಯುವ ನೀರಿನ ಯೋಜನೆಯನ್ನು ದಕ್ಷತೆಯಿಂದ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಮಾಡಿದ್ದರಿಂದ ಜನರು ಗುಳೆ ಹೋಗತಕ್ಕದ್ದು ಆಗಿಲ್ಲ. ನಾವು ಕುಡಿಯುವ ನೀರಿನ ವ್ಯವಸ್ಥೆ ಮಾಡಿದ್ದೇವೆ. ನಾವು ಏಕೆ ಆ ಯೋಜನೆ ನಿಂತು ಹೋಯಿತು ಎಂಬ ಬಗ್ಗೆ ಹೇಳಬೇಕಾಗುತ್ತದೆ. ಆ ವಿಶ್ವಬ್ಯಾಂಕ್ ಯೋಜನೆ ಗರ್ಭ ಧರಿಸಿಕೊಳ್ಳಲು ಏಕೆ ಹತ್ತು ತಿಂಗಳಾಯಿತೆಂದರೆ ಮೂಲದಲ್ಲೇ ತಪ್ಪಾಗಿತ್ತು. ಅದನ್ನು ಸರಿಪಡಿಸಬೇಕಾದರೆ ಬಹಳ ಕಷ್ಟಪಡಬೇಕಾಯಿತು. ಆದರೆ ತಮ್ಮನ್ನು ಟೀಕೆ ಮಾಡುವುದಕ್ಕಾಗಿ ಎಂದೇನಲ್ಲ.

+ ಶ್ರೀ ಎಂ.ವೀರಪ್ಪಮೊಯ್ಲಿ (ಕಾರ್ಕಳ): ಮಾನ್ಯ ಉಪಾಧ್ಯಕ್ಷರೆ, ತಾವು ಮೂರೂವರೆ ವರ್ಷದಿಂದ ಇದನ್ನೇ ಹೇಳಿಕೊಂಡು ಬಂದಿದ್ದೀರಿ. ಹಿಂದಿನ ಸರ್ಕಾರವನ್ನು ಬಹಳ ಬೈದು ಅದರಿಂದ ನೀರು ಬರುವುದಿದ್ದರೆ ಒಪ್ಪಿಕೊಳ್ಳೋಣ. ಸಾಕಷ್ಟು ಬೈಯ್ಯಿರಿ ನಾವೂ ಕೇಳುತ್ತೇವೆ. ಆದರೆ ಇದರಿಂದ ಸಮಸ್ಯೆ ಪರಿಹಾರವಾಗುವುದಿಲ್ಲ. ಯಾರ್‍ಯಾರು ಏನೇನು ಮಾಡಿದ್ದಾರೆ ಎಂಬ ಬಗ್ಗೆ ವಿಮರ್ಶೆ ಎಷ್ಟು ಬೇಕಾದರೂ ಮಾಡಬಹುದು. ಈಗ ಇರುವ ಸಮಸ್ಯೆಯ ಬಗ್ಗೆ ತಾವು ಇದುವರೆಗೆ ಮಾತನಾಡಿದ್ದೀರಿ, ಆದರೆ ಇದರಿಂದ ಸಮಸ್ಯೆ ಪರಿಹಾರವಾಗುವುದಿಲ್ಲ. ಹಣವನ್ನು ಎಷ್ಟು ಉಳಿಸಿದ್ದೀರಿ ಎಂಬ ಬಗ್ಗೆ ಅಂಕಿಅಂಶಗಳನ್ನು ನಾನು ಹೇಳಲು ಹೋಗುವುದಿಲ್ಲ. ಬಿಜಾಪುರದಲ್ಲಿ 6.87 ಕೋಟಿ ಹಣವಿದ್ದರೆ ನಾಲ್ಕು ಕೋಟಿ ಖರ್ಚು ಮಾಡಿರುವುದಾಗಿ ಹೇಳಿದ್ದೀರಿ. ಇದನ್ನು ನಾನಾ ದೃಷ್ಟಿಯಿಂದ ನೋಡಬೇಕು. ದಯಮಾಡಿ ತಕ್ಷಣವೇ ಕಂದಾಯ ಮತ್ತು ವಿದ್ಯುತ್ ಸಚಿವರ ಸಭೆಯನ್ನು ಕರೆದು ಚರ್ಚೆ ಮಾಡಬೇಕು. ಅನಂತರ ಜಿಲ್ಲಾ ಸಚಿವರಿಗೆ ಸಂಪೂರ್ಣವಾದ ಅಧಿಕಾರವನ್ನು ಕೊಡಬೇಕು. ಏಕೆಂದರೆ ಇಲ್ಲಿ ವಿದ್ಯುತ್ ಇಲಾಖೆ, ಕಂದಾಯ ಇಲಾಖೆ ಒಟ್ಟಿಗೇ ಕೆಲಸ ಮಾಡಬೇಕು. ತಾಲ್ಲೂಕು ಮಟ್ಟದಲ್ಲಿ ಸಂಬಂಧಪಟ್ಟ ಶಾಸಕರ ಅಧ್ಯಕ್ಷತೆಯಲ್ಲಿ ಅವರೇನೇನು ತೀರ್ಮಾನ ತೆಗೆದುಕೊಳ್ಳುತ್ತಾರೆ ಅದನ್ನು ಮಾಡಲು ಕ್ರಮ ತೆಗೆದುಕೊಳ್ಳಬೇಕು. ಸ್ಥಳೀಯ ಶಾಸಕರು ಆ ರೀತಿ ಸ್ಥಳದಲ್ಲೇ ತೀರ್ಮಾನ ತೆಗೆದುಕೊಳ್ಳುವಂತೆ ಮಾಡಬೇಕು. ನಾವು ತಮ್ಮ ಉದ್ದೇಶದ ಬಗ್ಗೆ ಪ್ರಶ್ನೆ ಮಾಡುತ್ತಿಲ್ಲ. ಆದರೆ ಇಲ್ಲಿ ಸಮರೋಪಾದಿಯಲ್ಲಿ ಕಾರ್ಯಕ್ರಮವಾಗುತ್ತಿಲ್ಲ. ಏಕೆಂದರೆ ವಿದ್ಯುತ್ ಇಲಾಖೆಯವರು ಎಲ್ಲೆಲ್ಲಿ ಸಂಪರ್ಕ ಕೊಡಬೇಕೋ ಅದನ್ನು ಕೊಡುತ್ತಿಲ್ಲ, ಅವರಲ್ಲಿ

ಅಗತ್ಯವಾಗಿರುವ ಸಾಮಗ್ರಿಗಳಿಲ್ಲ, ಇಂಥ ಸಮಸ್ಯೆಯನ್ನೇ ಎದುರಿಸಲು ಕೆ.ಇ.ಬಿ.ಯವರು ಎಷ್ಟು ಸಾಮಗ್ರಿಗಳನ್ನು ಒದಗಿಸಿದ್ದಾರೆ? ಅವರು ಮಾಮೂಲಾಗಿ ಒದಗಿಸಬಹುದು ಅದು ಬೇರೆ ವಿಚಾರ. ಅವರು ಎಷ್ಟು ಟ್ರಾನ್ಸ್‌ಫಾರ್ಮರ್, ಕಂಡಕ್ಟರ್‌ಗಳನ್ನು ಒದಗಿಸಿದ್ದಾರೆ ಎಂಬ ಬಗ್ಗೆ ವರದಿ ಕೊಡಿ. ಆದರೆ ಅದು ತಮ್ಮ ಹತ್ತಿರ ಲಭ್ಯವಿರುವುದಿಲ್ಲ. ತಾವು ಹಣದ ಲೆಕ್ಕವನ್ನು ಮಾತ್ರ ಕೊಡಬಹುದು, ಆದ್ದರಿಂದ ತಾವು ದಯಮಾಡಿ ವಿದ್ಯುತ್ ಸಚಿವರನ್ನು ಕಂದಾಯ ಸಚಿವರನ್ನು ಕರೆದು ಚರ್ಚೆ ಮಾಡಿ. ಕೆಲಾಮಿಟಿ ಹಣವನ್ನು ತಾವೇ ಖರ್ಚು ಮಾಡುವುದಿದ್ದರೆ ಅಥವಾ ಯೋಜನೆಯಲ್ಲಿರುವ ಹಣವನ್ನೇ ತಾವು ಖರ್ಚು ಮಾಡುವುದಿದ್ದರೆ, ಆಯಾ ಜಿಲ್ಲಾಧಿಕಾರಿಗಳ ಹತ್ತಿರವೇ ಹಣವಿದ್ದರೆ ಕೇಂದ್ರ ಸರ್ಕಾರದವರು ಏತಕ್ಕೆ ಬಿಡುಗಡೆ ಮಾಡುತ್ತಾರೆ? ಆದುದರಿಂದ ದಯಮಾಡಿ ಈ ಬಗ್ಗೆ ಲಕ್ಷ್ಯ ಕೊಡಿ. ತಾವು ಮಾಡಿದ್ದು ಸರಿ, ಈಗ ಎತ್ತಿದಂಥ ಪ್ರಶ್ನೆಗಳಿಗೆ ತಾವು ಉತ್ತರ ಕೊಡಬೇಕು, ಆದರೆ ದಯಮಾಡಿ ತಾವು ಕಾರ್ಯೋನ್ಮುಖರಾಗಬೇಕು. ಪ್ರಾಯೋಗಿಕವಾಗಿ, ವ್ಯವಹಾರಿಕವಾಗಿ ಈ ರೀತಿಯ ಕಾರ್ಯಕ್ರಮವನ್ನು ತೆಗೆದುಕೊಳ್ಳದೆ ಇದ್ದರೆ ಸರಿಯಾದ ಕೋಆರ್ಡಿನೇಷನ್ ಆಗದಿದ್ದರೆ; ಬರೀ ಈ ಮಾತನ್ನು ಹೇಳಬಹುದು, ಹಣ ಬಿಡುಗಡೆ ಮಾಡಿದೆ ಎಂದು ಹೇಳಬಹುದು. ಆದರೆ ಅಲ್ಲಿ ನೀರು ಮಾತ್ರ ಲಭ್ಯವಾಗುವುದಿಲ್ಲ. ದಯಮಾಡಿ ಈ ಬಗ್ಗೆ ತಾವು ಸಮರೋಪಾದಿಯಲ್ಲಿ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

+ ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ): ನಾನು ಮೊನ್ನೆ ಕೇಂದ್ರ ಸಚಿವರಾದ ಸನ್ಮಾನ್ಯ ಬಾಬಗೌಡ ಪಾಟೀಲರ ಹತ್ತಿರ ಮಾತನಾಡಿದಾಗ ಕುಡಿಯುವ ನೀರಿನ ಈ ಅಭಾವವನ್ನು ನೀಗುವ ಸಲುವಾಗಿ ಕೇಂದ್ರ ಸರ್ಕಾರ ಹಿಂದೆ ಮುಂದೆ ನೋಡುತ್ತಿಲ್ಲ. ನನಗೆ ಗೊತ್ತಿರುವಂತೆ, ಆ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ತಾವು ಹೋಗಿ ಭೇಟಿ ಮಾಡಿದಾಗ ಈಗಾಗಲೇ ಒಂದು ಕಂತಿನ ಹಣವನ್ನು ಕೊಟ್ಟಿದ್ದಾರೆ. ಕೆಲಾಮಿಟಿ ಹಣ ಬಿಡುಗಡೆಯಾಗಿದೆ. ಯಾವುದೇ ಜಿಲ್ಲೆಗೆ ಹೋದರೂ ಹಣವಿದೆ ಅವರು ಖರ್ಚು ಮಾಡುತ್ತಿಲ್ಲ. ಈಗ ತಾವೇನು ಹೇಳುತ್ತೀರೆಂದರೆ, ತಕ್ಷಣ ಅಭಾವ ನೀಗುವ ಸಲುವಾಗಿ ಟ್ಯಾಂಕರ್‌ಗಳಲ್ಲಿ ನೀರಿನ ವ್ಯವಸ್ಥೆ ಮಾಡುತ್ತೇವೆಂದು ಹೇಳುತ್ತೀರಿ. ಪ್ರತಿ ವರ್ಷವು ಏಪ್ರಿಲ್, ಮೇ ತಿಂಗಳು ಬಂದಾಗ ಇದನ್ನೇ ನಾವು ಚರ್ಚೆ ಮಾಡುತ್ತೇವೆ. ನಮಗೆ ಗೊತ್ತಿರುವಂತೆ, ಈಗಾಗಲೇ ಅನೇಕ ಯೋಜನೆಗಳು ಪ್ರಾರಂಭವಾಗಿವೆ, ಆ ಯೋಜನೆಗಳನ್ನು ಪೂರ್ಣ ಮಾಡಿದರೆ ಕೆಲವು ಸಮಸ್ಯೆಗಳು ಬಗೆಹರಿಯುತ್ತವೆ. ನಾವು ಕುಡಿಯುವ ನೀರಿನ ಕುರಿತು ಮಾತನಾಡುವಾಗ ಮನುಷ್ಯರ ಬಗ್ಗ ಮಾತನಾಡುತ್ತೇವೆ, ಜಾನುವಾರುಗಳನ್ನು ಮರೆತುಬಿಡುತ್ತೇವೆ. ಸನ್ಮಾನ್ಯ ಗ್ರಾಮೀಣ ಸಚಿವರಿಗೆ ಗೊತ್ತಿರುವಂತೆ ನೀವು ಈ ರಾಜ್ಯದ ಯಾವುದೇ ಭಾಗಕ್ಕೆ ಹೋಗಿ ಎಲ್ಲಾ ಕೆರೆಕಟ್ಟೆಗಳು ಬತ್ತಿಹೋಗಿ, ಏಳೆಂಟು ಕಿ.ಮಿ. ದೂರ ಜಾನುವಾರುಗಳು ಕುಡಿಯುವ ನೀರಿಗಾಗಿ ಹತ್ತುವಂಥ ದಾರುಣಸ್ಥಿತಿಯನ್ನು ನಾವು ಕಾಣುತ್ತಿದ್ದೇವೆ. ಅದಕೋಸ್ಕರ ಶಾಶ್ವತವಾಗಿ

ಈ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಏನಾದರೂ ಕಾರ್ಯಕ್ರಮ ಹಮ್ಮಿಕೊಳ್ಳಿ, ಅದಕ್ಕೆ ಚರ್ಚೆ ಮಾಡಬೇಕಾದರೆ ಉತ್ತರ ಕೊಡಿ, ಆದರೆ ಕೆಲಾಮಿಟಿ ಫಂಡ್, ಕುಡಿಯುವ ನೀರಿಗೋಸ್ಕರ ಹೆಚ್ಚಿನ ಹಣ ಕೇಂದ್ರದಿಂದ ಬಂದಿದೆಯಲ್ಲವೇ, ಜಿಲ್ಲಾಧಿಕಾರಿಗಳ ಹತ್ತಿರ ಹಣವಿದ್ದರೆ ಏತಕ್ಕೆ ಖರ್ಚುಮಾಡುತ್ತಿಲ್ಲ, ಶಾಸಕರನ್ನು ಏತಕ್ಕೆ ವಿಶ್ವಾಸಕ್ಕೆ ತೆಗೆದುಕೊಳ್ಳುತ್ತಿಲ್ಲ, ಈ ಬಗ್ಗೆ ತಾವು ಸ್ಪಷ್ಟವಾದ ನಿರ್ದೇಶನವನ್ನೇನಾದರೂ ಕೊಡಬಹುದೆ?

ಶ್ರೀ ಎಂ.ಪಿ.ಪ್ರಕಾಶ್: ಇವತ್ತು ನಮ್ಮ ಬೇಡಿಕೆಗಳ ವಿಚಾರದಲ್ಲಿ ನಾವು ಸಂಪೂರ್ಣವಾಗಿ ಉತ್ತರವನ್ನು ಕೊಡಬಹುದಿತ್ತು. ಶೂನ್ಯವೇಳೆಯಲ್ಲಿ ನಿಲುವಳಿ ಸೂಚನೆಯ ಮೂಲಕ ಈ ವಿಚಾರವನ್ನು ಎತ್ತಿದ್ದರಿಂದ ನಾನು ಈಗ ಉತ್ತರ ಕೊಡುವುದಕ್ಕು ಆಗುವುದಿಲ್ಲ, ಆಗಲು ಉತ್ತರ ಕೊಡುವುದಕ್ಕಾಗುವುದಿಲ್ಲ. ಒಂದು ವೇಳೆ ಇಲ್ಲಿ ಉತ್ತರ ಕೊಡಿ ಎಂದರೆ ಸಂಪೂರ್ಣವಾದ ಉತ್ತರವನ್ನು ಕೊಡುತ್ತೇನೆ, ಬೇಡಿಕೆಯ ಸಂದರ್ಭದಲ್ಲಿ ಆ ಎರಡು ವಿಭಾಗವನ್ನಾದರೂ ಕೈಬಿಡಿ. ಇವತ್ತು ಸಂಜೆಯೆ ಬೇಡಿಕೆಗಳ ಮೇಲೆ ಚರ್ಚೆ ಇದೆ, ಆದರೆ ಇಲ್ಲಿ ಪ್ರಶ್ನಿಸಬಾರದು, ಚರ್ಚಿಸಬಾರದೆಂದೇನೂ ಇಲ್ಲ. 35 ಕೋಟಿ ರೂ.ಗಳನ್ನು ಏಪ್ರಿಲ್ ತಿಂಗಳಲ್ಲಿ ಬಿಡುಗಡೆ ಮಾಡುವುದು ನಮ್ಮ ಮಾಮೂಲಿಯಾದ ಅನುದಾನವಾಗಿದೆ, ಅದರಲ್ಲಿ ಹೆಚ್ಚುವರಿಯಾದ ಅನುದಾನವನ್ನು ಕೇಂದ್ರ ಸರ್ಕಾರ ನಮಗೆ ಕೊಟ್ಟಿಲ್ಲ. ನಮ್ಮ ಉದ್ಯೋಗ ಭರವಸೆ ಯೋಜನೆಯಲ್ಲಿ ನಲವತ್ತು ಕೋಟಿ ರೂಪಾಯಿಗಳನ್ನು ಬಾಬಾಗೌಡ ಪಾಟೀಲರು ಕೊಟ್ಟಿರುವುದು ಹೆಚ್ಚುವರಿ ಹಣವಲ್ಲ. 1997-98ನೇ ಸಾಲಿಗೆ ನಮಗೆ ಕೊಡಬೇಕಾದ ಎರಡನೆಯ ಹಾಗೂ ಮೂರನೆ ಕಂತಿನ ಹಣವನ್ನು ಅವರು ಒಂದನೆ ಕಂತಿನ ಹಣವನ್ನಾಗಿ ಪರಿವರ್ತನೆ ಮಾಡಿ ಏಪ್ರಿಲ್ ತಿಂಗಳಲ್ಲಿ ಬಿಡುಗಡೆ ಮಾಡಿದ್ದಾರೆ. ಕೇಂದ್ರ ಸರ್ಕಾರದಲ್ಲೂ ಕೂಡ ಹಣದ ದೊಡ್ಡ ತೊಂದರೆ ಇದ್ದದ್ದರಿಂದ, ಚುನಾವಣೆಗಳು ಬಂದಿದ್ದರಿಂದ ಅವರು ನಮಗೆ ಕೊಡಬೇಕಾದ ಎಂಟು ಬ್ಲಾಕ್‌ಗಳಲ್ಲಿ ಎರಡನೆ ಕಂತು, ಉಳಿದ ಬ್ಲಾಕ್‌ಗಳಲ್ಲಿ ಕೊಡಬೇಕಾದ ಮೂರನೆ ಕಂತಿನ ಹಣವನ್ನು ಏಪ್ರಿಲ್ ಒಂದನೆ ತಾರೀಖಿನ ದಿವಸ ಅವರು ಕೊಟ್ಟಿದ್ದಾರೆ. ಅದು ಏಪ್ರಿಲ್ ಒಂದನೇ ತಾರೀಖಿನ ಕಂತಾಗುವುದರಿಂದ ಅದು ಒಂದನೇ ಕಂತಾಗಿ ಪರಿವರ್ತನೆಗೊಳ್ಳುತ್ತದೆ. ನಮಗೆ ಹೆಚ್ಚುವರಿಯಾಗಿ ಹಣ ಮಾರ್ಚ್ ತಿಂಗಳಲ್ಲಿ ಬಂದಿದೆ. ಕೇಂದ್ರ ಸರ್ಕಾರದವರು ನಾವು ಒಳ್ಳೆಯ ಕೆಲಸವನ್ನು ಮಾಡಿ ಹಣವನ್ನು ಖರ್ಚು ಮಾಡಿದ್ದೇವೆನ್ನುವ ಕಾರಣಕ್ಕೆ 20 ಕೋಟಿ ರೂ.ಗಳನ್ನು ಹೆಚ್ಚುವರಿಯಾಗಿ ನಮಗೆ ಬಿಡುಗಡೆ ಮಾಡಿದರು. ಈ ಬಿಡುಗಡೆ ಮಾಡಿರತಕ್ಕಂಥ ಹಣದಲ್ಲಿ ಮಾರ್ಚ್‌ತಿಂಗಳಿಗೆ ಬಿಡುಗಡೆ ಮಾಡಿರುವುದು ಸೆಂಟರ್ ಸೆಕ್ಟಾರ್‌ನಲ್ಲಿ ಸಾಮಾನ್ಯವಾಗಿರುವ ನಮ್ಮ ಯೋಜನೆಗಳಿಗೆ, ಬೆಂಗಳೂರು ನಗರಜಿಲ್ಲೆಗೆ 80 ಲಕ್ಷ, ಸ್ಟೇಟ್ ಸೆಕ್ಟಾರ್‌ನಲ್ಲಿ 23.73 ಲಕ್ಷ ಮತ್ತೆ ಸ್ಟೇಟ್ ಸೆಕ್ಟಾರ್‌ನಲ್ಲಿ ಹೆಚ್ಚುವರಿಯಾಗಿ 30

ಲಕ್ಷ, ಹೀಗೆ ಒಟ್ಟಿಗೆ 132.73 ಲಕ್ಷ ರೂ.ಗಳನ್ನು ಬೆಂಗಳೂರು ನಗರ ಜಿಲ್ಲೆಗೆ ಬಿಡುಗಡೆ ಮಾಡಿದ್ದೇವೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ 103.30 ಲಕ್ಷ ರೂ. ಕೇಂದ್ರ ವಲಯದಲ್ಲಿ ಕೊಟ್ಟಿದ್ದೇವೆ, ರಾಜ್ಯ ವಲಯದಲ್ಲಿ 32.16 ಲಕ್ಷ ರೂ, ಹೆಚ್ಚುವರಿ ಹಣವಾಗಿ ರಾಜ್ಯವಲಯದಲ್ಲಿ 40 ಲಕ್ಷ ರೂ. ಮತ್ತು ಪ್ರಕೃತಿ ವಿಕೋಪ ನಿಧಿಯಿಂದ 30 ಲಕ್ಷ ರೂ. ಒಟ್ಟಿಗೆ 205.46 ಲಕ್ಷ ರೂ. ಕೊಟ್ಟಿದ್ದೇವೆ ಮಾನ್ಯ ಕಾಗೋಡು ತಿಮ್ಮಪ್ಪನವರೇ, ಹಾಗೇಯೇ ತಮ್ಮ ಶಿವಮೊಗ್ಗಕ್ಕೆ 185.40 ಲಕ್ಷ ರೂ.ಕೇಂದ್ರ ವಲಯದಲ್ಲಿ, ರಾಜ್ಯವಲಯದಲ್ಲಿ 32.8 ಲಕ್ಷ ರೂ. ಹೆಚ್ಚುವರಿ ಹಣವಾಗಿ ರಾಜ್ಯ ವಲಯದಲ್ಲಿ 173.50 ಲಕ್ಷ ರೂ. ಕೊಟ್ಟಿದ್ದೇವೆ. ಅಂದರೆ ಮಾರ್ಚ್ ತಿಂಗಳಲ್ಲಿ ಕೊಟ್ಟಿದ್ದೇವೆ, ಮಾರ್ಚ್ ತಿಂಗಳಲ್ಲಿ ಹಣ ಕೊಟ್ಟ ತಕ್ಷಣ ಖರ್ಚಾಗುವುದಿಲ್ಲ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಅದಕ್ಕೆ, ಯಾವಾಗ ಹಣ ಬಿಡುಗಡೆ ಮಾಡಬೇಕೋ ಆವಾಗ ಹಣ ಬಿಡುಗಡೆ ಮಾಡುವುದಿಲ್ಲವೆಂದು ನಾನು ಹೇಳಿದ್ದುದು.

ಶ್ರೀ ಬಿ.ಎಸ್.ಯಡಿಯೂರಪ್ಪ: ಗ್ರಾಮೀಣಾಭಿವೃದ್ಧಿ ಸಚಿವರು ನೀವು ಜಿಲ್ಲೆಯ ಶಾಸಕರಿಗೆ ಬಿಡುಗಡೆ ಮಾಡಿದ ಹಣ ಈ ರೀತಿ ಇದೆ ಎಂದು ತಿಳಿಸಬೇಕಲ್ಲಾ; ನಾವು ಮೊದಲೇ ಪತ್ರವನ್ನು ಕಳುಹಿಸಿದ್ದೇವೆ.

ಶ್ರೀ ಎಂ.ಪಿ.ಪ್ರಕಾಶ್: ಪ್ರತಿ ತಿಂಗಳೂ ಕೂಡ ಕೆಡಿಪಿ ಸಭೆಗಳಾಗುತ್ತವೆ, ಜಿಲ್ಲಾಪಂಚಾಯತ್ ಸಭೆಗಳಾಗುತ್ತವೆ. ಮಾನ್ಯ ಸದಸ್ಯರಾದ ಶ್ರೀರಾಮರೆಡ್ಡಿಯವರ ಜಿಲ್ಲೆಯಲ್ಲಿ ಹಣವಿದ್ದರೂ ಖರ್ಚು ಮಾಡದ ಅಂಥ ಜಿಲ್ಲಪಂಚಾಯತ್‌ನಲ್ಲೂ ಕೂಡ ಸ್ವಲ್ಪಮಟ್ಟಿಗೆ ಅಧಿಕಾರ ವಿಕೇಂದ್ರಿಕರಣವಾದ ಮೇಲೂ ಕೂಡ ನಾವು ಅದಕ್ಕೆ ಬೇಕಾಗಿರುವ ಕಾರ್ಯಕ್ರಮಗಳನ್ನು ಬಗ್ಗೆ ಸ್ವಲ್ಪಮಟ್ಟಿಗಾದರೂ ನಾವು ಗಮನಕೊಡಬೇಕಾಗಿರುವುದು ಇದೆ. ನಿಮ್ಮ ಕೋಲಾರ ಜಿಲ್ಲೆಯಲ್ಲಿ ಹಣವಿದ್ದಾಗಲೂ ಕೂಡ ಅಲ್ಲಿ ಖರ್ಚು ಮಾಡುವುದಕ್ಕೆ ಸಾಧ್ಯವಾಗಿಲ್ಲ, ನೀವು ಅದನ್ನು ನನಗೆ ಕೇಳಬೇಕಾಗಿತ್ತು.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಉಪಾಧ್ಯಕ್ಷರೆ, ಅದಕ್ಕೆ ನಾನು ಹೇಳಿದೆ, ಹಣ ಬಿಡುಗಡೆ ಮಾಡುತ್ತಾರೆ, ಯಾವ ಸಂದರ್ಭದಲ್ಲಿ ಹಣ ಬಿಡುಗಡೆ ಮಾಡಬೇಕು, ಯಾವ ಅವಶ್ಯಕತೆಗೆ ಬಿಡುಗಡೆ ಮಾಡಬೇಕೆನ್ನುವುದಿಲ್ಲ, ಯಾವಾಗಲೋ ಹಣಬಿಡುಗಡೆ ಮಾಡುವುದು. ಅದು ಜಾರಿಗೆ ಬರದಿರುವುದು; ಶಾಸಕರ ಜವಾಬ್ದಾರಿ ಇದ್ದರೆ ನೀವು ಹೇಳಿ.

ಶ್ರೀ ಎಂ.ಪಿ.ಪ್ರಕಾಶ್: ಶ್ರೀರಾಮರೆಡ್ಡಿಯವರೆ, ನೀವು ಹೇಳಿದ ಎಲ್ಲಾ ಮಾತುಗಳನ್ನು ನಾವು ಕೇಳಿದ್ದೇವೆ, ಉತ್ತರ ಕೊಡುವಾಗ ಸ್ವಲ್ಪ ಸೌಜನ್ಯದಿಂದ ಕುಳಿತುಕೊಂಡು ನಂತರ ಏನಾದರೂ ಆಪಾದನೆ ಇದ್ದರೆ ನಮಗೆ ಕೊಡಿ. ನಮ್ಮ ಸಂಸದೀಯ ವ್ಯವಹಾರದಲ್ಲಿ

ಉತ್ತರ ಕೊಡುವುದಕ್ಕೂ ಸಾಧ್ಯವಿಲ್ಲ, ನಿಮಿಷದಲ್ಲೇ ಉತ್ತರ ಕೊಡುತ್ತೇವೆಂದರೆ ಹೇಗೆ? ನೀವು ಹೇಳುವುದನ್ನೆಲ್ಲಾ ನಮಗೆ ಹೇಳಿಬಿಡಿ. ನಾನು ಆಮೇಲೆ ಉತ್ತರ ಕೊಡುತ್ತೇನೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಕೋಲಾರ ಜಿಲ್ಲೆಯಲ್ಲಿ ಹಣವಿದೆ ಖರ್ಚು ಮಾಡಿಲ್ಲ ಎಂದು ಹೇಳಿದರು, ಆ ರೀತಿ ಖರ್ಚು ಮಾಡದಿರುವುದಕ್ಕೆ ಶಾಸಕರೇನಾದರೂ ಜವಾಬ್ದಾರರಾಗಿದ್ದರೆ, ದಯವಿಟ್ಟು ಹೇಳಿ ನಾವು ಒಪ್ಪಿಕೊಳ್ಳುವುದಕ್ಕೆ ತಯಾರಿದ್ದೇವೆ, ನಮ್ಮನ್ನು ಪರಿಗಣನೆಗೆ ತೆಗೆದುಕೊಳ್ಳುವುದಿಲ್ಲ ಅಥವಾ ಆ ಹಣ ಬಂದಿದೆ ಎಂದು ನಮಗೆ ತಿಳಿಸುವುದೂ ಇಲ್ಲ ಮತ್ತೆ ಹಣ ಖರ್ಚು ಮಾಡದಿರುವುದಕ್ಕೆ ಅಧಿಕಾರಿಗಳು ಹೊಣೆಯೇ ಹೊರತು ನಾವು ಹೊಣೆಯೇ? ನಾವು ಜವಾಬ್ದಾರರಾಗಿದ್ದರೆ ನೀವು ಹೇಳಿ.

ಶ್ರೀ ಎಂ.ಪಿ.ಪ್ರಕಾಶ್: ನಮ್ಮ ಕಡೆ ಒಂದು ಗಾದೆ ಇದೆ, ಬಸವನೆಂದರೆ, ಪಾಪ, ಮುಂದಿನದ್ದನ್ನು ಹೇಳುವುದಕ್ಕೆ ಬಿಡುವುದಿಲ್ಲ. ನಮ್ಮ ಉತ್ತರವೇನು ಎನ್ನುವುದನ್ನು ಕೇಳಿ. ಆಡಳಿತ ಜವಾಬ್ದಾರಿ ಇಟ್ಟುಕೊಂಡಿರುವ ಸರ್ಕಾರದ ಜವಾಬ್ದಾರಿ, ಆದರೂ ಕೂಡ ತಮ್ಮದೇ ಆದ ಕರ್ತವ್ಯಗಳಿರುತ್ತವೆ, ಜಿಲ್ಲಾಪಂಚಾಯತ್‌ಗಳ ಸಭೆಗಳಿರುತ್ತವೆ. ನಿಮಗೆ ಉದಾಹರಣೆ ಹೇಳಬೇಕಾದರೆ, ನಿಮ್ಮ ಕೋಲಾರದಲ್ಲಿ ಹೆಚ್ಚುವರಿ ಅನುದಾನ ಬಿಟ್ಟು ಬಿಡುಗಡೆಯಾದ ಒಟ್ಟು ಅನುದಾನ 546,69 ಲಕ್ಷ ರೂ. ಅದರಲ್ಲಿ ವೆಚ್ಚವಾಗಿರುವುದು 380.73 ಲಕ್ಷ. ಅಂದರೆ ಕೊಳವೆ ಬಾವಿ ನೀರು ಸರಬರಾಜಿನಲ್ಲಿ, 18ರಲ್ಲಿ 3 ಮಾತ್ರವಾಗಿದೆ. 72 ಕಿರುನೀರು ಸರಬರಾಜು ಯೋಜನೆಯಲ್ಲಿ 57 ಆಗಿದೆ 130 ಕೊಳವೆಬಾವಿ ಯೋಜನೆಯಲ್ಲಿ 104 ಆಗಿದೆ. ರಿಸ್ಟ್ರಿಕ್ಟೆಡ್ ಆದ ಕೆಲವು ಕೇಂದ್ರ ಸರ್ಕಾರದ ನಾರ್ಮ್ಸ್‌ಗಳಿದ್ದಾವೆ. ಆ ನಾರ್ಮ್ಸ್ ಪ್ರಕಾರ ಮಾಡದೆ ಒತ್ತಡದ ಮೂಲಕವಾಗಿ ಕಾರ್ಯ ಪ್ರಾರಂಭ ಮಾಡುತ್ತಾರೆ, ಖರ್ಚು ಮಾಡುವುದಕ್ಕಾಗುವುದಿಲ್ಲ. ಈ ರೀತಿಯಾದ ಕೆಲವು ದೌರ್ಬಲ್ಯಗಳು ಕೂಡ ತಮ್ಮ ಜಿಲ್ಲೆಯಲ್ಲೂ ಇದ್ದಾವೆವೆನ್ನುವ ಮಾತು. ಅದು ಬರೀ ಒಂದು ಜಿಲ್ಲೆಯದಲ್ಲ, ಅದು ಬಳ್ಳಾರಿ ಜಿಲ್ಲೆಯಲ್ಲೂ ಇದೆ, ಇನ್ನೊಂದು ಜಿಲ್ಲೆಯಲ್ಲೂ ಕೂಡ ಇದೆ. ಆದರೆ ನಮ್ಮ ಎಲ್ಲಾ ಕರ್ತವ್ಯಗಳನ್ನು ವಿಕೇಂದ್ರಿಕರಣ ವ್ಯವಸ್ಥೆಯಲ್ಲಿ ಅವರ ಕೈಗೆ ಅಧಿಕಾರವನ್ನು ಕೊಟ್ಟಾಗ, ನಾವು ಇಲ್ಲಿ ಆಡಳಿತದಲ್ಲಿ ಕೈತೊಳೆದುಕೊಳ್ಳಬೇಕೆನ್ನುವ ಮಾತಲ್ಲ. ಈ ವಿಚಾರದ ಬಗ್ಗೆ ಹಣದ ಕೊರತೆ ಒಂದು ಎಳ್ಳುಕಾಳಿನಷ್ಟು ಕೂಡ ಇಲ್ಲ. ಎಷ್ಟೆ ಖರ್ಚು ಮಾಡಿದರೂ ಕೂಡ ಕುಡಿಯುವ ನೀರಿಗೆ ಆದ್ಯತೆ ಕೊಡಬೇಕೆಂದು ನಮ್ಮ ಮುಖ್ಯಮಂತ್ರಿಗಳು, ಹಣಕಾಸಿನ ಸಚಿವರು ಆಯಾಯ ಸಂದರ್ಭಕ್ಕೆ ಅನುಗುಣವಾಗಿ ಹಣವನ್ನು ಬಿಡುಗಡೆ ಮಾಡಿದ್ದಾರೆ. ಆದರೆ ಇಲ್ಲಿರುವುದು, ನಮ್ಮ ಕೆಲಸ ಮಾಡುವುದರಲ್ಲಿ ಎಷ್ಟು ಗರಿಷ್ಟ ಮಾಡಬೇಕಾಗಿತ್ತೋ ಅಷ್ಟಾಗಿದೆ. ಆದರೆ ಈ ವರ್ಷದಲ್ಲಿ ಪ್ರಕೃತಿ ವಿಕೋಪವಾದ್ದರಿಂದ, ಕೆರೆ ಕೊಳ್ಳಗಳೆಲ್ಲಾ ಬತ್ತಿಹೋಗಿವೆ, ಜಲಮೂಲಗಳೆಲ್ಲಾ ತೊಂದರೆಯಲ್ಲಿದ್ದಾವೆ, ನಾವು ಜಲಮೂಲಗಳಿಂದ ನೀರನ್ನು ತರಬೇಕೆನ್ನುವ ಪ್ರಯತ್ನ ಆಗುತ್ತಿಲ್ಲ. ಅದು ಒಂದೇ ಸಾರಿ

ತಕ್ಷಣ ಆಗಬೇಕಾಗಿರಬೇಕಾದಂಥದ್ದಿದೆ. ನಾನು ಈಗಾಗಲೇ ತಮ್ಮಲ್ಲಿ ಅರಿಕೆ ಮಾಡಿಕೊಂಡಂತೆ ಅನೇಕ ಕಾರಣಗಳು ನೀರಿನ ಬರಕ್ಕೆ ಕಾರಣಿಭೂತವಾಗಿದೆ, ಬರಿ ಕೊಳವೆಬಾವಿಗಳನ್ನು ದುರಸ್ತಿ ಮಾಡಿಲ್ಲ, ಕೊಳವೆಬಾವಿಗಳನ್ನು ಮಾಡಿಲ್ಲ ಎನ್ನುವುದಕ್ಕಿಂತ ಹೆಚ್ಚಾಗಿ ನಾಗರಿಕ ಪ್ರಪಂಚಕ್ಕೆ ಅನುಗುಣವಾಗಿ ಬಳಕೆಯ ಪ್ರಮಾಣ ಹೆಚ್ಚಾಗಿರತಕ್ಕಂಥದ್ದು, ಅಂತರ್ಜಲ ನೀರಾವರಿಗಾಗಿ ಹೆಚ್ಚಿನ ಪ್ರಮಾಣದಲ್ಲಿ ಬಳಕೆಯಾಗಿರತಕ್ಕಂಥದ್ದು, ಇದು ದುರ್ಬಳಕೆಯ ಮಟ್ಟವನ್ನೂ ಕೂಡ ಮುಟ್ಟಿರುವುದು ಈ ಎಲ್ಲಾ ಕಾರಣಗಳೂ ಕೂಡ ನಮ್ಮ ಅಂತರ್ಜಲದ ಬಗ್ಗೆ ಹಾಹಾಕಾರ ಹಾಗೂ ಉಲ್ಬಣಗೊಳ್ಳುವ ಪರಿಸ್ಥಿತಿಯನ್ನು ಉಂಟು ಮಾಡಿದೆ. ಈ ಎಲ್ಲಾ ಕಾರಣಗಳೂ ನಮ್ಮ ಅಂತರ್‌ಜಲದ ಬಗ್ಗೆ ಸ್ವಲ್ಪಮಟ್ಟಿನ ಹಾಹಾಕಾರ ಉಂಟಾಗತಕ್ಕ ಸ್ಥಿತಿ ಉಂಟಾಗಿದೆ. ಇದು ಸಾಧಾರಣವಾಗಿ ಏಪ್ರಿಲ್, ಮೇ, ಜೂನ್ ತಿಂಗಳವರೆಗೆ ಮುಂದುವರೆಯುತ್ತದೆ. ಮಾನ್ಯ ವಾಟಾಳ್‌ನಾಗರಾಜ್‌ರವರು ಹೇಳಿದಂತೆ ಅನೇಕ ಕೊಳವೆ ಬಾವಿಗಳನ್ನು ತೆಗೆಯುವುದರಿಂದ ಈ ಸಮಸ್ಯೆ ಬಗೆಹರಿಯುವುದಿಲ್ಲ. ಆದ್ದರಿಂದ 25 ಪರ್‌ಸೆಂಟ್‌ಗಿಂತ ಹೆಚ್ಚು ಹಣವನ್ನು ಹೊಸ ಬಾವಿಗಳನ್ನು ಕೊರೆಯಲು ಉಪಯೋಗ ಮಾಡಬೇಡಿ, ಎಲ್ಲೆಲ್ಲಿ ಸಾಧ್ಯವೋ ಅಲ್ಲಿ ಆದಷ್ಟು ಅಂತರ್‌ಜಲವನ್ನು ಹೆಚ್ಚು ಮಾಡತಕ್ಕ ಜಲಾನಯನ ಪ್ರದೇಶವನ್ನು ಅಭಿವೃದ್ಧಿಪಡಿಸಿ, ಅದನ್ನು ಪುನಶ್ಚೇತನ ಮಾಡತಕ್ಕ ಕೆಲಸ ಮಾಡಿ, ಇದಕ್ಕಾಗಿ ಹೆಚ್ಚು ಹಣವನ್ನು ಬಳಕೆ ಮಾಡಿ ಎಂದು ಸುತ್ತೋಲೆಯನ್ನು ಕಳುಹಿಸಿಕೊಟ್ಟಿದ್ದೇವೆ. ಸುತ್ತೋಲೆ ಕಳುಹಿಸಿದ ಕೂಡಲೇ ಸರ್ಕಾರದ ಕೆಲಸವಿಲ್ಲವೆಂಬುದನ್ನು ನಾನು ಒಪ್ಪಿಕೊಳ್ಳುವುದಿಲ್ಲ. ಇದರ ಬಗ್ಗೆ ಮೊನ್ನೆ ಮುಖ್ಯಮಂತ್ರಿಯವರು ಗುಲ್ಬರ್ಗಾ ವಿಭಾಗದ ಕಂದಾಯವಿಭಾಗದಲ್ಲಿ ಚರ್ಚೆ ಮಾಡಿದ್ದಾರೆ. ಅದೇ ರೀತಿ ಬೇರೆ ಬೇರೆ ಕಂದಾಯ ವಿಭಾಗದಲ್ಲೂ ಚರ್ಚೆ ಮಾಡಲಿದ್ದಾರೆ. ಸದನವನ್ನು ಒಂದು ತಿಂಗಳ ಅವಧಿಯವರೆಗೆ ಕರೆದಿದ್ದರಿಂದ ನಾನು ಬೇರೆ ಕಡೆಗೆ ಹೋಗಲು ಆಗಲಿಲ್ಲ. ಬೇಡಿಕೆಯ ಬಗ್ಗೆ ಚರ್ಚೆಯಾದ ಮೇಲೆ ಮುಖ್ಯಮಂತ್ರಿಯವರ ಒಪ್ಪಿಗೆಯನ್ನು ಪಡೆದು, ತಾವೂ ಒಪ್ಪಿಕೊಳ್ಳುವುದಿದ್ದರೆ ಪ್ರತಿ ತಾಲ್ಲೂಕಿಗೆ, ಜಿಲ್ಲೆಗೆ ಹೋಗತಕ್ಕ ಕಾರ್ಯಕ್ರಮವನ್ನು ನಾನು ಹಾಕಿಕೊಳ್ಳುತ್ತೇನೆ. ಇದಲ್ಲದೆ ನಮ್ಮ ಮುಖ್ಯಕಾರ್ಯದರ್ಶಿಯವರು ಗಣಿ ಭೂಗರ್ಭ ಇಲಾಖೆಯಲ್ಲಿರುವ ಅಪರಕಾರ್ಯದರ್ಶಿಯವರು, ಪಿ.ಹೆಚ್.ಯು. ವಿಭಾಗದ ಇಂಜಿನಿಯರಿಂಗ್ ಚೀಫ್‌ರವರನ್ನೊಳಗೊಂಡ ನಿಯೋಗವನ್ನು ಕರೆದುಕೊಂಡು ರಾಯಚೂರು, ಬಳ್ಳಾರಿ ಜಿಲ್ಲೆಗಳಿಗೆ ಹೋಗಿ ಬಂದಿದ್ದಾರೆ. ಅಲ್ಲಿಯ ಸಮಸ್ಯೆಗಳನ್ನು ತತ್‌ಕ್ಷಣವೇ ಬಗೆಹರಿಸಿದ್ದಾರೆ. ಪ್ರಕೃತಿ ವಿಕೋಪ ನಿಧಿಯಿಂದ ಸಹ ಹೊಸ ರಿಗ್‌ಗಳನ್ನು ಕೊಳ್ಳಲು ನಮಗೆ ಅವಕಾಶ ಕೊಟ್ಟಿದ್ದಾರೆ. ನೀರಿನ ಸಮಸ್ಯೆ ಇಲ್ಲವೆನ್ನತಕ್ಕದನ್ನು ನಾನು ಒಪ್ಪಿಕೊಳ್ಳುವುದಿಲ್ಲ. ಆ ಸ್ಥಿತಿ ಇದ್ದರೂ ಸರ್ಕಾರ ತನ್ನೆಲ್ಲಾ ಪ್ರಯತ್ನಗಳಿಂದ ಸಮಸ್ಯೆಯ ಪರಿಹಾರದ ನಿಟ್ಟಿನಲ್ಲಿ ಕೆಲಸ ಮಾಡುತ್ತಿದೆ. ಬೇಡಿಕೆಯ ಬಗ್ಗೆ ಇಂದು ಸಂಜೆ ಚರ್ಚೆ ಮಾಡುವಾಗ ಇದರ ಬಗ್ಗೆ ಎಲ್ಲಾ ಅಂಕಿಅಂಶಗಳನ್ನು ಸದನದ ಮುಂದೆ ಇಡುತ್ತೇನೆ.

ಮಾಡಿದಂಥ ಪ್ರಯತ್ನಗಳ ಬಗ್ಗೆ ಸಹ ಹೇಳುತ್ತೇನೆ. ಹಿಂದಿನ ದಿನಗಳಿಗೂ ಇಂದಿಗೂ ಆಗಿರುವ ವ್ಯತ್ಯಾಸದ ಬಗ್ಗೆ ಮತ್ತು ಆಗಿರುವ ಪರಿಣಾಮದ ಬಗ್ಗೆ ಮನರಿಕೆ ಮಾಡಿಕೊಡುತ್ತೇನೆ. ಸಧ್ಯಕ್ಕೆ ಇಷ್ಟನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು): ಮಾನ್ಯ ಉಪಾಧ್ಯಕ್ಷರೆ, ಅವರೇನು ಅಂಕಿಅಂಶವನ್ನು ಅಧಿಕೃತವಾಗಿ ಒದಗಿಸಿದ್ದಾರೋ ಅದರ ಪ್ರಕಾರವೇ ಸ್ಟೇಟ್ ಸೆಕ್ಟಾರ್‌ನಲ್ಲಿ 38 ಕೋಟಿ, ಸೆಂಟ್ರಲ್ ಸೆಕ್ಟಾರ್‌ನಲ್ಲಿ 73 ಕೋಟಿ, ಜಿಲ್ಲಾಧಿಕಾರಿಗಳ ಹತ್ತಿರ 25 ಕೋಟಿ, 15ನೇ ತಾರೀಖು 36 ಕೋಟಿ ಈ ರೀತಿ ಒಟ್ಟಾರೆ 173 ಕೋಟಿ ಹಣ ಇದ್ದರೂ ಕೂಡ ನೀರನ್ನು ಕೊಡುವುದರಲ್ಲಿ ಸರ್ಕಾರ ಇಂದು ಸಂಪೂರ್ಣವಾಗಿ ವಿಫಲವಾಗಿದೆ. ಅವರು ಅಷ್ಟು ಮಾಡಿದ್ದೇವೆ, ಇಷ್ಟು ಮಾಡಿದ್ದೇವೆಂದು ಹೇಳಬಹುದು. ಇವತ್ತು 173 ಕೋಟಿ ಉಳಿತಾಯವಾಗಬೇಕೆಂದರೆ ಜಿಲ್ಲಾಪರಿಷತ್‌ನವರು, ಜಿಲ್ಲಾಧಿಕಾರಿಯವರು, ಇಂಜಿನಿಯರ್‌ಗಳು ಎಷ್ಟರಮಟ್ಟಿಗೆ ಕೆಲಸ ಮಾಡಿದ್ದಾರೆ ಎಂಬ ಬಗ್ಗೆ ಹೇಳಬೇಕು. ನೀವು ಹಣವನ್ನು ಬಿಡುಗಡೆ ಮಾಡಿರಬಹುದು, ತಾವು ಮಾರ್ಚ್ 15 ರಂದು ಏನು ಲೆಕ್ಕವನ್ನು ಕೊಟ್ಟಿದ್ದೀರಿ ಅದರ ದಾಖಲೆ ಸಹ ನನ್ನ ಹತ್ತಿರ ಇದೆ. ಪ್ರತಿಯೊಂದು ಹಳ್ಳಿಯಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸುವಲ್ಲಿ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ. ಆದ್ದರಿಂದ ನಾವು ಇದನ್ನು ಪ್ರತಿಭಟಿಸುತ್ತೇವೆ. ಇವರು ಇಷ್ಟೊಂದು ಹಣವನ್ನು ಇಟ್ಟುಕೊಂಡಿದ್ದರೂ ಜನರಿಗೆ ನೀರನ್ನು ಒದಗಿಸುತ್ತಿಲ್ಲ, ಸರ್ಕಾರ ಸಂಪೂರ್ಣವಾದ ಜವಾಬ್ದಾರಿಯನ್ನು ಹೊತ್ತುಕೊಳ್ಳಬೇಕಾಗುತ್ತದೆ. ಸರ್ಕಾರದ ಧೋರಣೆಯ ವಿರುದ್ಧ ನಾವು ಸಭೆಯಿಂದ ನಿರ್ಗಮಿಸುತ್ತಿದ್ದೇವೆ.

(ಕಾಂಗ್ರೆಸ್ ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ): ಮಾನ್ಯ ಉಪಾಧ್ಯಕ್ಷರೆ, ನಾವೇನು ಇಲ್ಲಿ ಚರ್ಚೆ ಮಾಡುತ್ತಿದ್ದೇವೆ ಇದರ ಬಗ್ಗೆ ಪ್ರಜಾವಾಣಿ ಮತ್ತು ಇತರೆ ಪತ್ರಿಕೆಗಳವರು ಅಗ್ರವಾದ ಲೇಖನವನ್ನು ಪ್ರಕಟ ಮಾಡಿದ್ದಾರೆ. ಟ್ಯಾಂಕರ್‌ನಲ್ಲಿ ನೀರು ಕೊಟ್ಟರೆ ಈ ಸಮಸ್ಯೆ ಪರಿಹಾರವಾಗುವುದಿಲ್ಲ. ನಡೆಯುತ್ತಿರುವ ಕೆಲಸವು ಪೂರ್ಣವಾಗುವುದರ ಕಡೆ ವಿಶೇಷವಾದ ಗಮನವನ್ನು ಕೊಡಲಿಲ್ಲ. ಜಿಲ್ಲಾಧಿಕಾರಿಯವರ ಬಳಿ ಹಣವಿದೆ, ಶಾಸಕರುಗಳು ಹೋಗಿ ಅನೇಕ ಸಲ ಅವರನ್ನು ಭೇಟಿ ಮಾಡಿ ಸಮಸ್ಯೆ ಈ ರೀತಿ ಇದೆಯೆಂದರೆ, ಅವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ ಕೆಲಸ ಮಾಡುವುದಿಲ್ಲ. ಜಿಲ್ಲಾ ಸಚಿವರು ನಮ್ಮ ಜೊತೆ ಕುಳಿತು ತಾತ್ಕಾಲಿಕವಾಗಿಯಾದರೂ ಸಮಸ್ಯೆ ಪರಿಹಾರ ಮಾಡುವ ಪ್ರಯತ್ನ ಮಾಡುವುದಿಲ್ಲ. ಜನರಿಗೆ, ಜಾನುವಾರುಗಳಿಗೆ ಕುಡಿಯುಲು ನೀರಿಲ್ಲ. ಇಂಥ ಸ್ಥಿತಿಯಲ್ಲಿ ನಾವು ಇಲ್ಲಿ ಕುಳಿತುಕೊಂಡರೆ ಜನರು ನಮಗೇನು ಹೇಳಿಯಾರು? ಹಣವಿದ್ದರೂ ಕೆಲಸ ಮಾಡುವ ಪ್ರಾಮಾಣಿಕವಾದ ಪ್ರಯತ್ನ

ಮಾಡದಿದ್ದರೆ, ನೀರಿನ ಹಾಹಾಕಾರವಿದ್ದರೂ ಸರ್ಕಾರ ಕ್ರಮತೆಗೆದುಕೊಳ್ಳುದಿರುವುದನ್ನು ಪ್ರತಿಭಟಿಸಿ ನಾವೂ ಸಭಾತ್ಯಾಗ ಮಾಡುತ್ತಿದ್ದೇವೆ.

(ಬಿ.ಜೆ.ಪಿ.ಶಾಸಕರು ಸಭಾತ್ಯಾಗ ಮಾಡಿದರು)

ಶ್ರೀ ವಾಟಾಳ್‌ನಾಗರಾಜ್ (ಚಾಮರಾಜನಗರ): ನಮಗೆ ಅವರ ಮೇಲೆ ವೈಯಕ್ತಿಕವಾಗಿ ದ್ವೇಷವೇನಿಲ್ಲ. ವಸ್ತು ಸ್ಥಿತಿ ಸರಿಯಾಗಿಲ್ಲ, ಕುಡಿಯುವ ನೀರಿನ ಕಥೆ ಕಣ್ಣೀರಿನ ಕಥೆಯಾಗಿದೆ. ಸರ್ಕಾರದ ಈ ಧೋರಣೆಯನ್ನು ವಿರೋಧಿಸಿ ನಾನು ಸಭಾತ್ಯಾಗ ಮಾಡುತ್ತಿದ್ದೇವೆ.

(ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

ಶ್ರೀ ಕೆ.ಎಸ್.ಪುಟ್ಟಣಯ್ಯ (ಪಾಂಡವಪುರ): ಮಾನ್ಯ ಉಪಾಧ್ಯಕ್ಷರೆ, ಕುಡಿಯುವ ನೀರಿನ ಸಮಸ್ಯೆಯ ನಿರ್ಮೂಲನೆಗಾಗಿ ಇಷ್ಟೊಂದು ಹಣವನ್ನು ಖರ್ಚು ಮಾಡಿ ಸಮರೋಪಾದಿಯಲ್ಲಿ ಕೆಲಸ ಮಾಡುತ್ತಿದ್ದೇವೆಂದು ತಾವು ಹೇಳುತ್ತೀರಿ. ಆದರೆ ನಮ್ಮ ಮಂಡ್ಯ ಜಿಲ್ಲೆಯಲ್ಲಿ,

ಉಪಾಧ್ಯಕ್ಷರು: ತಾವು ಮತ್ತೆ ಅದನ್ನೇ ಹೇಳುತ್ತೀರಲ್ಲಾ. ಈಗ ನಿಲುವಳಿ ಸೂಚನೆಯನ್ನು ನಿರಕಾರಿಸಲಾಗಿದೆ, ತಾವು ದಯಮಾಡಿ ಕುಳಿತುಕೊಳ್ಳಬೇಕು.

ಶ್ರೀ ಕೆ.ಎಸ್.ಪುಟ್ಟಣಯ್ಯ: ನಮ್ಮ ಜಿಲ್ಲೆಯಲ್ಲಿ ಮಿನಿವಾಟರ್ ಸಪ್ಲೈಯಲ್ಲಿ 104 ಓವರ್ ಹೆಡ್ ಟ್ಯಾಂಕ್‌ಗಳ ಕೆಲಸ ಮುಗಿದು ಆರು ತಿಂಗಳುಗಳಾಗಿದೆ. ಆದರೆ ಕೆ.ಇ.ಬಿ.ನವರು ಅದಕ್ಕೆ ವಿದ್ಯುತ್ ಸಂಪರ್ಕ ಕೊಟ್ಟಿಲ್ಲ. ಇಲ್ಲಿ ಕೆ.ಇ.ಬಿ.ನವರು ಮತ್ತು ಜಿಲ್ಲಾಪರಿಷತ್‌ನವರು ಜಂಟಿಯಾಗಿ ಕೆಲಸ ಮಾಡಬೇಕಾಗುತ್ತದೆ. ಇಲ್ಲಿ ಆಡಳಿತಾತ್ಮಕವಾದ ಅನಾನುಕೂಲತೆಗಳಿಂದಾಗಿ ಕುಡಿಯುವ ನೀರಿನ ಸಮಸ್ಯೆ ಜಾಸ್ತಿಯಾಗಿದೆ. ಕೆ.ಇ.ಬಿ ಒಂದು ಮಂಡಳಿ ಜಿಲ್ಲಾಪರಿಷತ್ ಸರ್ಕಾರ, ಎರಡೂ ಸರ್ಕಾರವೇ, ಆ ಎರಡೂ ಇಲಾಖೆಯವರು ತಮ್ಮ ಜವಾಬ್ದಾರಿಯನ್ನು ನಿರ್ವಹಿಸುವಲ್ಲಿ ವಿಫಲರಾಗಿದ್ದಾರೆ. ಆದ್ದರಿಂದ ತಾವು ಕಾನೂನಿನಲ್ಲಿ ಸರಳೀಕರಣ ಮಾಡಿ ಆ ಎರಡೂ ಇಲಾಖೆಯವರು ಜಂಟಿಯಾಗಿ ಕೆಲಸ ನಿರ್ವಹಿಸುವಂತೆ ಮಾಡಬೇಕಾಗಿ ವಿನಂತಿಸುತ್ತೇನೆ.

ಶ್ರೀ ಎಂ.ಪಿ.ಪ್ರಕಾಶ್: ಈ ವಿಚಾರದಲ್ಲೂ ನಾವು ಈಗಾಗಲೇ ನಿರ್ದೇಶನವನ್ನು ಕೊಟ್ಟಿದ್ದೇವೆ. ಪ್ರತಿಯೊಂದು ಜಿಲ್ಲೆಗೆ ಹೋಗಿ ಸಮೀಕ್ಷೆ ಮಾಡಿದಂಥ ಸಂದರ್ಭದಲ್ಲಿ ಕೆ.ಇ.ಬಿ.ಯವರು ಕುಡಿಯುವ ನೀರಿಗೆ ಸಂಪರ್ಕವನ್ನು ಕೊಡುವಲ್ಲಿ ಆದ್ಯತೆಯನ್ನು ಕೊಡಬೇಕೆಂದು ಸೂಚಿಸಿದ್ದೇವೆ. ಇದಲ್ಲದೆ ಮತ್ತೆ ಸಭೆಯನ್ನು ಕರೆದು ಜಿಲ್ಲೆಗಳಲ್ಲಿ ಯಾವ ರೀತಿಯಾದ ತೊಂದರೆಗಳಾಗಿದೆ, ಸಾಮಗ್ರಿಗಳನ್ನು ಒದಗಿಸುವಲ್ಲಿ ಯಾವ ರೀತಿ

ತೊಂದರೆಯಾಗಿದೆ, ಕೆಲವು ಸಂದರ್ಭದಲ್ಲಿ ಕೆ.ಇ.ಬಿ.ನವರಿಗೆ ಕಂಪ್ಲೀಷನ್ ರಿಪೋರ್ಟ್ ಕೊಟ್ಟಿಲ್ಲವೆಂದು ನಿಲ್ಲಿಸಿರುತ್ತಾರೆ, ಆದ್ದರಿಂದ ಒಂದಕ್ಕೊಂದು ಕೋಆರ್ಡಿನೇಷನ್ ಆಗಬೇಕು ಎಂಬ ಕಾರಣಕ್ಕಾಗಿ ಪ್ರತಿ ಜಿಲ್ಲೆಯಲ್ಲಿ ರಿವ್ಯೂ ಸಭೆಗಳನ್ನು ಮಾಡಿದಾಗ ಅವರಿಗೆ ಸ್ಪಷ್ಟವಾಗಿ ನಿರ್ದೇಶನ ಕೊಟ್ಟಿದ್ದೇವೆ. ಇಷ್ಟಾದರೂ ಸಹ ಕೆಲವು ಜಿಲ್ಲೆಗಳಲ್ಲಿ ಆಗಿಲ್ಲ. ಆದರೂ ಪ್ರತಿ ಜಿಲ್ಲೆಗೆ ನಾನು ಹೋಗಿ ಆ ಕೆಲಸವನ್ನು ಮಾಡಲು ಪ್ರಯತ್ನ ಮಾಡುತ್ತೇನೆ. ಪ್ರಚಾರಕ್ಕಾಗಿಯೇ ನಾವು ವಾಕ್‌ಔಟ್ ಮಾಡುತ್ತೇವೆ ಎಂಬ ಬಗ್ಗೆ ನಾನು ಏನನ್ನೂ ಹೇಳಲಾರೆ.

1.20 ಪಿ.ಎಂ

ವಾಕ್ ಔಟ್ ಮಾಡುವುದರಿಂದಲೇ ಪ್ರಚಾರಕ್ಕಾಗಿ ಈ ಸಮಸ್ಯೆ ಎತ್ತಿದ್ದೇವೆ ಎಂದರೆ ಅರ್ಥವಿಲ್ಲ. ಇತಿಹಾಸದ ಸಮಗ್ರ ಚಿತ್ರವನ್ನು ಬೇಡಿಕೆ ಸಂದರ್ಭದಲ್ಲಿ ಇಡಬಹುದಾಗಿತ್ತು. ಅವರು ಹೇಳಿದ್ದು ಎಲ್ಲಾ ಹೇಳಿ, ಕೇಳುವುದಕ್ಕೆ ತಯಾರಿಲ್ಲದಿದ್ದರೆ, ವಾಕ್ ಔಟ್ ಮಾಡಿದ್ದೇವೆ ಎನ್ನುವುದು ಅಂದರೆ, ಪತ್ರಿಕೆಗಳಲ್ಲಿ ಆ ವಿಚಾರ ಪ್ರಸ್ತಾಪವಾಗಿ ವಿರೋಧ ಪಕ್ಷಗಳು ಇದರ ಬಗ್ಗೆ ಹೆಚ್ಚು ಹೋರಾಟ ಮಾಡಿದರು ಎಂದು ಬರೆಸಿಕೊಳ್ಳುವುದೇ ಉದ್ದೇಶವಾಗಿದ್ದರೆ, ಅದಕ್ಕೆ ನಮ್ಮ ಉತ್ತರ ಏನೂ ಇಲ್ಲ. ಅವರು ಅದೇ ಕಾರಣಕ್ಕಾಗಿ ಎತ್ತಿದ್ದಾರೆಂದು ನಾನು ಹೇಳುವುದಿಲ್ಲ. ಆದರೆ ಪಕ್ಷಾತೀತವಾಗಿ ಇದು ಚರ್ಚೆ ಮಾಡಬೇಕಾಗಿರುವುದು.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಕೆಇಬಿ ಗುತ್ತಿಗೆದಾರರು ಚಳುವಳಿ ಮಾಡುತ್ತಿದ್ದಾರೆ.

ವಿಷಯ: ಬಾಗಲಕೋಟೆಯಲ್ಲಿ ಪರಿಹಾರಕ್ಕಾಗಿ ಶಾಸಕರು ಹಾಗೂ ಇತರರಿಂದ ಸತ್ಯಾಗ್ರಹ:

+ ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಉಪಾಧ್ಯಕ್ಷರೆ, ಕೃಷ್ಣ ಬೇಸಿನ್‌ನಲ್ಲಿ ಇರುವಂತಹ ಸಂತ್ರಸ್ತರು ವಿಶೇಷವಾಗಿ ಬಾಗಲಕೋಟೆಯಲ್ಲಿ ಇರತಕ್ಕಂತಹವರು 15ನೇ ತಾರೀಖಿನಿಂದ ಸತ್ಯಾಗ್ರಹ ಪ್ರಾರಂಭ ಮಾಡಿದ್ದಾರೆ. ಅಲ್ಲಿ ಅತ್ಯಂತ ಪ್ರಮುಖವಾಗಿರತಕ್ಕಂತಹ ಹಾಲಿ ಶಾಸಕರಾದ ಬಿ.ಎಸ್.ಪಾಟೀಲ್ ಮನಗೋಳಿ ಮತ್ತು ಶ್ರೀ ಜೆ.ಟಿ.ಪಾಟೀಲ್ ಇವರೆಲ್ಲಾ ಆಮರಣಾಂತ ಉಪವಾಸ ಮಾಡಬೇಕೆಂದು ಚಿಂತನೆಯಲ್ಲಿದ್ದಾರೆ. ಸತ್ಯಾಗ್ರಹ ಮುಂದುವರೆದಿದೆ. ಇಂತಹ ವಿಶೇಷವಾದ ಸಂದರ್ಭದಲ್ಲಿ ಆ ಸಂಬಂಧಪಟ್ಟಂತಹ ಅಧ್ಯಕ್ಷರು, ಸಮಿತಿ ಸದಸ್ಯರು ಎಲ್ಲರೂ ಬಂದು ನಮ್ಮ ನೀರಾವರಿ ಸಚಿವರಿಗೆ ಭೇಟಿ ಮಾಡಿದ್ದಾರೆ. ಅವರು ಕೆಲವು ಕ್ರಮ ತೆಗೆದುಕೊಳ್ಳುತ್ತೇವೆಂದು ಸಾಂತ್ವನದ ಮಾತನ್ನು ಹೇಳಿದ್ದಾರೆ. ಈ ಸಂತ್ರಸ್ತರಿಗೆ ಅನೇಕ ಅನುಕೂಲ ಮಾಡಿಕೊಡುವಂತಹ ಪ್ರಾಮಣಿಕ ಪ್ರಯತ್ನ ಈ ಸರ್ಕಾರ ಮಾಡುತ್ತಿದೆ ಇಲ್ಲವೆಂದು ನಾನು ಹೇಳುವುದಿಲ್ಲ. ಆದರೆ ಫಲವತ್ತಾದ ಜಮೀನನ್ನು ಕಳೆದುಕೊಂಡವರಿಗೆ ಮನೆ ಮಠಗಳನ್ನು ಕಳೆದುಕೊಂಡವರಿಗೆ ಸರ್ಕಾರ